

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 16 ಬುಧವಾರ 2022

ಸಂಪುಟ: 43 | ಸಂಚಿಕೆ: 209 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಅನಧಿಕೃತ ನಿರ್ಮಾಣದ ವಿರುದ್ಧ ಕಾನೂನು ಹೋರಾಟ ನಡೆಸುತ್ತಲೇ ಹತ್ಯೆಯಾದ ನಿವೃತ್ತ ಐಬಿ ಅಧಿಕಾರಿ ಕುಲಕರ್ಣಿ ಪ್ರಕರಣದ ಬೆನ್ನಲ್ಲೇ

ಮೈಸೂರಲ್ಲಿ ಮತ್ತೆ ಅಕ್ರಮ ನಿರ್ಮಾಣದ ಸದ್ದು

ಪಾಲಿಕೆ, ಪೊಲೀಸರ ಅಸಹಕಾರದಿಂದ ನಲುಗಿರುವ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಡಾ.ಸಿ.ಕೃಷ್ಣ ಕುಟುಂಬ

● ಸರಸ್ವತಿಪುರಂನ ವಸತಿ ಪ್ರದೇಶದಲ್ಲಿ ನಕ್ಷೆ ಉಲ್ಲಂಘಿಸಿ ವಾಣಿಜ್ಯ ಕಟ್ಟಡ ನಿರ್ಮಿಸುತ್ತಿರುವ ಆರೋಪ ● ಪಾಲಿಕೆಗೆ ದೂರು ನೀಡಿದರೆ ನೋಟಿಸ್ 'ಶಾಸ್ತ್ರ' ಮುಗಿಸಿದರು ; ಅದನ್ನು ಹಿಡಿದು ಕೋರ್ಟ್‌ಗೆ ಹೋಗಲು ಅನುಕೂಲವಾಯ್ತು ● ಆದರೆ ಕೋರ್ಟ್‌ಗೆ ಪಾಲಿಕೆ ಕಡೆಯಿಂದ ಯಾರೂ ಹಾಜರಾಗಿಲ್ಲ ; ಪಕ್ಕದ ಮನೆಯವರ ಬೆದರಿಕೆ ಬಗ್ಗೆ ದೂರು ನೀಡಿದರೆ ಪೊಲೀಸರು 'ಎನ್‌ಸಿಆರ್' ಕೊಟ್ಟು ಕಳುಹಿಸಿದರು

ಮೈಸೂರು,ನ.15(ಪಿಎಂ)– ನೆರೆಮನೆ ಮಾಲೀಕರ ಅನಧಿಕೃತ ನಿರ್ಮಾಣ ಪ್ರಶ್ನಿಸಿದ ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಹತ್ಯೆ ನಡೆದ ಬೆನ್ನಲ್ಲೇ ಮತ್ತೊಂದು ಅಕ್ರಮ ನಿರ್ಮಾಣದ ಆರೋಪ ಕೇಳಿ ಬರುವ ಮೂಲಕ ಮೈಸೂರು ಮಹಾನಗರ ಪಾಲಿಕೆ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ.

ಮೈಸೂರಿನ ಸರಸ್ವತಿಪುರಂನ 1ನೇ ಮುಖ್ಯ ರಸ್ತೆಯ ವಸತಿ ನಿವೇಶನದಲ್ಲಿ (ವಸತಿ ಬಡಾವಣೆ) ವಾಣಿಜ್ಯ ಕಟ್ಟಡ ನಿರ್ಮಿಸುತ್ತಿದ್ದು, ಈ ಸಂಬಂಧ ಪಾಲಿಕೆ ಅಧಿಕಾರಿಗಳು ಯಾವುದೇ ದಾಖಲೆಗಳನ್ನು ಕೋರ್ಟ್‌ಗೆ ಸಲ್ಲಿಸದೇ ನಿರ್ಲಕ್ಷ್ಯ ತಾಳಿದ್ದಾರೆ ಎಂದು ಸದರಿ ನಿವೇಶನದ ನೆರೆಮನೆ ನಿವಾಸಿಯೂ ಆದ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಡಾ.ಸಿ.ಕೃಷ್ಣ ಆರೋಪಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಡಾ.ಸಿ.ಕೃಷ್ಣ, ನನ್ನ ಮನೆಯ ಪಕ್ಕದ ನಿವೇಶನದಲ್ಲಿ ನಕ್ಷೆಗೆ ವಿರುದ್ಧವಾಗಿ ವಾಣಿಜ್ಯ ಕಟ್ಟಡ ನಿರ್ಮಿಸುತ್ತಿರುವ ಬಗ್ಗೆ ಪಾಲಿಕೆಯ ಆಯುಕ್ತರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಪಾಲಿಕೆಯಿಂದ ಒಟ್ಟಾರೆ 3 ನೋಟೀಸ್‌ಗಳನ್ನು ಜಾರಿ ಮಾಡಲಾಗಿದೆ. ಈ ಸಂಬಂಧ ಪಕ್ಕದ ನಿವೇಶನದ ಮಾಲೀಕರು ಕೋರ್ಟ್‌ಗೆ ಹೋಗಿದ್ದು,



ಪಾಲಿಕೆಯ ಪರವಾಗಿ ಕೋರ್ಟ್‌ಗೆ ಯಾರೊಬ್ಬರು ಹಾಜರಾಗದೇ ಇರುವುದು ಕಟ್ಟಡದ ಮಾಲೀಕನ ಹಣದ ಆಮಿಷಕ್ಕೆ ಒಳಗಾಗಿರುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ ಎಂದು ದೂರಿದರು. ಸರಸ್ವತಿಪುರಂನ 1ನೇ ಮುಖ್ಯ ರಸ್ತೆಯ 5ನೇ ಕ್ರಾಸ್‌ನ ನಿವೇಶನದಲ್ಲಿ (ನಂ.2961/52, ಸಿ.ಹೆಚ್.28) ಅದರ ಮಾಲೀಕ ಎನ್.ಕುಮಾರ್ ಅನುಮೋದಿತ ನಕ್ಷೆಗೆ ವಿರುದ್ಧವಾಗಿ ವಾಣಿಜ್ಯ ಕಟ್ಟಡ ನಿರ್ಮಿಸುತ್ತಿದ್ದಾರೆ. ▶ 8ನೇ ಪುಟಕ್ಕೆ

ಕುಲಕರ್ಣಿ ಹತ್ಯೆಗೆ ಪಾಲಿಕೆ ಅಧಿಕಾರಿಗಳೇ ಹೊಣೆ

ಈ ಅಕ್ರಮ ನಿರ್ಮಾಣ ಸಂಬಂಧ ಮೊದಲ ಬಾರಿಗೆ ಪಾಲಿಕೆಗೆ ದೂರು ನೀಡಲು ಹೋದಾಗ ನಮ್ಮ ಅಹವಾಲು ಸ್ವೀಕರಿಸಲೇ ಸಿದ್ಧರಿರಲಿಲ್ಲ. ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಇಂತಹದ್ದೇ ಅಕ್ರಮ ಕಟ್ಟಡ ಬಗ್ಗೆ ಹೋರಾಟ ಮಾಡಿದ್ದರು. ಆದರೆ ಅವರನ್ನು ಹತ್ಯೆ ಮಾಡಲಾಯಿತು. ಅವರ ಹತ್ಯೆಗೆ ನೇರ ಹೊಣೆ ಪಾಲಿಕೆ ಅಧಿಕಾರಿಗಳೇ ಆಗಿದ್ದಾರೆ ಎಂದು ಡಾ.ಸಿ. ಕೃಷ್ಣ ಆರೋಪಿಸಿದರು.

ನ.21ರಂದು ತೀರ್ಪು; ನ್ಯಾಯ ಸಿಗುವವರೆಗೂ ಬಿಡೋಲ್ಲ...

ಮೊದಲ ಬಾರಿಗೆ ನನ್ನ ಪುತ್ರ ಪಾಲಿಕೆಗೆ ದೂರು ನೀಡಲು ಹೋದಾಗ ಅಲೆದಾಡಿಸಿದರು. ವಾರ್ಡ್‌ನ ಪಾಲಿಕೆ ಸದಸ್ಯರು ಪಾಲಿಕೆಯಿಂದ ನೋಟಿಸ್ ಕೊಡಿಸಲು ನಮಗೆ ನೆರವಾದರು. ನ.21ರಂದು ಕೋರ್ಟ್ ತೀರ್ಪು ಬರಲಿದ್ದು, ಪಾಲಿಕೆಯ ನಿರ್ಲಕ್ಷ್ಯದಿಂದ ಬಹುಶಃ ನಮ್ಮ ವಿರುದ್ಧವಾಗಿಯೇ ತೀರ್ಪು ಬರಲಿದೆ ಹಾಗಾದಲ್ಲಿ ಲೋಕಾಯುಕ್ತರು, ರಾಜ್ಯಪಾಲರು, ಮುಖ್ಯಮಂತ್ರಿಗಳ ಬಳಿಗೆ ನನ್ನ ಅಹವಾಲು ಸಲ್ಲಿಸುತ್ತೇನೆ. ನನ್ನ ಹೋರಾಟ ಮುಂದುವರೆಸುತ್ತೇನೆ. ನ್ಯಾಯ ಸಿಗುವವರೆಗೂ ಬಿಡುವುದಿಲ್ಲ.

–ಡಾ.ಸಿ.ಕೃಷ್ಣ

ಬಿಯರ್ ಬಾಟಲಿ, ಕಲ್ಲು ಎಸೆದು ದಾಂಧಲೆ...

ಸರಸ್ವತಿಪುರಂ ಪೊಲೀಸ್ ಠಾಣೆಗೆ ದೂರು ನೀಡಿ, ಪಡೆದ ಎನ್‌ಸಿಆರ್ ಪ್ರತಿಗಳನ್ನು ಪ್ರದರ್ಶಿಸಿದ ಡಾ.ಸಿ.ಕೃಷ್ಣರ ಪುತ್ರ ಕೆ.ಹೇಮಚಂದ್ರ, ಮೂರು ಬಾರಿ ದೂರು ನೀಡಿದರೂ ಪೊಲೀಸರು ಎಫ್‌ಐಆರ್ ಮಾಡಲಿಲ್ಲ ಎಂದು ಆಪಾದಿಸಿದರು.

2021ರ ಅ.23ರಂದು ಅವಾಚ್ಯ ಶಬ್ದಗಳಲ್ಲಿ ನಿಂದಿಸಿದರು. 2021ರ ಅ.29ರಂದು ರಾತ್ರಿ ನಮ್ಮ ಮನೆಯ ಬಾಗಿಲಿಗೆ ಬಿಯರ್ ಬಾಟಲಿ ಎಸೆದು ಬೆದರಿಕೆ ಹಾಕಿದರು ಹಾಗೂ 2021ರ ನ.26ರಂದು ನಮ್ಮ ಮನೆಯ ಟಾರ್ಪಲ್ ಕಿತ್ತು ಎಸೆದು, ಕಲ್ಲುಗಳನ್ನು ಎಸೆದು ದಾಂಧಲೆ ನಡೆಸಿದರು ಎಂದು ಆರೋಪಿಸಿದ ಅವರು, ಈ ಸಂಬಂಧ ದೂರು ಸಲ್ಲಿಸಿ, ಎನ್‌ಸಿಆರ್ ಪಡೆದಿರುವ ಪ್ರತಿಗಳನ್ನು ಪ್ರದರ್ಶಿಸಿದರು.

ಗುಂಬಜ್ ಮಾದರಿ ಬಸ್ ನಿಲ್ದಾಣ ಧ್ವಂಸಗೊಳಿಸುವ ಪ್ರತಾಪ್‌ಸಿಂಹ ಹೇಳಿಕೆಗೆ ಸಿದ್ದರಾಮಯ್ಯ ವಾಗ್ದಾಳಿ
ಒಡೆದು ಹಾಕಲು ಇವನ್ಯಾವೋನು? ■ ಪುಟ 5

ಹತ್ಯೆಗೀಡಾದ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಮನೆ ಪಕ್ಕದ ಅನಧಿಕೃತ ನಿರ್ಮಾಣ ತೆರವಿಗೆ ಕೋರ್ಟ್ ತಡೆ



ಅಕ್ರಮ ನಿರ್ಮಾಣಕ್ಕೆ ಸಜ್ಜಾಗಿದ್ದ ಪಾಲಿಕೆ ಸಿಬ್ಬಂದಿ ಕೈಸೇರಿದ ತಡೆಯಾಜ್ಞೆ ಪ್ರತಿ

ಮೈಸೂರು, ನ.15(ಎಸ್‌ಬಿಡಿ)– ಹತ್ಯೆಗೀಡಾದ ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಪಕ್ಕದ ಮನೆಯ ಅನಧಿಕೃತ ನಿರ್ಮಾಣ ಭಾಗದ ತೆರವು ಕಾರ್ಯಾಚರಣೆ ಆರಂಭಿಸಿದ್ದ ಮೈಸೂರು ನಗರಪಾಲಿಕೆ ಅಧಿಕಾರಿಗಳು, ಇದಕ್ಕೆ ನ್ಯಾಯಾಲಯ ನೀಡಿರುವ ತಾತ್ಕಾಲಿಕ ತಡೆಯಾಜ್ಞೆ ಪ್ರತಿ ಕೈಸೇರಿದ ಬಳಿಕ ಕಾರ್ಯಾಚರಣೆ ಕೈಬಿಟ್ಟು ವಾಪಸ್ಸಾದರು. ಕುಲಕರ್ಣಿ ಅವರ ಮನೆ ಪಕ್ಕದಲ್ಲಿ ಮಾದಪ್ಪ ಸೆಟ್‌ಬ್ಯಾಕ್ ಬಿಡದೆ ಕಟ್ಟಡ ನಿರ್ಮಿಸಿದ್ದು, ಈ ಅನಧಿಕೃತ ನಿರ್ಮಾಣ ಭಾಗವನ್ನು ತೆರವುಗೊಳಿಸುವ ಸಂಬಂಧ ನಿನ್ನೆ(ನ.14) 24 ಗಂಟೆಗಳ ನೋಟೀಸ್ ▶ 8ನೇ ಪುಟಕ್ಕೆ

ಮೈಸೂರು ಮೃಗಾಲಯದ ಹೆಚ್ಚುವರಿ ಜಿಂಕೆ, ಸಾರಂಗ ದಾಂಡೇಲಿ ಅಭಯಾರಣ್ಯಕ್ಕೆ ಸಾಗಾಣೆ



ಮೈಸೂರು, ನ,.15(ಎಂಟಿವೈ)– ಮೈಸೂರು ಮೃಗಾಲಯದಲ್ಲಿ ಜಿಂಕೆ ಹಾಗೂ ಸಾಂಬರ್(ಸಾರಂಗ) ಸಂತತಿಯಲ್ಲಿ ನಿರೀಕ್ಷೆಗೂ ಮೀರಿದ ಹೆಚ್ಚಳವಾಗಿದ್ದು, ಇವುಗಳನ್ನು ದಾಂಡೇಲಿ ಅಭಯಾರಣ್ಯಕ್ಕೆ ಬಿಡಲು ನಿರ್ಧರಿಸಲಾಗಿದೆ.

ರಾಜ್ಯದ ಮೃಗಾಲಯಗಳಲ್ಲಿ ಜಿಂಕೆಗಳ ಸಂತತಿ ಹೆಚ್ಚಳ ಸಾಮಾನ್ಯ ಸಂಗತಿಯಾಗಿದ್ದು, ಅಧಿಕವಾಗಿರುವ ಜಿಂಕೆಗಳಿಗೆ ವಿವಿಧ ವನ್ಯಧಾಮದಲ್ಲಿ ಪುನರ್ವಸತಿ ಕಲ್ಪಿಸುವುದು ವಾಡಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಮೃಗಾಲಯದಿಂದ 2019ರಲ್ಲಿ 100ಕ್ಕೂ ಹೆಚ್ಚು ಜಿಂಕೆಗಳನ್ನು ಹುಣಸೂರು ಸಮೀಪದ ಅರಬ್ಬೀತಿಟ್ಟು ವನ್ಯಧಾಮದಲ್ಲಿ ಬಿಡಲಾಗಿತ್ತು ಇದೀಗ ಅದೇ ಮಾದರಿಯಲ್ಲಿ ಸಾರಂಗ ಹಾಗೂ 50ಕ್ಕೂ ಅಧಿಕ ಜಿಂಕೆಗಳನ್ನು ದಾಂಡೇಲಿ ಅಭಯಾರಣ್ಯಕ್ಕೆ ಬಿಡಲು ನಿರ್ಧರಿಸಲಾಗಿದ್ದು, ಪ್ರಾಥಮಿಕ ಹಂತದಲ್ಲಿ 3 ಹೆಣ್ಣು ಹಾಗೂ ಒಂದು ಗಂಡು ಸಾರಂಗವನ್ನು ದಾಂಡೇಲಿಯಲ್ಲಿ ಬಿಡಲಾಗಿದೆ.

ಶೀಘ್ರದಲ್ಲಿ ಜಿಂಕೆಗಳ ರವಾನೆ: ಮೈಸೂರು ಮೃಗಾಲಯದಲ್ಲಿ ಜಿಂಕೆಗಳ ಸಂಖ್ಯೆ ಹೆಚ್ಚಾಗಿದ್ದು, ನಿರ್ವಹಣೆಯೊಂದಿಗೆ ಜಾಗದ ಸಮಸ್ಯೆಯಾಗುವುದನ್ನು ಅರಿತು ಇವುಗಳನ್ನು ದಾಂಡೇಲಿ ಅಭಯಾರಣ್ಯದಲ್ಲಿ ಬಿಡಲು ನಿರ್ಧರಿಸಲಾಗಿದೆ. ಅಧಿಕಾರಿಗಳ ಕೋರಿಕೆ ಮೇರೆಗೆ ಮೃಗಾಲಯ ▶ 6ನೇ ಪುಟಕ್ಕೆ

ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು...!?

ಜನರ ಒಲವು

I. ಕುಮಾರಸ್ವಾಮಿ ಶೇ.36
II. ಸಿದ್ದರಾಮಯ್ಯ ಶೇ.34
III. ಯಡಿಯೂರಪ್ಪ ಶೇ.30



● ರಾಷ್ಟ್ರೀಯ ಪಕ್ಷವೊಂದು ಖಾಸಗಿ ಸಂಸ್ಥೆಯೊಂದರ ಮೂಲಕ ನಡೆಸಿದ ಸಮೀಕ್ಷಾ ವರದಿ
● ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶೇ.26, ಡಿ.ಕೆ.ಶಿವಕುಮಾರ್ ಶೇ.18 ಜನರ ಬಯಕೆ


ಬೆಂಗಳೂರು, ನ.15(ಕೆಎಂಶಿ)– ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಬಗ್ಗೆ ಖಾಸಗಿ ಸಂಸ್ಥೆ ನಡೆಸಿರುವ ಸಮೀಕ್ಷೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮೊದಲಿಗರಾಗಿದ್ದಾರೆ. ಸಮೀಕ್ಷೆ ಪ್ರಕಾರ ಮತ್ತೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಬೇಕು ಎಂದು ಶೇ.36 ರಷ್ಟು ಮಂದಿ ಒಲವು ತೋರಿದ್ದಾರೆ. ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ಶೇ.34ರಷ್ಟು ಜನರು ಒಲವು ತೋರಿದ್ದು, ಎರಡನೇ ಸ್ಥಾನದಲ್ಲಿದ್ದಾರೆ. ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಣೆ ಮಾಡಿರುವ ಬಿ.ಎಸ್.ಯಡಿಯೂರಪ್ಪ ಅವರು ಮತ್ತೆ ಮುಖ್ಯಮಂತ್ರಿಯಾಗಬೇಕು ಎಂಬ ಒಲವನ್ನು ಜನರು ವ್ಯಕ್ತಪಡಿಸಿದ್ದಾರೆ. ಸಮೀಕ್ಷೆಯಲ್ಲಿ ಶೇ.30ರಷ್ಟು ಮಂದಿ ಅವರು ಮುಖ್ಯಮಂತ್ರಿಯಾಗಬೇಕು ಎಂದು ಬಯಸಿದ್ದಾರೆ. ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಯಡಿಯೂರಪ್ಪ ಅವರ ನಂತರದ ಸ್ಥಾನದಲ್ಲಿದ್ದಾರೆ. ಇವರಿಗೆ ಶೇ.26ರಷ್ಟು ಜನರು ಮತ್ತೆ ಮುಖ್ಯಮಂತ್ರಿಯಾಗಬೇಕು ಎಂಬ ಒಲವು ತೋರಿದ್ದಾರೆ. ಹಾಲಿ ಮುಖ್ಯಮಂತ್ರಿ ಗಾದಿಯ ಮೇಲೆ ಕಣ್ಣಿಟ್ಟಿರುವ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಶೇ.18ರಷ್ಟು ಜನರು ಮಾತ್ರ ಒಲವು ತೋರಿದ್ದಾರೆ. ಬಿಜೆಪಿಯಲ್ಲಿ ಯಡಿಯೂರಪ್ಪ ಬೊಮ್ಮಾಯಿ ಅವರಲ್ಲದೆ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ▶ 8ನೇ ಪುಟಕ್ಕೆ

ಹಾಡಹಗಲೇ ಆಸ್ಪತ್ರೆಗೆ ನುಗ್ಗಿ ನರ್ಸ್ ಕುತ್ತಿಗೆ ಕೊಯ್ದ ಪಾಗಲ್ ಪ್ರೇಮಿ

● ಸಹೋದ್ಯೋಗಿ ರಕ್ಷಣೆಗೆ ಬಂದ ಮಹಿಳಾ ಸಿಬ್ಬಂದಿಗೂ ಇರಿದು ಜೈಲು ಸೇರಿದ ಆರೋಪಿ ● ಹಲ್ಲೆಗೀಡಾದ ಇಬ್ಬರು ಚೇತರಿಕೆ

ಮೈಸೂರು, ನ. 15(ಆರ್‌ಕೆ)– ಹಾಡಹಗಲೇ ಪಾಗಲ್ ಪ್ರೇಮಿಯೊಬ್ಬ ಆಸ್ಪತ್ರೆಗೆ ನುಗ್ಗಿ ಚಾಕುವಿನಿಂದ ಕತ್ತು ಕೊಯ್ದು ನರ್ಸ್ ಕೊಲೆಗೆ ಯತ್ನಿಸಿದ್ದಾನೆ. ಈ ಘಟನೆ ಮೈಸೂರಿನ ಹೆಬ್ಬಾಳು ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಇಂದು ಬೆಳಗ್ಗೆ ನಡೆದಿದೆ. ಚಾಮರಾಜನಗರ ಜಿಲ್ಲೆಯವನೆಂದು ಹೇಳಲಾದ ನಂಜುಂಡಸ್ವಾಮಿ(29), ಮಹಿಳಾ ಸ್ಟಾಫ್ ನರ್ಸ್ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದ್ದು, ಆಕೆಯನ್ನು ರಕ್ಷಿಸಲು ಬಂದ ಸಹೋದ್ಯೋಗಿಗೂ ಇರಿದು ಗಾಯಗೊಳಿಸಿದ್ದಾನೆ.

ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಅಂಕಾಲಜಿಯಲ್ಲಿ ಸ್ಟಾಫ್ ನರ್ಸ್ ಆಗಿರುವ ಯುವತಿಯನ್ನು ಪ್ರೀತಿಸುತ್ತಿದ್ದ ನಂಜುಂಡಸ್ವಾಮಿ, ಆಸ್ಪತ್ರೆ ಹಾಸ್ಟೆಲ್‌ನಲ್ಲೇ ನೆಲೆಸಿರುವ ಆಕೆಯನ್ನು ಆಗಾಗ ಹೊರಗೆ ಕರೆದುಕೊಂಡು ಹೋಗುತ್ತಿದ್ದ. ಆದರೆ ತಾನು ಪ್ರೀತಿಸುತ್ತಿದ್ದ ನರ್ಸ್, ಅದೇ ಆಸ್ಪತ್ರೆಯ



ನೌಕರನನ್ನು ಪ್ರೀತಿಸುತ್ತಿದ್ದಾಳೆ ಎಂಬ ವಿಷಯ ತಿಳಿದು ರೊಚ್ಚಿಗೆದ್ದಿದ್ದ. ಹಲವು ಬಾರಿ ಇದೇ ವಿಷಯಕ್ಕೆ ನರ್ಸ್‌ವೊಟ್ಟಿಗೆ ಜಗಳವಾಡಿದ್ದ. ತಾನು ಎಷ್ಟೇ ಹೇಳಿದರೂ ಮತ್ತೊರ್ವನ ಸ್ನೇಹ ಮುಂದುವರೆಸಿದ್ದರಿಂದ ಆಕ್ರೋಶಗೊಂಡಿದ್ದ ನಂಜುಂಡಸ್ವಾಮಿ, ಇಂದು ಬೆಳಗ್ಗೆ 9.45 ಗಂಟೆಗೆ ಆಸ್ಪತ್ರೆಗೆ ಹೋಗಿ ಓಪಿಡಿ ಬ್ಲಾಕ್‌ನಲ್ಲಿದ್ದ ಪ್ರಿಯತಮೆಯ ಕುತ್ತಿಗೆ ಬಲಭಾಗವನ್ನು ▶ 8ನೇ ಪುಟಕ್ಕೆ



ನ್ಯಾಷನಲ್ ಚಾಂಪಿಯನ್‌ಶಿಪ್: ನವೆಂಬರ್ 13ರಂದು ಗೋವಾದ ಮಾಪುಸಾದಲ್ಲಿ ನಡೆದ ಎಂಆರ್‌ಎಫ್ ಮೊಗ್ರಿಪ್ ನ್ಯಾಷನಲ್ ಸೂಪರ್‌ಕ್ರಾಸ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಬನ್ನಿಮಂಟಪದ ಹೆಸರಾಂತ ಫಾಸ್ಟ್ ಕಾರ್ ಕೇರ್ ಮಾಲೀಕ ಇಮ್ರಾನ್ ಪಾಷಾ ಅವರ ಮಗ, 9 ವರ್ಷದ ಮೊಹಮದ್ ಅಮ್ರಾನ್ ಪ್ರಥಮ ಬಹುಮಾನ ಗಳಿಸಿದ್ದಾನೆ.



ಮೈಸೂರು ಮಿತ್ರ ಬುಧವಾರ 16 ನವೆಂಬರ್ 2022



ಡಾ. ಕಲ್ಯಾಣಸಿರಿ ಭಂತೇಜಿ ಅವರ ಹುಟ್ಟುಹಬ್ಬವನ್ನು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಹಾಗೂ ಶ್ರೀಮತಿ ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್ ದಂಪತಿ ಸಮ್ಮುಖದಲ್ಲಿ ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಭೀಮ ಸದನ ನಿವಾಸದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಪಿ.ನಂದಕುಮಾರ್, ಪ್ರಕಾಶಕರಾದ ಭರತ್ ರಾಮಸ್ವಾಮಿ, ಹಿರಿಯ ಆಪ್ತ ಸಹಾಯಕರಾದ ಹೆಚ್. ಜಿ. ರಮೇಶ್, ಪಿ.ಟಿ ಕೃಷ್ಣ, ಸಿ.ಜಿ.ಶಿವಕುಮಾರ್, ಶಿವಸ್ವಾಮಿ, ಶಾಂತರಾಮ್ ಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಣ ತಜ್ಞ ಬಿ.ಎಸ್.ಪಂಡಿತ್ ಸ್ಮರಣಾರ್ಥ

ಜೆಎಸ್‌ಎಸ್‌ಎಸ್ ಇಂಜಿನಿಯರಿಂಗ್ ಕಾಲೇಜಲ್ಲಿ ನ.18, 19ರಂದು ಸಂಗೀತಗೋಷ್ಠಿ 'ಸರಸ್ವತಿ'

ಮೈಸೂರು,ನ.15–ಮೈಸೂರಿನ ಗೀತಾ ಶಿಶು ಶಿಕ್ಷಣ ಸಂಘದ ನಿರ್ಮಾತೃ, ಶಿಕ್ಷಣ ತಜ್ಞ, ದಿವಂಗತ ಪ್ರೊ.ಬಿ.ಎಸ್.ಪಂಡಿತ್ ಅವರ ನೆನಪಿಗಾಗಿ, ಮೈಸೂರಿನ ಜೆಎಸ್‌ಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ 2019ರಿಂದ ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ಪ್ರೊ.ಬಿ.ಎಸ್.ಪಂಡಿತ್ ಸ್ಮಾರಕ ಸಂಗೀತಗೋಷ್ಠಿ 'ಸರಸ್ವತಿ'ಯನ್ನು ದೇಶದ ಪ್ರತಿಷ್ಠಿತ ಸಂಗೀತಗಾರರಿಂದ ಏರ್ಪಡಿಸಲಾಗುತ್ತಿದೆ.

ಈ ವರ್ಷ ಬಿ.ಎಸ್.ಪಂಡಿತ್ ಸ್ಮಾರಕ ಗೋಷ್ಠಿ 'ಸರಸ್ವತಿ'ಯನ್ನು ಎಂ.ಗೋವಿಂದರಾವ್ ಸ್ಮಾರಕ ಸಭಾಂಗಣ, ಜೆಎಸ್‌ಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯ ಕೆಆರ್‌ಎಸ್ ರಸ್ತೆ ಮೈಸೂರು ಇಲ್ಲಿ ನ.18 ಮತ್ತು 19ರಂದು ಆಯೋಜಿಸಲಾಗಿದೆ.

ನ.18ರ ಶುಕ್ರವಾರದಂದು ಸಂಜೆ 5ರಿಂದ 6ರವರೆಗೆ ಸಂಗೀತದ ವಿದ್ಯಾರ್ಥಿಗಳೊಂದಿಗೆ ಸಂಗೀತ ಕಛೇರಿಯ ಪೂರ್ವ ಸಂವಾದ ಸ್ಟ್ರಿಂಗ್ಸ್ ಆಫ್ ಹೋಪ್ ಈ ವರ್ಷದ ಸರಸ್ವತಿ ಗೋಷ್ಠಿಯ ಪ್ರಮುಖ ಆಕರ್ಷಣೆಯಾಗಿದೆ. ಅಂದು ಸಂಜೆ 6.30ರಿಂದ 9 ರವರೆಗೆ ಪ್ರಸಿದ್ಧ ಸಂಗೀತಗಾರರಿಂದ ಜುಗಲ್‌ಬಂಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅನಿಲ್ ಶ್ರೀನಿವಾಸನ್ ಅವರು ಪಿಯಾನೋ ವಾದಕರು, ತಮಿಳುನಾಡು ಸರ್ಕಾರದ ಪ್ರತಿಷ್ಠಿತ ಕಲೈಮಾಮಣಿ ಪ್ರಶಸ್ತಿ ವಿಜೇತರು, ಕೇಂದ್ರ ಸಂಗೀತ ನಾಟಕ ಅಕಾಡೆಮಿಯಿಂದ ಸೃಜನಶೀಲ ಮತ್ತು ಪ್ರಾಯೋಗಿಕ ಸಂಗೀತಕ್ಕಾಗಿ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ, ರೌಂಡ್ ಟೇಬಲ್ ಆಫ್ ಇಂಡಿಯಾ ಮೂಲಕ ತಮಿಳುನಾಡಿನ ಹೆಮ್ಮೆ ಪುರಸ್ಕಾರ ಪಡೆದ ಕಲಾವಿದರು ಪಾಲ್ಗೊಳ್ಳಲಿದ್ದಾರೆ.

ಬಸ್ ಸೌಕರ್ಯ: ಈ ಕಾರ್ಯಕ್ರಮಕ್ಕೆ ಆಗಮಿಸಲು ಅನುಕೂಲವಾಗುವಂತೆ ಮೈಸೂರು ನಗರದ ವಿವಿಧ ಭಾಗಗಳಿಂದ ಬಸ್ ಸೌಲಭ್ಯವಿದೆ. ಕೃಷ್ಣಧಾಮ, ಟಿಕೆ ಲೇಔಟ್, ಗಾನಭಾರತಿ, ಕುವೆಂಪುನಗರ, ಶ್ರೀ ನಾದಬ್ರಹ್ಮ ಸಂಗೀತ ಸಭಾ, ಲಕ್ಷ್ಮೀಪುರಂ, ಜವರೇಗೌಡ ಪಾರ್ಕ್, ಸರಸ್ವತಿಪುರಂ, ಆಟೋ ಸ್ಟ್ಯಾಂಡ್, ರಾಮಸ್ವಾಮಿ ವೃತ್ತ ಒಂಟಿಕೊಪ್ಪಲು, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ಜೆಎಸ್‌ಎಸ್‌ಎಸ್ ಶಾಲೆ, ಸಿದ್ಧಾರ್ಥನಗರ, 8ನೇ ಕ್ರಾಸ್, ವಿವಿ ಮೊಹಲ್ಲಾ. ನ.18ರಂದು ಸಂಜೆ 4.30ಕ್ಕೆ. ನ. 19ರಂದು ಬೆಳಗ್ಗೆ 9.30 ಗಂಟೆಗೆ ಬಸ್ ಸೌಕರ್ಯವಿರುತ್ತದೆ. ವಿವರಗಳಿಗಾಗಿ ಸಂಪರ್ಕಿಸಿ: ನವೀನ್‌ಕುಮಾರ್ –9611959996.


ಬಸವಲಿಂಗ ಶ್ರೀ ಆತ್ಮಹತ್ಯೆ: ಆರೋಪಿಗಳ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ರಾಮನಗರ: ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ ಪ್ರಕರಣದ ಮೂವರು ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ಇದೇ 29ರವರೆಗೆ ವಿಸ್ತರಿಸಿ ನ್ಯಾಯಾಲಯವು ಮಂಗಳವಾರ ಆದೇಶಿಸಿತು.

ಪ್ರಕರಣದ ಆರೋಪಿಗಳಾದ ಮೃತ್ಯುಂಜಯ ಸ್ವಾಮೀಜಿ, ನೀಲಾಂಬಿಕೆ ಹಾಗೂ ವಕೀಲ ಮಹದೇವಯ್ಯ ಅವರನ್ನು ಪೊಲೀಸರು ಮಂಗಳವಾರ ಮಾಗಡಿ ಜೆಎಂಎಫ್‌ಸಿ ನ್ಯಾಯಾಧೀಶೆ ಎಂ.ಧನಲಕ್ಷ್ಮಿ ಅವರ ಎದುರು ಹಾಜರುಪಡಿಸಿದರು. ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ವಿಸ್ತರಿಸಿ ನ್ಯಾಯಾಧೀಶರು ಆದೇಶ ನೀಡಿದರು.

ಕಾಂಗ್ರೆಸ್ ಟಿಕೆಟ್‌ಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು, ನ.15– ಕರ್ನಾಟಕ ವಿಧಾನಸಭೆ ಚುನಾವಣೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಿಂದ ಅರ್ಜಿ ಸಲ್ಲಿಕೆಗೆ ನಿಗದಿ ಮಾಡಲಾಗಿದ್ದ ಗಡುವನ್ನು ನವೆಂಬರ್ 21ರವರೆಗೆ ವಿಸ್ತರಿಸಲಾಗಿದೆ.



ಈ ಮೊದಲು ಅರ್ಜಿ ಸಲ್ಲಿಕೆಗೆ ನವೆಂಬರ್ 15 ಕೊನೇ ದಿನವಾಗಿತ್ತು. ಆದರೆ ಈ ಅವಧಿ ವಿಸ್ತರಣೆ ಮಾಡುವಂತೆ ರಾಜ್ಯದ ಮೂಲೆ, ಮೂಲೆಗಳಿಂದ ಪಕ್ಷದವರು ಹಾಗೂ ಅನ್ಯ ಪಕ್ಷಗಳಿಂದ ಕಾಂಗ್ರೆಸ್‌ಗೆ ಬರಲು ಇಚ್ಛಿಸಿರುವ ಟಿಕೆಟ್ ಆಕಾಂಕ್ಷಿಗಳಿಂದ ಒತ್ತಡ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಬದಲಾವಣೆ ಮಾಡಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಚಾಮುಂಡೇಶ್ವರಿಯಲ್ಲಿ ನನಗೇ ಟಿಕೆಟ್: ಕೆ.ಮರೀಗೌಡ ವಿಶ್ವಾಸ

ಮೈಸೂರು, ನ.15–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ನಾನು ಹಿರಿಯನಿದ್ದೇನೆ. ನನಗೇ ಕಾಂಗ್ರೆಸ್ ಟಿಕೆಟ್ ದೊರೆಯುವ ನಿರೀಕ್ಷೆಯಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಕೆ.ಮರೀಗೌಡ ಮೈಸೂರಿನಲ್ಲಿ ತಿಳಿಸಿದರು.




ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಈಗಾಗಲೇ ನಾನು ಪಕ್ಷಕ್ಕೆ ಟಿಕೆಟ್ ನೀಡುವಂತೆ ಅರ್ಜಿ ಸಲ್ಲಿಸಿದ್ದೇನೆ. ಕ್ಷೇತ್ರದಲ್ಲಿ ಇತರೆ ನಾಯಕರು ಅರ್ಜಿ ಸಲ್ಲಿಸಿರಬಹುದು. ಆದರೆ ನನ್ನ ಹಿರಿತನವನ್ನು ಪರಿಗಣಿಸಿ ನನಗೆ ಟಿಕೆಟ್ ನೀಡುತ್ತಾರೆಂಬ ನಿರೀಕ್ಷೆಯಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಅರ್ಜಿ ಆಹ್ವಾನ

ಮೈಸೂರು,ನ.15–ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದಿಂದ 2022–23ನೇ ಸಾಲಿನಲ್ಲಿ 2 ವರ್ಷದ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ ಮತ್ತು ಮಾನ್ಯತೆ ಪಡೆದ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಬಿ.ಇಡಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆಹ್ವಾನಿಸಲಾಗಿದೆ. www.schooleducation.kar.nic.in ಮೂಲಕ ಅರ್ಜಿಗಳನ್ನು ಭರ್ತಿ ಮಾಡುವ ಮೂಲಕ ಅನುಕೂಲ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ನವೆಂಬರ್ 30 ಅಂತಿಮ ದಿನಾಂಕವಾಗಿದೆ.

ಇಂದು ಹಲವೆಡೆ ವಿದ್ಯುತ್ ನಿಲುಗಡೆ

ಮೈಸೂರು, ನ.15– ಮೇಗಳಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ನವೆಂಬರ್ 16ರ ಬುಧವಾರ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಇನಾಂ ಉತ್ತನಹಳ್ಳಿ, ಎಂ.ಸಿ.ಹುಂಡಿ, ಕೀಳನಪುರ, ಸಿದ್ದರಾಮನಹುಂಡಿ, ಮೇಗಳಾಪುರ, ಮಾಧವಗೆರೆ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮೀಪುರ, ಪಿ.ಜಿ.ಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿಪಾಳ್ಯ, ಹೊಸಹಳ್ಳಿ, ರಂಗನಾಥಪುರ, ಶ್ರೀನಿವಾಸಪುರ, ಯಡಕೊಳ, ಕಡವೆಕಟ್ಟೆಹುಂಡಿ, ಅಂಚೆಹುಂಡಿ, ದೇವೇಗೌಡನಹುಂಡಿ, ಮುದ್ದೇಗೌಡನಹುಂಡಿ, ಕುಪ್ಪೆಗಾಲ, ವರಕೋಡು ಪೇಪರ್ ಮಿಲ್, ಎಸ್.ಆರ್ ಇಂಡಸ್ಟ್ರೀಸ್, ಜಾಗ್ವರಿ ಸಿಮೆಂಟ್ ಇಂಡಸ್ಟ್ರೀಸ್, ರಾಜಶ್ರೀ ಇಂಡಸ್ಟ್ರೀ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ನಂಜನಗೂಡು ವಿಭಾಗ ವ್ಯಾಪ್ತಿಯ ಕುಪ್ಯ ಗ್ರಾಮ ಪಂಚಾಯಿತಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ನಿಧನ

ವೈ.ಎನ್.ನಾಗರಾಜ್



ಮೈಸೂರು: ಮೈಸೂರಿನ ಬಿಡಾರಂ ಕೃಷ್ಣಪ್ಪ ಶ್ರೀ ಪ್ರಸನ್ನ ಸೀತಾರಾಮಮಂದಿರದ ಜಂಟಿ ಕಾರ್ಯದರ್ಶಿ ಹಾಗೂ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿವೃತ್ತ ಸಹಾಯಕ ನಿರ್ದೇಶಕರಾದ ವೈ.ಎನ್.ನಾಗರಾಜ್ (87) ಸೋಮವಾರ ವಿದ್ಯಾರಣ್ಯಪುರಂ ನಿವಾಸದಲ್ಲಿ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ಪಾದದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಡಾ. ಬಿ.ಎನ್.ರಾಜು



ಈ ಮೊದಲು ಮೈಸೂರಿನಲ್ಲಿ ವಾಸವಾಗಿದ್ದು, ಮೈಸೂರು ವೈದ್ಯಕೀಯ ಕಾಲೇಜಿನ ಖಾಸಗಿ ಮೆಡಿಕಲ್ ಪ್ರಾಕ್ಟೀಷನರ್ ಆಗಿದ್ದ ಬೆಂಗಳೂರಿನ ನಿವಾಸಿ ಡಾ.ಬಿ.ಎನ್.ರಾಜು (86) ಸೋಮವಾರ ನಿಧನರಾದರು.

ಮೃತರು ಪತ್ನಿ ಗಿರಿಜಾ, ಪುತ್ರರಾದ ಪ್ರಸಾದ್ ರಾಜು, ಪ್ರಶಾಂತ್ ರಾಜು ಮತ್ತು ಪ್ರವೀಣ್ ರಾಜು (ಇನ್‌ವೆನ್‌ಸಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಹೆಬ್ಬಾಳು) ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ.

ಡಾ.ರಾಜು ಅವರು ಕೊಡಗು ಮತ್ತು ಮಂಡ್ಯದಲ್ಲಿ ಸೇವೆ ಸಲ್ಲಿಸಿದ್ದಾರೆ. ಯಾವುದೇ ಸಂದರ್ಭದಲ್ಲಿ ಬಡವರಿಗೆ ಸೇವೆ ಕಲ್ಪಿಸುವ ಮೂಲಕ ಒಳ್ಳೆಯ ಹೆಸರು ಗಳಿಸಿದ್ದರು. ಇವರ ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರತ್ನಮ್ಮ



ಮೈಸೂರಿನ ಬೃಂದಾವನ ಬಡಾವಣೆ ನಿವಾಸಿ ನಿವೃತ್ತ ತಹಸೀಲ್ದಾರ್ ದಿವಂಗತ ಎಸ್.ಕೆ.ಜವರೇಗೌಡ ಅವರ ಪತ್ನಿ ರತ್ನಮ್ಮ (82) ಸೋಮವಾರ ನಿಧನರಾದರು. ಮೃತರು ಪುತ್ರ ಜೆ.ಸುರೇಶ್ (ಸಿವಿಲ್ ಇಂಜಿನಿಯರ್) ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ರತ್ನಮ್ಮ ಅವರ ಕಿರಿಯ ಪುತ್ರ ಡಾ. ಜೆ.ನಟೇಶ್ ಈ ಹಿಂದೆಯೇ ಇವರನ್ನು ಅಗಲಿದ್ದರು. ಮೃತರ ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನ.28ರಂದು ಮೈಸೂರು ಪೇಂಟ್ಸ್ ವಜ್ರ ಮಹೋತ್ಸವ; ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟನೆ

ಮೈಸೂರು, ನ. 15– ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ (ಎಂಪಿವಿಎಲ್) ನ.28ರಂದು ವಜ್ರ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದು, ಈ ಸಮಾರಂಭಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮೈಸೂರಿನ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರನ್ನು ಆಹ್ವಾನಿಸಲಾಗಿದೆ.

ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಎಂಪಿವಿಎಲ್ ಅಧ್ಯಕ್ಷರಾದ ಆರ್.ರಘು (ಕೌಟಿಲ್ಯ), ಅಂದು ಮಧ್ಯಾಹ್ನ 3 ಗಂಟೆಗೆ ಮೈಸೂರು–ಹುಣಸೂರು ರಸ್ತೆಯ ಕರ್ನಾಟಕ ಕಲಾಮಂದಿರದಲ್ಲಿ ವಜ್ರ ಮಹೋತ್ಸವ ಉದ್ಘಾಟನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮತಿಸಿದ್ದಾರೆ. ಇಂದು ಮುಖ್ಯ ಅತಿಥಿಗಳಾಗಿ ಆಗಮಿಸುವಂತೆ ಪ್ರಮೋದಾದೇವಿ ಒಡೆಯರ್ ಅವರನ್ನು ಆಹ್ವಾನಿಸಲಾಗಿದೆ ಎಂದರು. ಎಂಪಿವಿಎಲ್ ಅನ್ನು 1947ರಲ್ಲಿ ಸರ್ಕಾರ ವಶಕ್ಕೆ ತೆಗೆದುಕೊಂಡು 75 ವರ್ಷಗಳು ತುಂಬುತ್ತಿದೆ. ಈ ಹಿನ್ನೆಲೆಯಲ್ಲಿ ವಜ್ರ ಮಹೋತ್ಸವ ಆಚರಿಸಲಾಗುತ್ತಿದೆ ಎಂದು ರಘು ತಿಳಿಸಿದರು.

ಎಂಪಿವಿಎಲ್ ಇತಿಹಾಸ: ಮೈಸೂರು ನ್ಯೂ ಬನ್ನಿಮಂಟಪ ಬಡಾವಣೆಯಲ್ಲಿರುವ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ 1937ರಲ್ಲಿ ಸ್ಥಾಪನೆಯಾಯಿತು. ಆಗ ಮೈಸೂರು ಮಹಾರಾಜರ ಅಡಿಯಲ್ಲಿದ್ದ ಇದರ ಹೆಸರು ಮೈಸೂರು ಲ್ಯಾಕ್ ಅಂಡ್ ಪೇಂಟ್ ವರ್ಕ್ಸ್ ಲಿಮಿಟೆಡ್. ನಂತರ ಸರ್ಕಾರ 1947ರಲ್ಲಿ ಇದನ್ನು ತನ್ನ ವಶಕ್ಕೆ ತೆಗೆದುಕೊಂಡಿತು ಹಾಗೂ 1989ರಲ್ಲಿ ಇದರ ಹೆಸರನ್ನು ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಎಂದು ಪುನರ್ ನಾಮಕರಣ ಮಾಡಿತು.



ನ.28ರಂದು ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿರುವ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ (ಎಂಪಿವಿಎಲ್)ನ ವಜ್ರ ಮಹೋತ್ಸವ ಸಮಾರಂಭಕ್ಕೆ ಮೈಸೂರಿನ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರನ್ನು ಎಂಪಿವಿಎಲ್ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಆಹ್ವಾನಿಸಿದರು. ಈ ವೇಳೆ ಎಂಪಿವಿಎಲ್‌ನ ಎಂಡಿ ಜಿ.ಕುಮಾರಸ್ವಾಮಿ ಮತ್ತು ಜನರಲ್ ಮ್ಯಾನೇಜರ್ ಸಿ.ಹರಕುಮಾರ್ ಇದ್ದರು.

ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವುದು ಹಾಗೂ ಅರಣ್ಯದ ನೈಸರ್ಗಿಕ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕೆಂಬ ಸದುದ್ದೇಶದಿಂದ ಈ ಕಾರ್ಖಾನೆ ಪ್ರಾರಂಭಿಸಲಾಗಿತ್ತು. ಈ ಕಾರ್ಖಾನೆಯಲ್ಲಿ ಇಂಡಸ್ಟ್ರಿಯಲ್ ಕೋಟಿಂಗ್, ಡೆಕೊರೇಟಿವ್ ಪೇಂಟ್ಸ್, ವುಡ್ ಪಾಲಿಷ್‌ಗಳು, ವಾರ್ನಿಷ್ ಮತ್ತು ಥಿನ್ನರ್‌ಗಳನ್ನು ತಯಾರಿಸಿ, ಸರಬರಾಜು ಮಾಡಲಾಗುತ್ತಿತ್ತು. ಈಗ ಕಂಪನಿಯು ಸರ್ಕಾರ, ಸಾರ್ವಜನಿಕ ಉದ್ಯಮಗಳು, ಕೇಂದ್ರ ಸರ್ಕಾರವಲ್ಲದೆ ಖಾಸಗಿ ಕೈಗಾರಿಕೆಗಳು, ಪೇಂಟ್ ಮಾರಾಟಗಾರರ ಅಗತ್ಯಗಳನ್ನು ಪೂರೈಸುತ್ತಿದೆ. ಅಳಿಸಲಾಗದ ಇಂಕ್‌ಗಳನ್ನು ತಯಾರಿಸುತ್ತಿರುವ ಕಂಪನಿಯು ಇದನ್ನು ಚುನಾವಣೆಗಳಲ್ಲಿ ವ್ಯಾಪಕವಾಗಿ ಸರಬರಾಜು ಮಾಡುತ್ತಿದೆ. ಮಾತ್ರವಲ್ಲ ಈ ಇಂಕ್ ಅನ್ನು 1962ರಿಂದ ತಯಾರಿಸುತ್ತಿದ್ದು, ಭಾರತವೂ ಅಲ್ಲದೆ ವಿದೇಶಗಳಿಗೂ ರಫ್ತು ಮಾಡುತ್ತಾ ಬಂದಿದೆ.

ಬೆಂಗಳೂರು ತಂತ್ರಜ್ಞಾನ ಶೃಂಗದ ರಜತೋತ್ಸವ ಸಮಾವೇಶಕ್ಕೆ ಇಂದು ಪ್ರಧಾನಿ ಮೋದಿ ಚಾಲನೆ

ಬೆಂಗಳೂರು, ನ.15(ಕೆಎಂಶಿ)– ಇಡೀ ಜಗತ್ತಿನ ತಂತ್ರಜ್ಞಾನದ ಬೆಳವಣಿಗೆಯನ್ನು ವರ್ಷ ವರ್ಷವೂ ಅನಾವರಣಗೊಳಿಸುತ್ತಾ ಬಂದಿರುವ ಬೆಂಗಳೂರು ತಂತ್ರಜ್ಞಾನ ಶೃಂಗದ ರಜತೋತ್ಸವ ಸಮಾವೇಶಕ್ಕೆ (ಬಿಟಿಎಸ್–22) ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬುಧವಾರ(ನ.16) ವರ್ಚುವಲ್ ಮೂಲಕ ಚಾಲನೆ ನೀಡಲಿದ್ದಾರೆ.



ಏಷ್ಯಾ ಖಂಡದಲ್ಲೇ ಮಹತ್ವದ ಕಾರ್ಯಕ್ರಮವೆಂದು ಹೆಸರಾಗಿರುವ ಈ ತಂತ್ರಜ್ಞಾನ ಸಮಾವೇಶಕ್ಕಾಗಿ ಬೆಂಗಳೂರು ಅರಮನೆ ಮೈದಾನದಲ್ಲಿ ಸಿದ್ಧತೆಗಳು ನಡೆದಿವೆ. ಸಮಾವೇಶಕ್ಕೆ ಸಂಬಂಧಿಸಿದಂತೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಡಾ.ಅಶ್ವತ್ಥನಾರಾಯಣ್, ಮೂರು ದಿನಗಳ ಕಾಲ ಭೌತಿಕ ಸ್ವರೂಪದಲ್ಲಿ ನಡೆಯುವ ಈ ಸಮಾವೇಶವು ಕನಿಷ್ಠ 9 ಒಡಂಬಡಿಕೆಗಳಿಗೆ (ಎಂಒಯು) ಹಾಗೂ 20ಕ್ಕೂ ಹೆಚ್ಚು ಉತ್ಪನ್ನಗಳ ಬಿಡುಗಡೆಗೆ ಸಾಕ್ಷಿಯಾಗಲಿದೆ. ಬೆಳ್ಳಿಹಬ್ಬದ ಅಂಗವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಮರಣಿಕೆ ಬಿಡುಗಡೆ ಮಾಡಲಿದ್ದಾರೆ ಎಂದರು. ಸಮಾವೇಶದಲ್ಲಿ 575ಕ್ಕೂ ಹೆಚ್ಚು ಪ್ರದರ್ಶಕರು ಭಾಗವಹಿಸುತ್ತಿದ್ದಾರೆ. ಜೊತೆಗೆ ದೇಶದ 16 ವಿವಿಧ ರಾಜ್ಯಗಳ ಸ್ಟಾರ್ಟ್ ಅಪ್‌ಗಳು ಪಾಲ್ಗೊಳ್ಳುತ್ತಿರುವುದು ಈ ಬಾರಿಯ ವಿಶೇಷ ಎಂದು ವಿವರಿಸಿದರು.

350ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಪರಿಣತರು ತಂತ್ರಜ್ಞಾನದ ಮಜಲುಗಳ ಬಗ್ಗೆ ಬೆಳಕು ಚೆಲ್ಲಲಿದ್ದಾರೆ. ಅಲ್ಲದೆ 5,000ಕ್ಕಿಂತ ಹೆಚ್ಚು ಉದ್ಯಮಿಗಳು ಸಮಾವೇಶದಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ.

ಏಷ್ಯಾ ಖಂಡದಲ್ಲೇ ಅತ್ಯಂತ ಮಹತ್ವದ ಸಮಾವೇಶ

ಸಮಾವೇಶದಲ್ಲಿ ಸುಮಾರು 75 ಗೋಷ್ಠಿಗಳು ನಡೆಯಲಿವೆ. ಐಟಿಬಿ/ಡೀಪ್ ಟೆಕ್, ಬಯೋಟೆಕ್, ಸ್ಟಾರ್ಟ್ ಅಪ್, ಜಿಐಎ–1 ಹಾಗೂ ಜಿಐಎ–2, ಈ ಐದು ವಿಭಾಗಗಳಡಿ ಗೋಷ್ಠಿಗಳು ವಿಂಗಡಣೆಗೊಂಡಿವೆ. ಕೃತಕ ಬುದ್ಧಿಮತ್ತೆ, ಬಿಗ್ ಡೇಟಾ, ಸೆಮಿಕಂಡಕ್ಟರ್, ಮಷೀನ್ ಲರ್ನಿಂಗ್, 5ಜಿ, ರೋಬೋಟಿಕ್ಸ್, ಫಿನ್ ಟೆಕ್, ಜೀನ್ ಎಡಿಟಿಂಗ್, ಮೆಡಿ ಟೆಕ್, ಸ್ಪೇಸ್ ಟೆಕ್, ಜೈವಿಕ ಇಂಧನ ಸುಸ್ಥಿರತೆ, ಇ–ಸಂಚಾರ ಹೀಗೆ ವಿವಿಧ ಪ್ರವರ್ಧಮಾನಕ್ಕೆ ಬರುತ್ತಿರುವ ತಾಂತ್ರಿಕ ಬೆಳವಣಿಗೆಗಳ ಬಗ್ಗೆ ಸಂವಾದಗಳು ನಡೆಯಲಿವೆ.

ಜಿಐಎ ವಿಭಾಗದಲ್ಲಿ ಜಪಾನ್, ಫಿನ್ಲೆಂಡ್, ನೆದರ್ಲ್ಯಾಂಡ್, ಡೆನ್ಮಾರ್ಕ್, ಸ್ವೀಡನ್, ಸ್ವಿಟ್ಜರ್ಲ್ಯಾಂಡ್, ಜರ್ಮನಿ, ಆಸ್ಟ್ರೇಲಿಯಾ, ಅಮೇರಿಕಾ, ಲಿಥುವೇನಿಯ, ಕೆನಡಾ ಸೇರಿದಂತೆ 15ಕ್ಕೂ ಹೆಚ್ಚು ರಾಷ್ಟ್ರಗಳು ತಮ್ಮ ತಾಂತ್ರಿಕ ಪ್ರಗತಿಯ ಬಗ್ಗೆ ಗಮನ ಸೆಳೆಯಲಿವೆ. ಅಲ್ಲದೇ, ಭಾರತದ ಉದ್ಯಮಗಳೊಂದಿಗೆ ತಾವು ಹೊಂದಬಯಸುವ ಸಹಭಾಗಿತ್ವದ ಬಗ್ಗೆ ಮನವರಿಕೆ ಮಾಡಿಕೊಡಲಿವೆ ಎಂದು ವಿವರಿಸಿದರು. ಮೂರು ದಿನ ನಡೆಯುವ ಬೆಂಗಳೂರು ಟೆಕ್ ಸಮಿಟ್‌ಗೆ ನಿತ್ಯ ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆವರೆಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇರುತ್ತದೆ ಎಂದು ಸಚಿವ ಡಾ.ಅಶ್ವತ್ಥನಾರಾಯಣ್ ತಿಳಿಸಿದ್ದಾರೆ. ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗಳನ್ನು ಖುದ್ದು ನೋಡಲು ಅನುಕೂಲ ಕಲ್ಪಿಸುವುದು ಇದರ ಉದ್ದೇಶ ಎಂದು ಸಚಿವರು ತಿಳಿಸಿದರು.

ಕೆ.ಆರ್.ನಗರದಲ್ಲಿ ನನಗೇ ಟಿಕೆಟ್ ಖಚಿತ

ಡಿ.ರವಿಶಂಕರ್ ವಿಶ್ವಾಸ

ಮೈಸೂರು,ನ.15(ಆರ್‌ಕೆಬಿ)– ಕೆ.ಆರ್.ನಗರ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಟಿಕೆಟ್‌ಗಾಗಿ ತಾವು ಅರ್ಜಿ ಸಲ್ಲಿಸಿದ್ದು, ನನಗೆ ಟಿಕೆಟ್ ಸಿಗುವುದು ಖಚಿತ ಎಂದು ಡಿ.ರವಿಶಂಕರ್ ತಿಳಿಸಿದ್ದಾರೆ.



ಮೈಸೂರಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪಕ್ಷದಿಂದ ಯಾರಿಗೆ ಉತ್ತಮ ಬೆಂಬಲ ಇದೆ ಎಂದು ಸರ್ವೆ ನಡೆದಿದೆ. ಪಕ್ಷದಿಂದ ನನಗೆ ಟಿಕೆಟ್ ದೊರೆಯುವುದು ಖಚಿತವಾಗಿದೆ. ವರಿಷ್ಠರಾದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಲ್ಲರ ಆಶೀರ್ವಾದವಿದೆ. ಪಕ್ಷದಲ್ಲಿ ಈಗಾಗಲೇ ಜನಶೀರ್ವಾದ ಯಾತ್ರೆ ಆರಂಭವಾಗಿದೆ ಎಂದು ತಿಳಿಸಿದರು.

ಮತ್ತೋರ್ವ ಟಿಕೆಟ್ ಆಕಾಂಕ್ಷಿ ಐಶ್ವರ್ಯ ಮಹದೇವ್ ಅವರಿಂದಲೂ ಅರ್ಜಿ ಸಲ್ಲಿಕೆ ವಿಚಾರ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಭಾರತ ಪ್ರಜಾಪ್ರಭುತ್ವ ದೇಶ, ಯಾರು ಎಲ್ಲಿ ಬೇಕಾದರೂ ಚುನಾವಣೆಗೆ ಸ್ಪರ್ಧಿಸಬಹುದು. ಪಕ್ಷದ ವರಿಷ್ಠರು ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದರು.

ರಾಜಾರಾಮ್ ಮೋಹನ್ ರಾಯ್ 250ನೇ ಜನ್ಮ ವಾರ್ಷಿಕೋತ್ಸವ

ಮೈಸೂರು, ನ.15– ಆಧುನಿಕ ಭಾರತದ ಪಿತಾಮಹ ರಾಜಾರಾಮ್ ಮೋಹನ್ ರಾಯ್ ಅವರ 250ನೇ ಜನ್ಮ ವಾರ್ಷಿಕೋತ್ಸವವನ್ನು ರಾಷ್ಟ್ರವ್ಯಾಪ್ತಿ ವಿವಿಧ ಸಂಘಟನೆಗಳ ಮೂಲಕ ಮಹಿಳಾ ಸಬಲೀಕರಣದ ಕುರಿತು ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸಲು ವರ್ಷ ಪೂರ್ತಿ ಕಾರ್ಯಕ್ರಮವನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಪ್ರತೀ ಜಿಲ್ಲೆಯಲ್ಲಿ ಕನಿಷ್ಠ 5 ಶಾಲೆಗಳಿಂದ 250 ಶಾಲಾ ಮಕ್ಕಳು ಭಾಗವಹಿಸುವುದರೊಂದಿಗೆ ಮಹಿಳಾ ಸಬಲೀಕರಣದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜಾಥಾ ಕಾರ್ಯಕ್ರಮವನ್ನು ನವೆಂಬರ್ 16ರಂದು ಬೆಳಗ್ಗೆ 10.30 ಗಂಟೆಗೆ ಹೆಚ್.ಡಿ.ಕೋಟೆಯಲ್ಲಿ ಹಮ್ಮಿಕೊಳ್ಳಲಾಗಿದೆ.



ಹೆಚ್.ಡಿ.ಕೋಟೆ ಟೌನ್, ಹೌಸಿಂಗ್ ಬೋರ್ಡ್‌ನಲ್ಲಿರುವ ಶಾಖಾ ಗ್ರಂಥಾಲಯದ ಆವರಣದಲ್ಲಿ ಜಾಥಾ ಕಾರ್ಯಕ್ರಮವನ್ನು ಹೆಚ್.ಡಿ.ಕೋಟೆ ಶಾಸಕ ಸಿ.ಅನಿಲ್‌ಕುಮಾರ್ ಉದ್ಘಾಟಿಸಲಿದ್ದು, ಗ್ರಂಥಾಲಯದ ಆವರಣದಿಂದ ಪ್ರಾರಂಭವಾಗುವ ಜಾಥಾ ಬಾಬು ಜಗಜೀವನರಾಂ ವೃತ್ತ ಮಾರ್ಗವಾಗಿ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮುಕ್ತಾಯವಾಗಲಿದೆ. ವಿವಿಧ ಶಾಲಾ ಮಕ್ಕಳು ಮಹಿಳಾ ಸಬಲೀಕರಣದ ಘೋಷಣೆಗಳೊಂದಿಗೆ ಸದರಿ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ರಾಜಾರಾಮ್ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನ, ಕೋಲ್ಕತ್ತಾ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ಒದಗಿಸಲಾಗುವುದು ಎಂದು ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ಬಿ.ಮಂಜುನಾಥ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.11.2022 ಬುಧವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮೀ, ನಕ್ಷತ್ರ : ಆಶ್ಲೇಷ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ವಿದ್ಯಾವರ್ಧಕ ಪದವಿಪೂರ್ವ ಕಾಲೇಜು :** ಬೆಳಗ್ಗೆ 8.30ಕ್ಕೆ ಜಿಲ್ಲಾ ಮಟ್ಟದ ಥ್ರೋಬಾಲ್, ಕಬಡ್ಡಿ ಮತ್ತು ವಾಲಿಬಾಲ್ ಪಂದ್ಯಾವಳಿ, ಅಧ್ಯಕ್ಷತೆ : ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಉದ್ಘಾಟನೆ : ಕಾರ್ಯದರ್ಶಿ ಪಿ. ವಿಶ್ವನಾಥ್, ಮುಖ್ಯ ಅತಿಥಿಗಳು : ಹೆಚ್.ಕೆ. ರಮೇಶ್, ಎನ್. ಮಹೇಶ್, ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಸಂಘದ ಕೋಶಾಧ್ಯಕ್ಷ ಶೈಲರಾಮಣ್ಣವರ್, ಬಹುಮಾನ ವಿತರಣೆ : ಎಸ್. ಶಿವಲಿಂಗಯ್ಯ, ಅಬ್ದುಲ್ ಜಮೀಲ್, ಸ್ಥಳ: ಬೇಡನ್ ಪೊವೆಲ್ ಪಬ್ಲಿಕ್ ಸ್ಕೂಲ್ ಕ್ರೀಡಾ ಮೈದಾನ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ :** 61ನೇ ರಾಷ್ಟ್ರೀಯ ಔಷಧ ಸಪ್ತಾಹ, ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಲಲಿತ ಮಹಲ್, ಬನ್ನಿಮಂಟಪ ಬಡಾವಣೆ ಮತ್ತು ಆಕಾಶವಾಣಿ ವೃತ್ತದಲ್ಲಿ, ಬೆಳಗ್ಗೆ 10 ರಿಂದ.

■ **ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ :** ವಿಶ್ವ ಸಕ್ಕರೆ ಕಾಯಿಲೆ ದಿನಾಚರಣೆ ಅಂಗವಾಗಿ ಸಕ್ಕರೆ ಕಾಯಿಲೆ ಬಗ್ಗೆ ಅರಿವು ಮೂಡಿಸುವ ವಾಕಥಾನ್, ಉದ್ಘಾಟನೆ : ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ಅಧ್ಯಕ್ಷ ಎನ್. ನಂಜಪ್ಪ, ಉಪಸ್ಥಿತರು: ಡಾ. ರಘು, ಡಾ. ಎಸ್.ಪಿ. ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆ, ಮೈಸೂರು ವಿಶ್ವವಿದ್ಯಾನಿಲಯ :** ಬುಡಕಟ್ಟು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪಾತ್ರದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಸ್ಥಳ: ಲಲಿತಾ ಕಲಾಮಂದಿರ, ಮೈಸೂರು ವಿವಿ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕನ್ನಡ ವಿಭಾಗ:** ದತ್ತಿ ಉಪನ್ಯಾಸ ಕಾರ್ಯಕ್ರಮ, ಗೌಡರ ಸಿದಪ್ಪ ಮತ್ತು ಶರಣೆ ಮರಮ್ಮನವರ ದತ್ತಿ, ಉದ್ಘಾಟನೆ: ಮಾಜಿ ಶಾಸಕ ಡಿ.ಮಾದೇಗೌಡ, ದತ್ತಿ ಉಪನ್ಯಾಸ: ಪ್ರೊ.ನಂಜಯ್ಯ ಹೊಂಗನೂರು, ಅಧ್ಯಕ್ಷತೆ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಮುಖ್ಯ ಅತಿಥಿಗಳು: ಕಾಲೇಜು ಪ್ರಾಂಶುಪಾಲ ಪ್ರೊ.ಸೋಮಣ್ಣ, ಪ್ರಾಸ್ತಾವಿಕ ನುಡಿ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು : ಪ್ರೊ. ಮೈಸೂರು ಕೃಷ್ಣಮೂರ್ತಿ, ಡಾ. ಎಸ್. ಮಂಜು, ಸ್ಥಳ: ಕಾಲೇಜು ಸಭಾಂಗಣ, ವಾಲ್ಮೀಕಿ ರಸ್ತೆ, ಪಡುವಾರಹಳ್ಳಿ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತೀಯ ಗ್ರಾಹಕ ಪಂಚಾಯತ್:** ಗ್ರಾಹಕ ಜಾಗೃತಿ ಸಮಾವೇಶ, ಉದ್ಘಾಟನೆ: ಉಪ ಪೊಲೀಸ್ ಆಯುಕ್ತೆ ಗೀತಾ ಪ್ರಸನ್ನ, ಉಪಸ್ಥಿತರು: ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಎಬಿಜಿಪಿ ಕೇಂದ್ರೀಯ ಮಹಿಳಾ ಜಾಗರಣ ಪ್ರಮುಖ್ ಆಶಾಸಿಂಗ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ರವಿಶಂಕರ್, ಸ್ಥಳ: ವಿದ್ಯಾವರ್ಧಕ ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ, ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ, ಸ್ಥಳ: 510, 13ನೇ ಮುಖ್ಯರಸ್ತೆ, ಸರಸ್ವತಿಪುರಂ, ಸಂಜೆ 4.30ರಿಂದ.

■ **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು (ರಾಷ್ಟ್ರೀಯ ಸೇವಾ ಯೋಜನೆ) :** ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಲಯನ್ ಸಿ.ಆರ್. ದಿನೇಶ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಎನ್. ಉದಯಶಂಕರ್, ಮುಖ್ಯ ಅತಿಥಿಗಳು : ಬಿ.ಸಿ. ಯೋಗಾನಂದ್, ಸಿ.ಮಲ್ಲೇಶ್, ಉಮಾಕಾಂತ್, ವಿ.ಮಹೇಶ್‌ಕುಮಾರ್, ಜಿ.ಕೃಷ್ಣಕುಮಾರ್, ಎಂ.ಎನ್. ಶಿವಣ್ಣ, ಮಹೇಶ್ ಕುಮಾರ್, ಸ್ಥಳ: ಗಣೇಶಪುರಿ ನಿತ್ಯಾನಂದ ಆಶ್ರಮ, ಚಾಮುಂಡಿಬೆಟ್ಟದ ಪಾದದ ಹತ್ತಿರ, ಬೆಳಗ್ಗೆ 10ಕ್ಕೆ.

■ **ಶ್ರೀ ಉತ್ತರಾದಿ ಮಠ:** ಪಂಡಿತ್ ಶ್ರೀ ಪ್ರದ್ಯುಮ್ನಾಚಾರ್ಯ ಜೋಷಿ ಅವರಿಂದ ಭಗವದ್ಗೀತೆ ಅಧ್ಯಾಯ–1 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ:** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ನಖಶಿಖಾಂತ–ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ, 9.00 ಕನ್ನಡ ಕಜ್ಜಾಯ, 9.05 ವೃತ್ತಿ ಮಾರ್ಗದರ್ಶನ–ಜಾನಪದ ಅಧ್ಯಯನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಅಂಬಳಿಕೆ ಹಿರಿಯಣ್ಣ ಅವರೊಂದಿಗೆ ಮಾತುಕತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಸೃಷ್ಟಿಕರ್ತನಿಗೆ ಸವಾಲು", ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಸ್ಟ್ಯಾನ್ಲೀ ಪಾರ್ಕರ್, ಡಾ. ಸುಷ್ಮಾ ಕೃಷ್ಣಮೂರ್ತಿ, 4.00 ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು ಸಂಗೀತ ಸಂಯೋಜಕಿ ಹಾಗೂ ಗಾಯಕಿ ಸುನೀತಾ ಆಚಾರ್ಯ, 5.30 ಸಿರಿ ತೋಟಗಾರಿಕೆ–ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ನೈಸರ್ಗಿಕವಾಗಿ ತೋಟಗಾರಿಕೆ ಹಾಗೂ ಮೌಲ್ಯವರ್ಧನೆಯಲ್ಲಿನ ಅನುಭವ ಕುರಿತು ಬಿ.ಸಿ. ಮೋಹನ್ ಕುಮಾರ್ ಅವರೊಂದಿಗೆ ಸಂದರ್ಶನ, 10.00 ಹಳ್ಳಿಹಾಡು–ಬಸವರಾಜಯ್ಯ ಮತ್ತು ತಂಡ, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು

ಮುಸ್ಲಿಂ ಸಮುದಾಯದಲ್ಲಿ ಪ್ರತಿಮೆ ನಿರ್ಮಾಣ ಮಾಡುವಂತಿಲ್ಲ: ಸಿಎಂ ಇಬ್ರಾಹಿಂ

- ನಾವು ಪ್ರತಿಮೆ ಬದಲು ಮೈಸೂರು ಇಲ್ಲ ಕೋಲಾರದಲ್ಲಿ ಟಿಪ್ಪು ವಿಶ್ವವಿದ್ಯಾನಿಲಯ ಮಾಡ್ತೇವೆ
- ಮೈಸೂರು ಅರಮನೆ ಮೇಲಿರುವ ಗುಂಬಜ್ ಆಕಾರವು ಮಸೀದಿ ರೀತಿ ಕಾಣುತ್ತೆ; ಅದನ್ನು ಒಡಿರಿ...!

ಮೈಸೂರು, ನ.15(ಜಿಎ)- ಮುಸ್ಲಿಂ ಸಮುದಾಯದಲ್ಲಿ ಪ್ರತಿಮೆ ನಿರ್ಮಾಣ ಮಾಡುವಂತಿಲ್ಲ. ಅದರ ಬದಲಿಗೆ ಮೈಸೂರು ಅಥವಾ ಕೋಲಾರದಲ್ಲಿ ಟಿಪ್ಪು ಹೆಸರಿನಲ್ಲಿ ವಿಶ್ವವಿದ್ಯಾನಿಲಯ ನಿರ್ಮಾಣ ಮಾಡುತ್ತೇವೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದರು.

ಮೈಸೂರಿನ ಖಾಸಗಿ ಸಭಾಂಗಣದಲ್ಲಿ ಜೆಡಿಎಸ್ ಮುಖಂಡ ಅಬ್ದುಲ್ ಅಜೀಜ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಔತಣ ಕೂಟದಲ್ಲಿ ಭಾಗವಹಿಸಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೈಸೂರಲ್ಲಿ ಟಿಪ್ಪು ಪ್ರತಿಮೆ ನಿರ್ಮಾಣ ವಿಚಾರ ಪ್ರಸ್ತಾಪಿಸಿ ಮುಸ್ಲಿಂ ಸಮುದಾಯದಲ್ಲಿ ಪ್ರತಿಮೆ, ಫೋಟೋ ಸಂಸ್ಕೃತಿ ಇಲ್ಲ. ಪಾಪ, ತನ್ವೀರ್ ಸೇಠ್‌ಗೆ ಗೊತ್ತಿಲ್ಲ. ಅವರ ತಂದೆ 30 ವರ್ಷಗಳ ಕಾಲ ಈ ಭಾಗದ ಎಂಎಲ್‌ಎ ಆಗಿ ಸೇವೆ ಸಲ್ಲಿಸಿದ್ದಾರೆ. ಬೇಕಾದರೆ ಅವರ ಪ್ರತಿಮೆ ನಿರ್ಮಾಣ ಮಾಡಲಿ. ಏಕೆ ಅದನ್ನು ಮಾಡಿಲ್ಲ ಎಂದು ಪ್ರಶ್ನಿಸಿದರು.

ನಾವು ಪ್ರತಿಮೆ ನಿರ್ಮಾಣ ಮಾಡಲ್ಲ, ಅದರ ಬದಲಿಗೆ ಟಿಪ್ಪು ವಿಶ್ವವಿದ್ಯಾನಿಲಯ ನಿರ್ಮಾಣ ಮಾಡುತ್ತೇವೆ. ಮೈಸೂರು ಅಥವಾ ಕೋಲಾರದಲ್ಲಿ ಅವರ ಹೆಸರಿಗೆ ತಕ್ಕಂತೆ ಮಾಡುತ್ತೇವೆಯೇ ಹೊರತು ಪ್ರತಿಮೆ ಮಾಡುವ ವಿಚಾರ ನಮ್ಮ ಮುಸಲ್ಮಾನ ಧರ್ಮದಲ್ಲಿಲ್ಲ ಎಂದು ಶಾಸಕ ತನ್ವೀರ್ ಸೇಠ್‌ಗೆ ತಿರುಗೇಟು ನೀಡಿದರು.

ಟಿಪ್ಪು ಜಯಂತಿ ವಿಚಾರಕ್ಕೆ ಪ್ರತಿಕ್ರಿಯಿಸಿ, ದೇಶದ ರಾಷ್ಟ್ರಪತಿಗಳು ಟಿಪ್ಪು ಸುಲ್ತಾನ್‌ರನ್ನು ಹೊಗಳಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಜಗದೀಶ್ ಶೆಟ್ಟರ್ ಸೇರಿದಂತೆ ಮೈಸೂರಿನ ಮಹಾರಾಜರ ಮನೆತನದವರು ಕೂಡ ಟಿಪ್ಪು ಜಯಂತಿ ಆಚರಣೆ ಮಾಡಿದ್ದಾರೆ. ಟಿಪ್ಪು ಒಬ್ಬ ಹುತಾತ್ಮ, ನಮ್ಮ ನಾಡಿನ ಒಬ್ಬ ಹೋರಾಟಗಾರ. ನಮ್ಮ ಶತ್ರುಗಳಾದ ಬ್ರಿಟಿಷರು, ಟಿಪ್ಪು ಸೇರಿದಂತೆ ಅವರ ಇಡೀ ಕುಟುಂಬದವರಿಗಾಗಿ ನೂರಾರು ಎಕರೆಯಲ್ಲಿ ಸಮಾಧಿಗಳನ್ನು ನಿರ್ಮಿಸಿದ್ದಾರೆ. ಇಲ್ಲಿಗೆ ಇಂದಿಗೂ ಸಾವಿರಾರು ಜನ ಬರ್ತಾರೆ. ಪ್ರತಾಪ್ ಸಿಂಹ ನೀನೊಬ್ಬ ಪತ್ರಕರ್ತ, ಸಂಸದ ಬೇರೆ ಆಗಿದ್ದೀಯಾ. ಶತ್ರು ಮನೆಗೆ ಬಂದ್ರು ದೈವ ಭಾವದಿಂದ ನೋಡಬೇಕು. ಓಟಿಗಾಗಿ ಚಿಲ್ಲರೆ ಕೆಲಸ ಮಾಡಬೇಡ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ಅರಮನೆ ಮೇಲೂ ಗುಂಬಜ್ ಇದೆ: ಮೈಸೂರಿನಲ್ಲಿ ನಡೆಯುತ್ತಿರುವ ಗುಂಬಜ್ ವಿವಾದ ಕುರಿತು ಪ್ರತಿಕ್ರಿಯಿಸಿ, ಅರಮನೆಯ ಮೇಲಿರುವ ಗುಂಬಜ್ ಆಕಾರವು ಮಸೀದಿ ರೀತಿ ಕಾಣುತ್ತದೆ ಅದನ್ನು ಒಡಿರಿ ನೋಡೋಣ! ಕಟ್ಟಡಕ್ಕೂ, ಜಾತಿಗೂ ಏನು ಸಂಬಂಧ ಎಂದು ಪ್ರತಾಪ್ ಸಿಂಹರನ್ನು ಪ್ರಶ್ನಿಸಿದರು. ಮೈಸೂರು ಜನತೆಯನ್ನು ಕೇಳಿಕೊಳ್ಳುತ್ತೇನೆ. ಇಂತಹ ಪ್ರತಿನಿಧಿಯನ್ನು ಮೈಸೂರು ಜನತೆ ಆಯ್ಕೆ ಮಾಡಿದ್ದೀರಾ, ಇದು ಮೈಸೂರಿಗೆ ಅವಮಾನ.

ಬದುಕಿರುವವರ ಬಗ್ಗೆಯೇ ಕೆಟ್ಟದಾಗಿ ಮಾತನಾಡಬಾರದು. ಸತ್ತವರ ಬಗ್ಗೆ ಏಕೆ ಕೆಟ್ಟದಾಗಿ ಮಾತನಾಡುತ್ತೀರಾ. ಇದನ್ನು ಪ್ರತಾಪ್ ಸಿಂಹ ಅವರೇ ತಿದ್ದಿಕೊಳ್ಳಬೇಕು. ಶೃಂಗೇರಿ ಸ್ವಾಮಿಗಳು, ಸುತ್ತೂರು ಶ್ರೀಗಳು ಏನು ಹೇಳುತ್ತಾರೆ, ಅದನ್ನು ತಿಳಿದುಕೊಳ್ಳಬೇಕಿದೆ. ನಂಜನ ಗೂಡಿನ ನಂಜುಂಡೇಶ್ವರನಿಗೆ ಟಿಪ್ಪು ಪಚ್ಚೆ ವಜ್ರವನ್ನು ನೀಡಿದ್ದಾರೆ. ಅದನ್ನು ವಾಪಸ್ ಮಾಡಿ ನೋಡೋಣ? ದೇವಾಲಯದಲ್ಲಿ ಮೊದಲು ಆ ವಜ್ರಕ್ಕೆ ಆರತಿ ಮಾಡಿ ನಂತರ ನಂಜುಂಡೇಶ್ವರನಿಗೆ ಆರತಿ ಮಾಡುತ್ತಾರೆ. ಯಾಕೆ ಎಂದರೆ, ಅದು ಟಿಪ್ಪು ಸುಲ್ತಾನ್ ಮೇಲಿರುವ ಅಭಿಮಾನ, ಗೌರವ ತೋರುತ್ತದೆ. ಸುಲ್ತಾನರು ಸತ್ತು ನೂರಾರು ವರ್ಷವಾಗಿದೆ. ಆದರೂ ಇಂದಿಗೂ ಶೃಂಗೇರಿಯಲ್ಲಿ ಸಲಾಂ ಆರತಿ ಮಾಡುತ್ತಾರೆ. ಅವರಿಗೆ ಹೆದರಿ ಮಾಡುತ್ತಿಲ್ಲ. ಕೇವಲ ಪ್ರೀತಿಯಿಂದ ಮಾಡುತ್ತಿರುವುದು. ಇದು ನಿಜವಾದ ಬಾಂಧವ್ಯ, ಇದನ್ನು ನಾವು ಉಳಿಸಿಕೊಂಡು ಹೋಗಬೇಕಿದೆ. ಪ್ರತಾಪ್ ಸಿಂಹನಿಗೆ ದೇವರು ಸದ್ಬುದ್ಧಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ ಎಂದು ಹೇಳಿದರು.

ಜೆಡಿಎಸ್‌ನಲ್ಲಿ ಕಳೆ ಮಾತ್ರ ಪಕ್ಷದಿಂದ ಹೊರಗೆ ಹೋಗುತ್ತಿವೆ. ಫಲ ನೀಡುವ ಸಸಿಗಳು ಪಕ್ಷದಲ್ಲೇ ಉಳಿದುಕೊಂಡಿವೆ. ಅದಕ್ಕೆ ಉದಾಹರಣೆ ಜಿ.ಟಿ.ದೇವೇಗೌಡ್ರು ಮತ್ತು ಅವರ ಪುತ್ರ ಹರೀಶ್‌ಗೌಡ್ರು. ಮಾವನಹಳ್ಳಿ ಸಿದ್ದೇಗೌಡ ಸಿದ್ದರಾಮಯ್ಯ ಪರ ಓಟು ಹಾಕಿ ಎಂದು ಈ ಹಿಂದೆಯೇ ಭಾಷಣ ಮಾಡಿದ್ದರು. ನಾನು ರಾಜಶೇಖರ್ ಮೂರ್ತಿ, ಸಾಹುಕಾರ್ ಚೆನ್ನಯ್ಯ, ಗುರುಪಾದ ಸ್ವಾಮಿ ಸೇರಿದಂತೆ 1972ರಿಂದ ನಾನು ಮೈಸೂರನ್ನು ನೋಡಿದ್ದೇನೆ. ಮುಂದಿನ ದಿನಗಳಲ್ಲಿ ಮೈಸೂರು ಜಿಲ್ಲೆ ಕಾಂಗ್ರೆಸ್ ಮುಕ್ತ ಜಿಲ್ಲೆಯಾಗಲಿದೆ.

–ಸಿ.ಎಂ. ಇಬ್ರಾಹಿಂ



ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ನಾಯಕ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅಭಿನಂದಿಸಿ, ಶುಭ ಕೋರಿದರು. ಈ ವೇಳೆ ವಿಧಾನಪರಿಷತ್ ಸದಸ್ಯ ಮಂಜೇಗೌಡ, ಮುಖಂಡರಾದ ಆರ್.ಲಿಂಗಪ್ಪ, ಸಿ.ಮಹದೇಶ್, ರಾಮು ಇತರರು ಉಪಸ್ಥಿತರಿದ್ದರು.

ನೂರಕ್ಕೆ ನೂರು ಸಿದ್ದರಾಮಯ್ಯ ಗೆಲ್ಲಲ್ಲಾ: ಸಿ.ಎಂ. ಇಬ್ರಾಹಿಂ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೋಲಾರದಿಂದ ಸ್ಪರ್ಧಿಸುತ್ತಿರುವ ವಿಚಾರವಾಗಿ ಮಾತನಾಡಿದ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಬಹಳ ಸಂತೋಷ ಆಗ್ತಿದೆ. ಕೋಲಾರಕ್ಕೆ ಹೋಗ್ಬೇಡಿ. ಎಲ್ಲರೂ ಸೇರಿ ನಿಮ್ಮನ್ನ ಬಲಿ ಕೊಡ್ತಾರೆ. ನಿಮ್ಮ ಕ್ಷೇತ್ರ ವರುಣಾದಲ್ಲಿಯೇ ನಿಲ್ಲಿ ಎಂದು ನಾನು ನಿನ್ನೆ ಸುದ್ದಿಗೋಷ್ಠಿ ಮೂಲಕ ಹೇಳಿದ್ದೇನೆ. ಈ ಬಾರಿ ಸಿದ್ದರಾಮಯ್ಯ ನೂರಕ್ಕೆ ನೂರು ಗೆಲ್ಲುವುದಿಲ್ಲ. ಮುಖ್ಯಮಂತ್ರಿ ಆಗಿದ್ದವರು ಇಲ್ಲಿ ಜಿ.ಟಿ.ದೇವೇಗೌಡರ ಮುಂದೆ ಗೆಲ್ಲಲು ಸಾಧ್ಯವಾಗಲಿಲ್ಲ. ಕಾಣದ ಊರಿಗೆ ಹೋದರೆ ಗೆಲುವು ಕಷ್ಟ. ಕೋಲಾರದಲ್ಲಿ ಇವರ ಮತದಾರರು ಇಲ್ಲ. ಮುಸ್ಲಿಂರು ತೊಂಬತ್ತು ಭಾಗ ಈಗಾಗಲೇ ನಮ್ಮ ಪಕ್ಷಕ್ಕೆ ಬಂದಾಗಿದೆ. ಅವರೆಲ್ಲರೂ ಜೆಡಿಎಸ್‌ಗೆ ಓಟ್ ಮಾಡಲಿದ್ದಾರೆ ಎಂದರು.

61ನೇ ರಾಷ್ಟ್ರೀಯ ಔಷಧ ಸಪ್ತಾಹಕ್ಕೆ ಚಾಲನೆ



ಮೈಸೂರು,ನ.15(ಎಸ್‌ಪಿಎನ್)–ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ರಾಷ್ಟ್ರೀಯ ಔಷಧೀಯ ಸಂಘ(ಐಪಿಎ) ಮೈಸೂರು ಶಾಖೆ ಮತ್ತು ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ ಜಂಟಿಯಾಗಿ ಆಯೋಜಿಸಿರುವ 61ನೇ ರಾಷ್ಟ್ರೀಯ ಔಷಧ ಸಪ್ತಾಹಕ್ಕೆ ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ಸೋಮವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸಾರ್ವಜನಿಕರ ಆರೋಗ್ಯದ ಪ್ರಾಮುಖ್ಯತೆ ಮತ್ತು ಪ್ರಸ್ತುತತೆಯ ಬಗ್ಗೆ ನಿರ್ದಿಷ್ಟ ಮತ್ತು ಫಾರ್ಮಸಿ ವೃತ್ತಿಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದೆ. ಅಲ್ಲದೆ, ಆಧುನಿಕರಣದ ಬಗ್ಗೆ ಎಲ್ಲಾ ಫಾರ್ಮಸಿಸ್ಟ್‌ಗಳು ತಿಳಿದುಕೊಂಡಿರಬೇಕು ಎಂದು ಸಲಹೆ ನೀಡಿದರು. ಈ ವರ್ಷದ ಥೀಮ್ 'ಫಾರ್ಮಸಿ ಆಫ್ ದಿ ವರ್ಲ್ಡ್–ಇಂಡಿಯಾ' ಘೋಷಣೆ ಮಾಡಲಾಗಿದೆ. ಈ ಘೋಷಣೆಯ ಮೂಲಕ ಸಾರ್ವಜನಿಕರು, ಇತರೆ ಆರೋಗ್ಯ ಪೂರೈಕೆದಾರರು ಮತ್ತು ಅಧಿಕಾರಿಗಳಲ್ಲಿ ಎನ್‌ಪಿಡಬ್ಲ್ಯೂ ಥೀಮ್ ಮತ್ತು ಆರೋಗ್ಯ ವ್ಯವಸ್ಥೆಗೆ ಔಷಧಿಕಾರರು ನೀಡುವ ಅಮೂಲ್ಯ ಕೊಡುಗೆಗಳ ಬಗ್ಗೆ ಜಾಗೃತಿ ಮೂಡಿಸುವಂತೆ ಮನವಿ ಮಾಡಿದರು. ಈ ವೇಳೆ ಕಾವೇರಿ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಎನ್.ಮಂಜುನಾಥ್, ಐಪಿಎ ಮೈಸೂರು ಘಟಕದ ಕಾರ್ಯದರ್ಶಿ ಡಾ.ಆರ್.ಎಸ್.ಚಂದನ್, ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್‌ಕುಮಾರ್ ಸ್ವಾಗತಿಸಿದರು.

ಮುರುಘಾ ಶ್ರೀ ಪ್ರಕರಣ: ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಿ ರೈತರು, ವಿವಿಧ ಸಂಘಟನೆಗಳ ಪ್ರತಿಭಟನೆ



ಮೈಸೂರು,ನ.15(ಎಸ್‌ಪಿಎನ್)–ಅಪ್ರಾಪ್ತೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಚಿತ್ರದುರ್ಗದ ಶಿವಮೂರ್ತಿ ಮುರುಘಾ ಶ್ರೀ ವಿರುದ್ಧ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಉನ್ನತ ಮಟ್ಟದ ತನಿಖೆ ನಡೆಸುವಂತೆ ಒತ್ತಾಯಿಸಿ ರೈತ ಸಂಘಟನೆಯ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಯ ಪದಾಧಿಕಾರಿಗಳು ಹೂಟಗಳ್ಳಿಯಲ್ಲಿರುವ ಒಡನಾಡಿ ಸಂಸ್ಥೆ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ವಹಿಸಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಪ್ರಾಪ್ತೆಯರ ಮೇಲೆ ಲೈಂಗಿಕ ಶೋಷಣೆ ಮಾಡಿರುವ ಮುರುಘಾ ಶ್ರೀಗಳ ವಿರುದ್ಧ ಪ್ರಕರಣ ದಾಖಲಿಸಿದ ಅಪ್ರಾಪ್ತ ಬಾಲಕಿಯರ ಪೋಷಕರ ಮೇಲೂ ಇದೀಗ ಚಿತ್ರದುರ್ಗ ಪೊಲೀಸರು ಪ್ರಕರಣ ದಾಖಲಿಸಿ, ಬಂಧಿಸಿದ್ದಾರೆ. ಇವರನ್ನು ಕೂಡಲೇ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಹಲವು ವರ್ಷಗಳಿಂದ ಮುರುಘಾ ಮಠದಲ್ಲಿ ನಡೆದಿದೆ ಎನ್ನಲಾದ ಹಲವು ಹಗರಣಗಳು ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು. ಚಿತ್ರದುರ್ಗ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಹಾಗೂ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ದೂರು ದಾಖಲಿಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರಗತಿಪರ ಮುಖಂಡರಾದ ಶಿವಕುಮಾರ್, ಬೆಟ್ಟೇಗೌಡ, ಲತಾ ಕೆ.ಬಿದ್ದಪ್ಪ, ಬೂಕನಹಳ್ಳಿ ನಂಜುಂಡಸ್ವಾಮಿ, ಮಾಜಿ ಮೇಯರ್ ಪುರುಷೋತ್ತಮ್, ಚೋರನಹಳ್ಳಿ ಶಿವಣ್ಣ, ನೇತ್ರಾವತಿ, ಒಡನಾಡಿಯ ಸ್ಟ್ಯಾನ್ಲಿ, ಪರಶು, ಮಡಕಹಳ್ಳಿ ಮಹೇಶ್, ರೈತ ಮುಖಂಡರಾದ ಹೊಸಕೋಟೆ ಬಸವ ರಾಜು, ಮರಂಕಯ್ಯ, ವಿಜಯೇಂದ್ರ ಉಗ್ರ ನರಸಿಂಹೇಗೌಡ, ಪ್ರಸನ್ನ ಎನ್.ಗೌಡ, ಆನಂದೂರು ಪ್ರಭಾಶ್ ಹಾಗೂ ಇತರರು ಉಪಸ್ಥಿತರಿದ್ದರು. ನಂತರ ದಲಿತ ಸಂಘಟನೆ, ರೈತ ಸಂಘಟನೆ ಹಾಗೂ ಪ್ರಗತಿಪರ ಮುಖಂಡರು ಗೌಪ್ಯ ಸಭೆ ನಡೆಸಿ, ಪ್ರಕರಣ ಕುರಿತು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಮುಂದಿನ ಹೋರಾಟ ಹಮ್ಮಿಕೊಳ್ಳುವ ಕುರಿತು ಮಾತು ಕತೆ ನಡೆಸಿದರಲ್ಲದೆ, ಈ ಸಂದರ್ಭದಲ್ಲಿ 2ನೇ ಪೋಕ್ಸೋ ಪ್ರಕರಣದಲ್ಲಿ ಸಂತ್ರಸ್ತೆ ಬಾಲಕಿ ತಾಯಿಯನ್ನು ಚಿತ್ರದುರ್ಗ ಪೊಲೀಸರು ಬಂಧಿಸಿರುವುದನ್ನು ಖಂಡಿಸಿ, ರಾಜ್ಯ ವಿವಿಧೆಡೆ ಪ್ರತಿಭಟನೆ ನಡೆಸುವ ಕುರಿತು ಚರ್ಚೆ ನಡೆಸಲಾಯಿತು.

ಸಕ್ಕರೆ ಕಾಯಿಲೆ ಇರುವವರಿಗೆ ಬೇರೆ ಊಟ: ಹೊಸ ಮೆನುವಿಗೆ ರೈಲ್ವೆ ಮಂಡಳಿ ಸೂಚನೆ

ನವದೆಹಲಿ: ಆರೋಗ್ಯ ದೃಷ್ಟಿಯಿಂದ ಮಧುಮೇಹ ಹೊಂದಿರುವವರಿಗೆ ಹಾಗೂ ಶಿಶುಗಳಿಗೆ ಸೂಕ್ತವಾದ ಆಹಾರವನ್ನು ನೀಡಲು ಸ್ಥಳೀಯ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗಳ ಮೆನುವನ್ನು ಕಸ್ಟಮೈಸ್ ಮಾಡಲು ರೈಲ್ವೆ ಮಂಡಳಿಯು ಐಆರ್‌ಟಿಸಿಗೆ ಅನುಮೋದನೆಯನ್ನು ನೀಡಿದೆ.

ಈ ಕ್ರಮವನ್ನು ರೈಲುಗಳಲ್ಲಿನ ಅಡುಗೆ ಸೇವೆಗಳನ್ನು ಸುಧಾರಿಸಲು ಮತ್ತು ಪ್ರಯಾಣಿಕರಿಗೆ ಹೆಚ್ಚಿನ ಆಯ್ಕೆಗಳನ್ನು ನೀಡುವ ಗುರಿ ಹೊಂದಿದೆ ಎಂದು ರೈಲ್ವೆ ಮಂಡಳಿ ಕಳುಹಿಸಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ರೈಲುಗಳಲ್ಲಿ ಅಡುಗೆ ಸೇವೆಯನ್ನು ಸುಧಾರಿಸುವ ಸಲುವಾಗಿ, ಪ್ರಾದೇಶಿಕ ಆಹಾರ ಪದ್ಧತಿಗಳು, ಸೀಸನ್‌ಗೆ ತಕ್ಕಂತೆ ಮಾಡಬಹುದಾದ ಭಕ್ಷ್ಯಗಳು, ಹಬ್ಬಗಳ ಸಮಯದಲ್ಲಿ ಹೀಗೆ ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ಒಳಗೊಂಡಂತೆ ಮೆನುವನ್ನು ಕಸ್ಟಮೈಸ್ ಮಾಡಲು ಐಆರ್‌ಟಿಸಿಗೆ ಅನುಮತಿ ನೀಡಲು ನಿರ್ಧರಿಸಲಾಗಿದೆ. ಶುಗರ್ ಇರುವವರಿಗೆ, ಮಗುವಿಗೆ, ಆರೋಗ್ಯ ಸಮಸ್ಯೆ ಹೊಂದಿರುವ ಪ್ರಯಾಣಿಕರಿಗೆರಾಗಿ ಆಧಾರಿತ ಸ್ಥಳೀಯ ಉತ್ಪನ್ನಗಳನ್ನು ನೀಡುವಂತೆ ಪ್ರಕಟಿಸಲಾಗಿದೆ.

ಟಾಲಿವುಡ್ ಸೂಪರ್ ಸ್ಟಾರ್ ಕೃಷ್ಣ ವಿಧಿವಶ

ಹೈದರಾಬಾದ್: ಅನಾರೋಗ್ಯದಿಂದ ಬಳಲುತ್ತಿದ್ದ ಮಹೇಶ್ ಬಾಬು ಅವರ ತಂದೆ ಹಾಗೂ ಟಾಲಿವುಡ್‌'ನ ಸೂಪರ್ ಸ್ಟಾರ್ ನಟ ಕೃಷ್ಣ ಘಟ್ಟಮನೇನಿ (80) ಅವರು ಮಂಗಳವಾರ ವಿಧಿವಶರಾಗಿದ್ದಾರೆ. ಹೃದಯಾಘಾತದಿಂದ ಅಸ್ವಸ್ಥರಾಗಿದ್ದ ಕೃಷ್ಣ ಅವರನ್ನು ನಿನ್ನೆ ಹೈದರಾಬಾದ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಗಿನ ಜಾವ 4 ಗಂಟೆಗೆ ನಿಧನರಾಗಿದ್ದಾರೆ.



ಕೃಷ್ಣ ಅವರ ಮೂಲ ಹೆಸರು ಘಟ್ಟಮನೇನಿ ಶಿವರಾಮ ಕೃಷ್ಣಮೂರ್ತಿ. ಇವರು ಸುಮಾರು 350 ಚಿತ್ರಗಳಲ್ಲಿ ನಟಿಸಿದ್ದಾರೆ. ಆ ಕಾಲದ ಅಗ್ರಗಣ್ಯ ನಟರಲ್ಲಿ ಇವರೂ ಒಬ್ಬರು. ಕೃಷ್ಣ ಅವರು ನಟ ಮಾತ್ರವಲ್ಲದೆ ಒಬ್ಬ ಯಶಸ್ವಿ ನಿರ್ದೇಶಕ ಹಾಗೂ ನಿರ್ಮಾಪಕ ಕೂಡ ಆಗಿದ್ದರು. ಅವರ ಚಿತ್ರರಂಗದ ಸೇವೆಯನ್ನು ಗುರುತಿಸಿ ಅವರಿಗೆ 2009ರಲ್ಲಿ ಪದ್ಮಭೂಷಣ ಪ್ರಶಸ್ತಿ ಕೂಡ ನೀಡಿ, ಗೌರವಿಸಲಾಗಿತ್ತು. ನಟ ಕೃಷ್ಣ ತೆಲುಗು ಸ್ಟಾರ್ ನಟ ಮಹೇಶ್ ಬಾಬು ಅವರ ತಂದೆ ಹಾಗೂ ಟಿಡಿಪಿ ನಾಯಕ ಜಯ್ ಗಲ್ಲಾ ಅವರ ಮಾವ ಕೂಡ ಆಗಿದ್ದಾರೆ. 1980ರ ದಶಕದಲ್ಲಿ ಅವರು ಕಾಂಗ್ರೆಸ್ ಪಕ್ಷ ಸೇರಿ ಸಂಸದರು ಆಗಿದ್ದರು. ಆದರೆ, ಕೃಷ್ಣ ಅವರು ತಮಿಳುನಾಡಿನಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆಯಾದ ಬಳಿಕ ರಾಜಕೀಯವನ್ನು ತೊರೆದಿದ್ದರು.

1965ರಲ್ಲಿ ಅವರು ನಟನೆಯ ಜರ್ನಿ ಆರಂಭಿಸಿದ್ದ ಕೃಷ್ಣ ಅವರು, ಪೌರಾಣಿಕ, ಐತಿಹಾಸಿಕ ಸೇರಿದಂತೆ ಹಲವು ಬಗೆಯ ಪಾತ್ರಗಳಿಗೆ ಜೀವ ತುಂಬುವ ಮೂಲಕ ಅವರು ಅಭಿಮಾನಿಗಳ ಮನ ಗೆದ್ದಿದ್ದಾರೆ. ಕೃಷ್ಣ ಅವರ ಅಂದಾಜು 25 ಸಿನಿಮಾಗಳಲ್ಲಿ ಮಹೇಶ್ ಬಾಬು ಬಾಲನಟನಾಗಿ ಅಭಿನಯಿಸಿದ್ದರು. ಸೆಪ್ಟೆಂಬರ್ 28ರಂದು ಕೃಷ್ಣ ಅವರ ಪತ್ನಿ ಇಂದಿರಾ ದೇವಿ ನಿಧನ ಹೊಂದಿದರು. ಆ ಬಳಿಕ ಕೃಷ್ಣ ಅವರು ಖಿನ್ನತೆಗೆ ಒಳಗಾದರು ಎನ್ನಲಾಗಿದೆ. ಈ ವರ್ಷ ಆರಂಭದಲ್ಲಿ ಕೃಷ್ಣ ಅವರ ಹಿರಿಯ ಪುತ್ರ ರಮೇಶ್ ಬಾಬು ಕೂಡ ಅನಾರೋಗ್ಯದಿಂದ ಇಹಲೋಕ ತ್ಯಜಿಸಿದ್ದರು.

ಮೋದಿ ಸಂತಾಪ: ಸೂಪರ್ ಸ್ಟಾರ್ ಕೃಷ್ಣ ಅವರ ನಿಧನಕ್ಕೆ ಪ್ರಧಾನಿ ಮೋದಿ ಕಂಬನಿ ಮಿಡಿದಿದ್ದು, ಟ್ವೀಟ್ ಮೂಲಕ ಸಂತಾಪ ಸೂಚಿಸಿದ್ದಾರೆ. ಕೃಷ್ಣ ಅವರ ವೃತ್ತಿ ಜೀವನದ ಸಾಧನೆಯನ್ನು ಕೊಂಡಾಡುತ್ತಲೇ, ದುಃಖದಲ್ಲಿರುವ ಕೃಷ್ಣ ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ. ಕೃಷ್ಣ ಲೆಜೆಂಡರಿ ನಟರಾಗಿದ್ದು, ತಮ್ಮ ನಟನೆ ಮೂಲಕ ಅಸಂಖ್ಯಾತ ಅಭಿಮಾನಿಗಳ ಹೃದಯದಲ್ಲಿ ಇದ್ದರು ಎಂದು ಟ್ವಿಟ್ ಮೂಲಕ ಸಂತಾಪ ಸೂಚಿಸಿದ್ದಾರೆ.

ಯುವ ಪರಿವರ್ತಕರ ಆಯ್ಕೆಗೆ ನೇರ ಸಂದರ್ಶನ

ಮೈಸೂರು, ನ.15– ಕರ್ನಾಟಕ ಸರ್ಕಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜನಾರೋಗ್ಯ ಕೇಂದ್ರ ಪಿಪಿಡಿಯಾಲಜಿ ವಿಭಾಗ, ನಿಮ್ಹಾನ್ಸ್ ಬೆಂಗಳೂರು ಸಹಯೋಗದಲ್ಲಿ ಅನುಷ್ಠಾನಗೊಂಡಿರುವ ಹಾಗೂ ರಾಜ್ಯ ಸರ್ಕಾರದ ಅನುದಾನಿತ ಯೋಜನೆಯಾದ ಯುವ ಜನ ಮಾನಸಿಕ ಆರೋಗ್ಯಕ್ಕೆ ಪೂರಕ ಸೇವೆಗಳ ಸಮಗ್ರ ಅಭಿವೃದ್ಧಿ ಮತ್ತು ಅನುಷ್ಠಾನ ಯೋಜನೆಯಡಿಯಲ್ಲಿ ಯುವ ಸ್ಪಂದನ ಕಾರ್ಯಕ್ರಮವು ಅನುಷ್ಠಾನಗೊಂಡಿದ್ದು, ಗೌರವ ಧನದ ಆಧಾರದಲ್ಲಿ ಯುವ ಪರಿವರ್ತಕರ ಹುದ್ದೆಗೆ ಯುವಕ/ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. 21ರಿಂದ 35 ವರ್ಷದೊಳಗಿನ ಪದವಿ ಹಾಗೂ ಮೇಲ್ಪಟ್ಟ ವಿದ್ಯಾಭ್ಯಾಸ ಮಾಡಿರುವ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡುವ, ಸಮುದಾಯದಲ್ಲಿ ಕೆಲಸ ಮಾಡಲು ಆಸಕ್ತಿ ಇರುವ, ಹುಮಸ್ಸು, ಉತ್ತಮ ಅಂತರ ವ್ಯಕ್ತಿತ್ವ, ಸಂವಹನ ಕೌಶಲ್ಯದ ಜೊತೆಗೆ ಸಮುದಾಯದಲ್ಲಿ ಯುವ ಜನರಿಗೆ ತರಬೇತಿಯಂತಹ ಕಾರ್ಯಕ್ರಮಗಳನ್ನು ನಡೆಸಲು ಆಸಕ್ತಿ ಹೊಂದಿರುವ, ಮೈಸೂರು ಜಿಲ್ಲೆಯಲ್ಲಿ ಪ್ರಯಾಣಿಸುವಂತಹ ಸೇವಾ ಮನೋಭಾವ ಹೊಂದಿರುವ, ಅರ್ಹತಾ ಮಾನದಂಡಗಳನ್ನು ಹೊಂದಿರುವ ಅಭ್ಯರ್ಥಿಗಳು ತಮ್ಮ ಸ್ವ–ವಿವರಗಳು ಮತ್ತು ಅಂಕಪಟ್ಟಿಗಳೊಂದಿಗೆ ನ.18ರಂದು ಬೆಳಿಗ್ಗೆ 12.30 ಗಂಟೆಗೆ ನೇರ ಸಂದರ್ಶನಕ್ಕೆ ಹಾಜರಾಗಬೇಕು. ಸಂದರ್ಶನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್ ಇಲ್ಲಿ ನಡೆಯಲಿದೆ. ಮಾಹಿತಿಗೆ–0821–2564179, 2444922, ಮೊ.ಸಂ: 8050417084

ಪ್ರಿಯತಮೆ ಕೊಂದು ತುಂಡರಿಸಿದ ಪ್ರಕರಣ

ಆರೋಪಿಯೊಂದಿಗೆ ಸ್ಥಳ ಮಹಜರು; ಮರಣದಂಡನೆ ವಿಧಿಸಿ: ಶ್ರದ್ಧಾಳ ತಂದೆ

ನವದೆಹಲಿ: ಇಡೀ ದೇಶವನ್ನೇ ಬೆಚ್ಚಿ ಬೀಳಿಸಿರುವ ಶ್ರದ್ಧಾ ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸರಿಗೆ ನರಹಂತಕ ಆಫ್ತಾಬ್ ಬಗ್ಗೆ ಬಗೆದಷ್ಟು ಮಾಹಿತಿಗಳು ಹೊರಬರುತ್ತಿವೆ. ಇಂದು ಶ್ರದ್ಧಾ ಕೊಲೆಯಾದ ಚತ್ತಾರ್‌ಪುರದ ಫ್ಲಾಟ್ ಹಾಗೂ ಆಕೆಯ ದೇಹವನ್ನು ತುಂಡರಿಸಿ ಬಿಸಾಡಿದ್ದ ಮೆಹ್ರೌಲಿ ಅರಣ್ಯ ಪ್ರದೇಶದಲ್ಲಿ ಆರೋಪಿಯನ್ನು ಕರೆದೊಯ್ದು ಸ್ಥಳ ಮಹಜರು ನಡೆಸಿದ್ದಾರೆ.





ಆರೋಪಿ ಆಫ್ತಾಬ್ ಶ್ರದ್ಧಾಳ ಫೋನ್‌ನನ್ನು ಅರಣ್ಯದಲ್ಲಿಯೇ ಹೂತಿದ್ದ. ಆಕೆಯ ಕೊನೆಯ ಲೊಕೇಷನ್ ಪತ್ತೆಯಾದ ನಂತರ ಅದನ್ನು ಮರಳಿ ಪಡೆಯಲಾಗಿದೆ. ಶ್ರದ್ಧಾಳ ದೇಹವನ್ನು ತುಂಡರಿಸಲು ಬಳಸಿದ ಆಯುಧಕ್ಕಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಆಕೆ ಇನ್ನೂ ಜೀವಂತವಾಗಿದ್ದಾಳೆ ಎಂದು ಬಿಂಬಿಸಲು ಆಕೆಯ ಇನ್ಸ್ಟಾಗ್ರಾಮ್ ಖಾತೆಯನ್ನು ಜೂನ್‌ವರೆಗೂ ಆತನೇ ಬಳಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಶ್ರದ್ಧಾಳನ್ನು ಕೊಲೆ ಮಾಡಿದ ನಂತರ ಮುಂದೆ ಏನು ಮಾಡಬೇಕು ಎಂಬುದನ್ನು ತಿಳಿದುಕೊಳ್ಳಲು ಆತ ಗೂಗಲ್‌ನಲ್ಲಿ ಹುಡುಕಾಟ ನಡೆಸಿದ್ದಾನೆ. ಕೊಲೆ ಮಾಡಿ ರಕ್ತದ ಕಲೆಯೂ ಇಲ್ಲದಂತೆ ಮಾಡಿದ್ದರಿಂದ ಮೂಳೆ ಚೂರು ಬಿಟ್ಟರೆ ಬೇರೆ ಯಾವ ಸಾಕ್ಷ್ಯವೂ ಸಿಕ್ಕಿಲ್ಲ. ಮೂಳೆಯ ಡಿಎನ್‌ಎ ಪರೀಕ್ಷೆಗೆ ಪೊಲೀಸರು ಮುಂದಾಗಿದ್ದಾರೆ. ಪ್ರಿಯತಮೆಯನ್ನು ಕೊಂದು ಮತ್ತೊಬ್ಬಳ ಜೊತೆಗೆ ಆರೋಪಿ ರೊಮ್ಯಾನ್ಸ್ ನಡೆಸಿರುವುದನ್ನು ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾನೆ.

ಈ ಮಧ್ಯೆ ಆರೋಪಿ ಅಫ್ತಾಬ್‌ಗೆ ಮರಣದಂಡನೆ ಶಿಕ್ಷೆಯಾಗಬೇಕೆಂದು ಶ್ರದ್ಧಾಳ ಕುಟುಂಬಸ್ಥರು ಒತ್ತಾಯಿಸಿದ್ದಾರೆ. ದೆಹಲಿ ಪೊಲೀಸರು ಬಗ್ಗೆ ನಂಬಿಕೆಯಿದೆ. ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ. ಆಫ್ತಾಬ್ ಜೊತೆಗೆ ಶ್ರದ್ಧಾ ಸಂಪರ್ಕದಲ್ಲಿರುವುದು ನನಗೆ ಗೊತ್ತಿರಲಿಲ್ಲ. ವಾಸೈನಲ್ಲಿ ಮೊದಲ ದೂರು ದಾಖಲಿಸಿರುವುದಾಗಿ ಶ್ರದ್ಧಾಳ ತಂದೆ ವಿಕಾಸ್ ವಾಲ್ಕರ್ ಎಎನ್‌ಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಜುಲೈನಿಂದ ಶ್ರದ್ಧಾ ಮೆಸೇಜ್ ಮಾಡದಿದ್ದರಿಂದ ಆತಂಕಗೊಂಡಿದ್ದೆ. ಆಕೆಯ ಫೋನ್ ಸ್ವಿಚ್ ಆಫ್ ಆಗಿತ್ತು. ಇತರ ಸ್ನೇಹಿತರ ಬಳಿ ವಿಚಾರಿಸಿದ ನಂತರ ಆಕೆಯ ಸಹೋದರಿಗೆ ಮಾಹಿತಿ ನೀಡಿ, ಪೊಲೀಸರನ್ನು ಸಂಪರ್ಕಿಸಲಾಯಿತು ಎಂದು ಶ್ರದ್ಧಾಳ ಸ್ನೇಹಿತ ಲಕ್ಷ್ಮಣ್ ನಾದಿರ್ ಹೇಳಿದರು.

ದಾಖಲೆ ನಿರ್ಮಿಸಿದ ಕಾನೂನು ಪ್ರಾಧಿಕಾರ; ಸೌಹಾರ್ದಯುತವಾಗಿ 14.8 ಲಕ್ಷ ಕೇಸು ಇತ್ಯರ್ಥ

ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ರಾಜ್ಯಾದ್ಯಂತ ನಡೆಸಿದ ಲೋಕ ಅದಾಲತ್‌ನಲ್ಲಿ 14.72 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಿದೆ. ಇದರೊಂದಿಗೆ ಕೆಎಸ್‌ಎಲ್‌ಎಸ್‌ಎ ಹೊಸ ದಾಖಲೆ ನಿರ್ಮಿಸಿದ್ದು, ಒಂದೇ ದಿನದಲ್ಲಿ ಸೌಹಾರ್ದಯುತವಾಗಿ ಅತಿ ಹೆಚ್ಚು ಪ್ರಕರಣಗಳ ಇತ್ಯರ್ಥದಲ್ಲಿ ತನ್ನ ಹಿಂದಿನ ದಾಖಲೆಯನ್ನು ಮುರಿದಿದೆ.


ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ಕೆಎಸ್‌ಎಲ್‌ಎಸ್‌ಎ ಕಾರ್ಯಾಧ್ಯಕ್ಷ ನ್ಯಾಯಮೂರ್ತಿ ಬಿ.ವೀರಪ್ಪ ಮಾತನಾಡಿ, ಲೋಕಅದಾಲತ್‌ನಲ್ಲಿ 13,00,784 ವ್ಯಾಜ್ಯಪೂರ್ವ ಪ್ರಕರಣಗಳು, 1,75,900 ಬಾಕಿ ಪ್ರಕರಣಗಳು ಸೇರಿದಂತೆ ಒಟ್ಟು 14,77,285 ಪ್ರಕರಣಗಳು ಇತ್ಯರ್ಥಗೊಂಡಿದ್ದು, ಎಲ್ಲಾ ಪ್ರಕರಣಗಳಿಗೆ ಪರಿಹಾರವಾಗಿ 1,282 ಕೋಟಿ ರೂ.ನೀಡಲಾಗಿದೆ ಎಂದರು.

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಮತ್ತು ರಿಯಲ್ ಎಸ್ಟೇಟ್ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಸಂಬಂಧಿಸಿದ ಒಟ್ಟು 175 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, 11 ಕೋಟಿ ಪರಿಹಾರವಾಗಿ ನೀಡಲಾಗಿದೆ. ಜತೆಗೆ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮುಂದೆ ಬಾಕಿ ಉಳಿದಿರುವ 123 ಪ್ರಕರಣಗಳ ವಿಲೇವಾರಿಯೊಂದಿಗೆ 4 ಕೋಟಿ ರೂ.ಪರಿಹಾರ ನೀಡಲಾಗಿದೆ ಎಂದರು.

ಅರ್ಜಿ ಆಹ್ವಾನ

ಮೈಸೂರು,ನ.15–ಕೊಡಗು ಸೈನಿಕ ಶಾಲೆ ಹಾಗೂ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ಶಿಕ್ಷಣ ಸಚಿವಾಲಯವು 2023–24ರ ಶೈಕ್ಷಣಿಕ ವರ್ಷಕ್ಕಾಗಿ 6 ಮತ್ತು 9ನೇ ತರಗತಿಗಳಿಗೆ ಸೈನಿಕ ಶಾಲೆಗಳಲ್ಲಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಿದ್ದು, ನ.30ರೊಳಗೆ www.nta.ac.in/https://aissee.nta.nic.ac.in ಮೂಲಕ ಅರ್ಜಿ ಸಲ್ಲಿಸುವುದು. 2023 AISS EEರ ಪರೀಕ್ಷೆಗಾಗಿ ಪ್ರವೇಶ ಪಡೆಯಲಿಚ್ಚಿಸುವವರು https://aissee.nta.nic.ac.in ಮೂಲಕ ಅರ್ಜಿ ಸಲ್ಲಿಸಬಹುದು. ಪರೀಕ್ಷಾ ಶುಲ್ಕವನ್ನು ಆನ್‌ಲೈನ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ಅರ್ಜಿ ಸಲ್ಲಿಸಬಹುದು.

ಪಿಹೆಚ್.ಡಿ



ಮೈಸೂರು,ನ.15–ಡಾ. ನವಿತಾ ತಿಮ್ಮಯ್ಯ ಅವರ ಮಾರ್ಗದರ್ಶನದಲ್ಲಿ ಎಂ.ನಯನ ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಬುಡಕಟ್ಟು ಸಮುದಾಯಗಳಿಗೆ ಸಾಂವಿಧಾನಿಕ ಯಾವುದೇ ಸವಲತ್ತು ಸಂದಿಲ್ಲ

ಕಾನೂನು ವಿವಿ ವಿಶ್ರಾಂತ ಕುಲಪತಿ ಪ್ರೊ. ಈಶ್ವರ ಭಟ್ ವಿಷಾದ

ಮೈಸೂರು, ನ.15 (ಎಂಟಿವೈ)– ಬುಡಕಟ್ಟು ಸಮುದಾಯಗಳ ಉಳಿವಿಗೆ ಸಂವಿಧಾನ ವಿವಿಧ ಹಕ್ಕುಗಳನ್ನು ನೀಡಿದ್ದರೂ, ಅದು ಪರಿಣಾಮಕಾರಿಯಾಗಿ ಅರ್ಹ ಫಲಾನುಭವಿಗಳಿಗೆ ದೊರಕುತ್ತಿಲ್ಲ ಎಂದು ಕರ್ನಾಟಕ ರಾಜ್ಯ ಕಾನೂನು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ. ಈಶ್ವರ ಭಟ್ ಇಂದಿಲ್ಲಿ ವಿಷಾದಿಸಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಲಲಿತಾ ಕಲಾ ರಂಗ ಮಂದಿರದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ವಿವಿ ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆ ಸಹಯೋಗದಲ್ಲಿ ಆಯೋಜಿಸಿದ್ದ 'ಬಿರ್ಸಾ ಮುಂಡ ಜಯಂತಿ' ಹಾಗೂ ಜನಜಾತೀಯ ಗೌರವ ದಿವಸ್' ಅಂಗವಾಗಿ ಆಯೋಜಿಸಿದ್ದ 'ಬುಡಕಟ್ಟು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬುಡಕಟ್ಟು ಸಮುದಾಯಗಳ ಏಳಿಗೆಗಾಗಿ ಸರ್ಕಾರ ಹಲವು ಕಾರ್ಯಕ್ರಮ ರೂಪಿಸುತ್ತಿದೆ. ಸಂವಿಧಾನದಲ್ಲಿ ಬುಡಕಟ್ಟು ಸಮುದಾಯಕ್ಕೆ ಹಲವು ಹಕ್ಕುಗಳನ್ನು ಕಲ್ಪಿಸಲಾಗಿದೆ. ಆದರೆ, ಆ ಸೌಲಭ್ಯಗಳು ಅರ್ಹರಿಗೆ ತಲುಪುತ್ತಿಲ್ಲ. ಸ್ವಯಂ ಸೇವಾ ಸಂಸ್ಥೆಗಳು ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ ಅರ್ಹರಿಗೆ ಸೌಲಭ್ಯ ದೊರಕಿಸಿಕೊಡಬೇಕು ಎಂದು ಸಲಹೆ ನೀಡಿದರು.

ಬುಡಕಟ್ಟು ಸಮುದಾಯಕ್ಕೆ ಸಮಾನತೆ, ಜೀವನ, ಆಸ್ತಿ, ಪರಿಸರ ಮತ್ತು ಸಾಮಾಜಿಕ ನ್ಯಾಯದ ಭದ್ರತೆ ಒದಗಿಸಬೇಕು. ಅವರಿಗೆ ಶಿಕ್ಷಣ, ಆರೋಗ್ಯ ಸೌಲಭ್ಯ ಕಲ್ಪಿಸಬೇಕು. ಅವರ ಸ್ವಾಭಿಮಾನ, ಘನತೆ ಮತ್ತು ಅವರ ಸಂಸ್ಕೃತಿಯನ್ನು ರಕ್ಷಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಲು ಕಾರ್ಯಕ್ರಮ ರೂಪಿಸಬೇಕು. ಎನ್‌ಜಿಓಗಳು ಸಮರ್ಪಣಾಭಾವ ಮತ್ತು ಪ್ರಾಮಾಣಿಕತೆಯಿಂದ ಶ್ರಮಿಸುವ ಮೂಲಕ ಬುಡಕಟ್ಟು ಸಮುದಾಯದ ಜನರಿಗೆ ನೆರವಾಗಬೇಕು ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳಲ್ಲಿರುವ ಬದ್ಧತೆ ಬುಡಕಟ್ಟು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಎನ್‌ಜಿಓಗಳಲ್ಲಿ ಕಂಡು ಬರುವುದಿಲ್ಲ. ಬುಡಕಟ್ಟು ಜನರು ಸ್ವಯಂ ಘನತೆಯನ್ನೇ ನೆಚ್ಚಿಕೊಂಡಿದ್ದಾರೆ. ಈ ವಿಚಾರದಲ್ಲಿ ತೊಂದರೆಯಾದಾಗ ಅವರು ಸಿಡಿದೇಳುತ್ತಾರೆ. ಹೀಗಾಗಿ ಸ್ವಯಂ ಘನತೆಗೆ ಧಕ್ಕೆ ಬಾರದಂತೆ ಕಟ್ಟೆಚ್ಚರ ವಹಿಸಬೇಕು ಎಂದರು.

ಬುಡಕಟ್ಟು ಸಮುದಾಯ ಭೂಮಿಯನ್ನೇ ಜೀವನೋಪಾಯಕ್ಕೆ ಅವಲಂಭಿಸಿದೆ. ಅವರ ಉಳಿವಿಗಾಗಿ ಅವರು ವಾಸಿಸುವ ಪ್ರದೇಶಗಳ ರಕ್ಷಣೆಗೆ ಆದ್ಯತೆ ನೀಡಬೇಕು. ಬುಡಕಟ್ಟು ಜನ ವಾಸಿಸುತ್ತಿದ್ದ ಪ್ರದೇಶಗಳು ಜಮೀನ್ದಾರರ ಪಾಲಾಗುತ್ತಿರುವುದು ವಿಷಾದಕರ ಸಂಗತಿ. ಮಧ್ಯವರ್ತಿಗಳ ಮೂಲಕ ಆದಿವಾಸಿಗಳ ಭೂಮಿಯನ್ನು ಇತರ ಜನಾಂಗದವರು ಖರೀದಿಸುತ್ತಿದ್ದಾರೆ. ಜಮೀನುಗಳ ಮೂಲಕ ಬುಡಕಟ್ಟು ಸಂಸ್ಕೃತಿ ಹಾಗೂ ಗೌರವಯುತ ಬದುಕು ಮಾರಾಟವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಮಾಜದ ಮುಖ್ಯವಾಹಿನಿಗೆ ಬುಡಕಟ್ಟು ಸಮುದಾಯವನ್ನು ತರುವ ಉದ್ದೇಶದಿಂದ ಮೀಸಲಾತಿ ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸುತ್ತಿವೆ. ಅವರ ಭೂಮಿ ಉಳಿಸುವುದಕ್ಕೆ ಗಮನಹರಿಸಬೇಕು. ಅರಣ್ಯ ಸಂಕರಕ್ಷಣಾ ಕಾನೂನಿಂದ ಬುಡಕಟ್ಟು ಪ್ರದೇಶಗಳ ಉಳಿವಿಗೆ ಕೆಲವೊಂದು ತೊಡಕುಗಳಿವೆ. ಈ ಬಗ್ಗೆ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ತಿಳಿದುಕೊಂಡು ಬುಡಕಟ್ಟು ಪ್ರದೇಶದ ಸಂರಕ್ಷಣೆಗೆ ಮುಂದಾಗಬೇಕು. ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗೆ ಹೋರಾಡಿದ ಬಿರ್ಸಾಮುಂಡ ನೆನಪಿಗಾಗಿ ಜನ ಜಾತಿ ಗೌರವ ದಿನವನ್ನು ಆಚರಿಸಲಾಗುತ್ತದೆ. ಬುಡಕಟ್ಟು ಪ್ರದೇಶಗಳಲ್ಲಿನ ಅರಣ್ಯಗಳ ಕುರಿತಾದ ಕಾನೂನಿನ ಬಗ್ಗೆ ಚರ್ಚೆಗಳನ್ನು ಏರ್ಪಡಿಸುವಂತೆ ಕೋರಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಎಸ್.ರಾಜೇಶ್‌ಗೌಡ, ಮೈಸೂರು ವಿವಿ ಕಾನೂನು ಅಧ್ಯಯನ ವಿಭಾಗ ಮುಖ್ಯಸ್ಥ ಪ್ರೊ.ಟಿ.ಆರ್.ಮಾರುತಿ, ಪ್ರಾಧ್ಯಾಪಕ ಡಾ.ರಮೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ಮಾನಸಗಂಗೋತ್ರಿಯ ಲಲಿತಾ ಕಲಾ ರಂಗಮಂದಿರದಲ್ಲಿ ಮಂಗಳವಾರ ಆಯೋಜಿಸಿದ್ದ 'ಬಿರ್ಸಾ ಮುಂಡ ಜಯಂತಿ' ಹಾಗೂ ಜನ ಜಾತೀಯ ಗೌರವ ದಿವಸ' ಅಂಗವಾಗಿ ಆಯೋಜಿಸಿದ್ದ 'ಬುಡಕಟ್ಟು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನಾ ಸಂದರ್ಭ.

ನಕ್ಕರೆ ಅದೇ ಸ್ವರ್ಗ

ಅವರು : "ಫ್ಯಾಮಿಲಿ ಪ್ಲಾನಿಂಗ್ ಮಾಡೋದಕ್ಕೆ ಹೋಗಿ ಮಕ್ಕಳ ನಡುವೆ ಅಂತರ ಇಟ್ಟಿದ್ದು ತಪ್ಪಾಗಿ ಹೋಯ್ತು"

ಇವರು : "ಏಕೆ?"

ಅವರು : "ನನ್ನ ಮೊದಲನೇ ಮಗು ಅಪ್ಪಾ ಅನ್ನುತ್ತೆ, ಎರಡನೇ ಮಗು ತಾತಾ ಅನ್ನುತ್ತೆ"

ಮೈಸೂರು ಮಿತ್ರ

ಬುಧವಾರ, 16 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಕಷ್ಟಗಳಿಗೆ ಅಭ್ಯಾಸವಾದಂತೆ ಮನುಷ್ಯ ಗಟ್ಟಿಗನಾಗುತ್ತಾನೆ– ಗಯಟೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಅಲೆದರಂತೆ

ನಿಮ್ಮ ಪತ್ರಗಳು

ಸೇವಾನಿರತ ಪದವೀಧರರಿಗೆ ಶೀಘ್ರವಾಗಿ ಬಡ್ತಿ ನೀಡಿ!

ಮಾನ್ಯರೆ,

ಸರ್ಕಾರಿ ಶಾಲೆಗಳಲ್ಲಿ ಆರರಿಂದ ಎಂಟನೇ ತರಗತಿವರೆಗೆ ಪಾಠ ಮಾಡಲು 15,000 ಶಿಕ್ಷಕರ ನೇರ ನೇಮಕಾತಿ ಪ್ರಕ್ರಿಯೆ ಪ್ರಸ್ತುತ ನಡೆಯುತ್ತಿದೆ. ಆದರೆ ಹೊಸಬರ ನೇಮಕಕ್ಕೂ ಮೊದಲು ಹಾಲಿ ಸೇವಾನಿರತ ಪ್ರಾಥಮಿಕ ಪದವೀಧರರ ಶಿಕ್ಷಕರಿಗೆ ಸೇವೆಯೊಂದಿಗೆ ಮುಂಬಡ್ತಿ ನೀಡಬೇಕೆಂಬುದು ಪದವೀಧರ ಶಿಕ್ಷಕರ ಬಹುದಿನದ ಒತ್ತಾಸೆಯಾಗಿದೆ.

ರಾಜ್ಯದಲ್ಲಿ ಹಾಲಿ ಒಂದರಿಂದ ಏಳನೇ ತರಗತಿಗೆ ಪಾಠ ಮಾಡುತ್ತಿರುವ ಶಿಕ್ಷಕರಲ್ಲಿ 80,000 ಕ್ಕಿಂತ ಹೆಚ್ಚು ಮಂದಿ ವಿವಿಧ ವಿಷಯಗಳಲ್ಲಿ ಪದವಿ ವಿದ್ಯಾರ್ಹತೆ ಹೊಂದಿದ ಶಿಕ್ಷಕರಿದ್ದಾರೆ. ಈ ಶಿಕ್ಷಕರು ಕಳೆದ 20–25 ವರ್ಷಗಳಿಂದ ಯಾವುದೇ ಬಡ್ತಿಯಿಲ್ಲದೇ ಒಂದೇ ಹುದ್ದೆಯಲ್ಲಿದ್ದುಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರೂ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಎನ್‌ಸಿಟಿಇ) ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರುವ ಅರ್ಹ ಪದವೀಧರ ಶಿಕ್ಷಕರಾಗಿದ್ದು, ಇವರೆಲ್ಲರನ್ನೂ 15,000 ಶಿಕ್ಷಕರ ನೇರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಸೇವಾನಿರತ ಪದವೀಧರ ಶಿಕ್ಷಕರನ್ನು ಸೇವಾ ಜೇಷ್ಠತೆಯೊಂದಿಗೆ ಮುಂಬಡ್ತಿ ನೀಡಿ ಪದವೀಧರ ಶಿಕ್ಷಕರ ಬಹುದಿನದ ಬೇಡಿಕೆಯನ್ನು ಸರ್ಕಾರ ಶೀಘ್ರವಾಗಿ ಈಡೇರಿಸುವುದು ನ್ಯಾಯ ಸಮ್ಮತವಾಗಿದೆ. ಈ ಬಗ್ಗೆ ಸರ್ಕಾರ ಶೀಘ್ರವಾಗಿ ತೀರ್ಮಾನ ಕೈಗೊಂಡು ಸೂಕ್ತ ಆದೇಶ ಹೊರಡಿಸಬೇಕೆಂಬುದು ರಾಜ್ಯದ ಸಮಸ್ತ ಪದವೀಧರ ಶಿಕ್ಷಕರ ಮನವಿ

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಆರ್‌ಟಿಇ ಯೋಜನೆ ದ್ವಿತೀಯ ಪಿಯುಸಿವರೆಗೆ ವಿಸ್ತರಿಸಲಿ

ಮಾನ್ಯರೆ,

ನಾವುಗಳು ಅಸಂಘಟಿತ ಕೆಲಸಗಾರರು. ಅಂದರೆ ಗಾರೆ ಕೆಲಸದವರು, ಆಟೋ ಡ್ರೈವರ್‌ಗಳು, ಟ್ಯಾಕ್ಸಿ ಡ್ರೈವರ್‌ಗಳು, ಎತ್ತಿನಗಾಡಿ ನಡೆಸುವವರು, ಚಿಕ್ಕ ಅಂಗಡಿಗಳಲ್ಲಿ ಕೆಲಸ ಮಾಡುವವರಾಗಿದ್ದು, ಕಡಿಮೆ ಸಂಬಳದಲ್ಲಿ ಜೀವನ ನಡೆಸುತ್ತಿದ್ದೇವೆ. ಇದರಿಂದ ಜೀವನ ನಿರ್ವಹಿಸುವುದೇ ಕಷ್ಟ.

ಇಂತಹ ಸಂದರ್ಭದಲ್ಲಿ ನಮಗೆ ಆಘಾತ ಮತ್ತು ಮನಸ್ಸಿಗೆ ನೋವುಂಟು ಮಾಡುವ ವಿಚಾರವೇನೆಂದರೆ ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಿಸಲು ಸಾಧ್ಯವಾಗದಿರುವುದು. ಬಡ ಮಕ್ಕಳಿಗೆ ಉಚಿತ ಗುಣಮಟ್ಟದ ಶಿಕ್ಷಣ ನೀಡುವುದು ಸರ್ಕಾರದ ಕೆಲಸವಾಗಿದೆ. ಆದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಆರ್.ಟಿ.ಇ ಯೋಜನೆಯಡಿ ಬಡಮಕ್ಕಳಿಗೆ ಉಚಿತ ಶಿಕ್ಷಣವನ್ನು 8ನೇ ತರಗತಿಯವರಿಗೆ ಮಾತ್ರ ನೀಡಲು ಅವಕಾಶ ಕಲ್ಪಿಸಿದ್ದಾರೆ.

ಆರ್‌ಟಿಇ ಯೋಜನೆ ಕೆಲವೊಂದು ಅವಾಸ್ತವಿಕತೆ ಮತ್ತು ಅವೈಜ್ಞಾನಿಕ ವಿಚಾರಗಳಿಂದ ಕೂಡಿದ್ದು, ಮುಖ್ಯವಾದ ವಿಚಾರವೆಂದರೆ 8ನೇ ತರಗತಿಯಿಂದ 12ನೇ ತರಗತಿಯವರೆಗೆ ಯೋಜನೆ ಇನ್ನೂ ವಿಸ್ತರಣೆಯಾಗದಿರುವುದು. ಇದರಿಂದ 8ನೇ ತರಗತಿ ನಂತರ ಬಡ ಪೋಷಕರಾದ ನಾವು ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಿಸಲು ಸಾಧ್ಯವಾಗುತ್ತಿಲ್ಲ. ಅಂತಹ ಸಂದರ್ಭದಲ್ಲಿ ನಮ್ಮ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಹಾಗೂ ಅದರಿಂದ ಆರ್‌ಟಿಇ ಯೋಜನೆಯ ಗುರಿ ಹಾಗೂ ವಿಚಾರಗಳು ಅರ್ಥವಿಲ್ಲದಂತಾಗಿ ಬಡ ಮಕ್ಕಳಿಗೆ ಅನ್ಯಾಯವಾಗುತ್ತಿದೆ.

ಗೌರವಾನ್ವಿತ ಶಿಕ್ಷಣ ತಜ್ಞರು, ವಿವಿಧ ಕ್ಷೇತ್ರಗಳ ಸಾಧಕರು ಬಡ ಮಕ್ಕಳಿಗೆ ಅವಶ್ಯಕತೆಯಿರುವ ಗುಣಮಟ್ಟದ ಶಿಕ್ಷಣದ ಬಗ್ಗೆ ಅಧ್ಯಯನವನ್ನು ನಡೆಸಿ, ಅವಲೋಕಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆರ್.ಟಿ.ಇ ಯೋಜನೆಯನ್ನು 8ನೇ ತರಗತಿಯಿಂದ 12ನೇ ತರಗತಿಯವರೆಗೆ ಕೂಡಲೇ ವಿಸ್ತರಿಸಲು ಶಿಫಾರಸ್ಸು ಮಾಡಿದ್ದಾರೆ ಹಾಗೂ ವರದಿಯನ್ನು ಸಹ ನೀಡಿದ್ದಾರೆ. 12ನೇ ತರಗತಿಯ ಶಿಕ್ಷಣವು ಮಹತ್ವದಿಂದ ಕೂಡಿದೆ. ಏಕೆಂದರೆ ಅದು ಉನ್ನತ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣಕ್ಕೆ ದಿಕ್ಸೂಚಿ.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಶೀಘ್ರದಲ್ಲಿ ಆರ್‌ಟಿಇ ಯೋಜನೆಯನ್ನು 8ನೇ ತರಗತಿಯಿಂದ 12ನೇ ತರಗತಿಯವರೆಗೆ ವಿಸ್ತರಿಸಿದರೆ ಬಡ ಮಕ್ಕಳಿಗೆ, ಬಡ ಪೋಷಕರಿಗೆ ಸಹಾಯವಾಗುತ್ತದೆ ಹಾಗೂ ಆರ್.ಟಿ.ಇ ಯೋಜನೆಯ ಗುರಿ ಹಾಗೂ ವಿಚಾರಗಳಿಗೆ ಅರ್ಥ ಬರುತ್ತದೆ.

– ಕರ್ನಾಟಕ ಆರ್‌ಟಿಇ ಮಕ್ಕಳ ಬಡ ಪೋಷಕರು, ಕುವೆಂಪುನಗರ 2ನೇ ಹಂತ, ಮೈಸೂರು.

ರೈಲು ಪ್ರಯಾಣ ದರದಷ್ಟೇ ಪಾರ್ಕಿಂಗ್ ದರ ವಸೂಲಿ



ಮಾನ್ಯರೆ,

ನೀವು ಮೈಸೂರಿನಿಂದ – ಬೆಂಗಳೂರಿಗೆ ಪ್ಯಾಸೆಂಜರ್ ರೈಲಿನಲ್ಲಿ ಪ್ರಯಾಣ ಮಾಡಿದರೆ ರೈಲ್ವೆ ಪ್ರಯಾಣ ದರ ರೂ.30, ರೈಲ್ವೆ ನಿಲ್ದಾಣದಲ್ಲಿರುವ ಪಾರ್ಕಿಂಗ್‌ನಲ್ಲಿ ನಿಮ್ಮ ದ್ವಿಚಕ್ರ ವಾಹನ ನಿಲ್ಲಿಸಿ ಬೆಂಗಳೂರಿನಿಂದ ವಾಪಸ್ಸು ಮನೆಗೆ ಬರಬೇಕಾದರೆ, ರೈಲು ಪ್ರಯಾಣದ ದರದಷ್ಟೇ ಪಾರ್ಕಿಂಗ್ ಚಾರ್ಜ್ ತೆರಬೇಕಾಗುತ್ತದೆ.

ನೀವು ರೈಲ್ವೇ ಟಿಕೆಟ್ ರಿಸರ್ವೇಷನ್ ಮಾಡಲು ಹೋಗಿ 5 ನಿಮಿಷದಲ್ಲಿ ವಾಪಸ್ ಬಂದರೂ 20 ರೂ. ಕನಿಷ್ಠ ಪಾರ್ಕಿಂಗ್ ದರ ಕೊಡಬೇಕಾಗುತ್ತದೆ. ಇದನ್ನು ಯಾರಾದರೂ ಪ್ರಶ್ನಿಸಿದರೆ, ನಾವು ಕೋಟ್ಯಾಂತರ ರೂಪಾಯಿ ಕೊಟ್ಟು ಟೆಂಡರ್ ಮಾಡಿಕೊಂಡಿದ್ದೇವೆ. ಅದಕ್ಕಾಗಿ ವಸೂಲಿ ಮಾಡುತ್ತೇವೆ. ನೀವು ಏನೇ ಇದ್ದರೂ ರೈಲ್ವೇ ಅಧಿಕಾರಿಗಳನ್ನು ಕೇಳಿ ಈಗ ಅವರು ಮಲಗಿರುತ್ತಾರೆ. ನಾಳೆ ಬಂದು ಕೇಳಿ, ಈಗ ಸುಮ್ಮನೆ ದುಡ್ಡು ಕೊಟ್ಟು ಹೋಗಿ ಎಂದು ಅಲ್ಲಿನ ಸಿಬ್ಬಂದಿ ಅನಾಗರಿಕರಾಗಿ ವರ್ತಿಸುತ್ತಾರೆ.

ಈ ರೀತಿಯಾಗಿ ಪಾರ್ಕಿಂಗ್‌ಗೆ ಹಣ ವಸೂಲಿ ಮಾಡುವುದು 'ಹಗಲು ದರೋಡೆ' ಎನ್ನಬೇಕು. ಕಳೆದು ಎರಡು ವರ್ಷಗಳ ಹಿಂದೆ ಇದ್ದಂತೆ ದಿನಕ್ಕೆ 10 ರೂ. ತೆಗೆದುಕೊಳ್ಳುವ ವ್ಯವಸ್ಥೆ ಮತ್ತೆ ಜಾರಿಗೆ ತಂದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತಾಗಲಿ. ರೈಲ್ವೇ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಬೇಕು.

–ಬೂಕನಕೆರೆ ವಿಜೇಂದ್ರ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಬಾಹುಬಲಿ ಪ್ರಾಕೃತ ವಿದ್ಯಾಪೀಠ

ಶ್ರವಣಬೆಳಗೊಳ ಅತ್ಯಂತ ಪವಿತ್ರ ಕ್ಷೇತ್ರ. ಜ್ಞಾನ ವೈರಾಗ್ಯಗಳ ಸಂಗಮದ ಪಾವನ ಭೂಮಿ. ಸಾವಿರಾರು ವರ್ಷಗಳ ಹಿಂದೆ ಸಾಮ್ರಾಟ್ ಚಂದ್ರಗುಪ್ತನು ತಪಸ್ಸು ಮಾಡಲು ಆರಿಸಿಕೊಂಡ ಪುಣ್ಯದ ತಾಣ. ಚಾವುಂಡರಾಯನು ಕೆತ್ತಿಸಿದ ಭವ್ಯ ಗೊಮ್ಮಟನ ಮೂರ್ತಿಯಿರುವ ದಿವ್ಯಸ್ಥಾನ. ಜೈನ ಧರ್ಮದ ನೆಲೆವೀಡು. ಇಂದು ಈ ಸುಕ್ಷೇತ್ರದಲ್ಲಿ ಜಿಜ್ಞಾಸುಗಳ, ಧರ್ಮಾಪೇಕ್ಷಿಗಳ, ಅಧ್ಯಾತ್ಮ ಚಿಂತಕರ ಕೇಂದ್ರವಾಗಿ ಕಂಗೊಳಿಸುತ್ತಿದೆ. ಬಾಹುಬಲಿ ಪ್ರಾಕೃತ ವಿದ್ಯಾಪೀಠ. ಸ್ವಸ್ತಿ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳ ಸಂಕಲ್ಪದ ಕೂಸು ಈ ವಿದ್ಯಾಪೀಠ. ಶ್ರವಣಬೆಳಗೊಳದ ಸಮೀಪದ ಐವತ್ತು ಎಕರೆಗಳ ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರುವ ವಿದ್ಯಾಪೀಠದ ಸುಂದರ ಕಟ್ಟಡಗಳ ಸೊಬಗು ಮನಸ್ಸನ್ನು ಸೆಳೆಯುತ್ತದೆ.

ಪ್ರಾಕೃತ ಭಾಷೆ

ಪ್ರಕೃತಿಯಿಂದ ಸ್ವಾಭಾವಿಕವಾಗಿ ಹುಟ್ಟಿದುದು ಪ್ರಾಕೃತ ಭಾಷೆ. ಇದು ಕೇವಲ ವ್ಯಾವಹಾರಿಕ ಭಾಷೆಯಾಗಿ, ಮಾರುಕಟ್ಟೆಗೆ ಸೀಮಿತವಾಗಿ ಉಳಿದ ಭಾಷೆಯಲ್ಲ. ಇದರಲ್ಲಿ ಸುಂದರ ಸಾಹಿತ್ಯ ಉದಯಿಸಿತು. ಜೈನರು ಮಾತ್ರ ಬಳಸಿದ ಭಾಷೆ ಪ್ರಾಕೃತ ಎಂಬ ತಪ್ಪು ಕಲ್ಪನೆ ಕೆಲವರಲ್ಲಿದೆ. ಈ ಕಲ್ಪನೆ ತೊಲಗಬೇಕು. ಭಾರತ ದೇಶದ ಎಲ್ಲ ಪ್ರದೇಶಗಳಲ್ಲೂ ಜನರು ಈ ಭಾಷೆಯನ್ನಾಡುತ್ತಿದ್ದರು. ಅದಕ್ಕೆ ಧರ್ಮದ ಅಥವಾ ಜಾತಿಯ ಮಿತಿಗಳಿರಲಿಲ್ಲ. ಕಾಳಿದಾಸ, ಭಾಸ, ಭಟ್ಟನಾರಾಯಣ, ವೇದಾಂತ ದೇಶಿಕ ಮುಂತಾದವರೆಲ್ಲ ತಮ್ಮ ನಾಟಕಗಳಲ್ಲಿ ಪ್ರಾಕೃತವನ್ನು ಬಳಸಿದ್ದಾರೆ. ವಸ್ತುತಃ ಹೇಳಬೇಕೆಂದರೆ, ನಾವು ಯಾವುದನ್ನು ಸಂಸ್ಕೃತ ನಾಟಕಗಳೆಂದು ಕರೆಯುತ್ತೇವೋ ಅವು ಸಂಸ್ಕೃತ–ಪ್ರಾಕೃತ ನಾಟಕಗಳು– ಸೇತುಬಂಧ ಎಂಬ ಮಹಾಕಾವ್ಯ ಪ್ರಾಕೃತದಲ್ಲಿದೆ. ಕರ್ಪೂರ ಮಂಜರೀ ಎಂಬ ನಾಟಕವೂ ಪ್ರಾಕೃತ ಭಾಷೆಯಲ್ಲಿದೆ. ಅದನ್ನು ರಚಿಸಿದ ರಾಜಶೇಖರ ಜೈನನಲ್ಲ, ವೈದಿಕ ಮತಾನುಯಾಯಿ. ಆ ಕಾಲದ ವಿದ್ವಾಂಸರಿಗೆ ಪ್ರಾಕೃತ–ಸಂಸ್ಕೃತ–ದೇಶ ಭಾಷೆಗಳು ಕರತಲಾಮಲಕ, ಸಂದರ್ಭಾನು ಗುಣವಾಗಿ ಅವರು ಸಂಭಾಷಣೆಯಲ್ಲಿ ಯಾವ ಭಾಷೆಯನ್ನು ಬಳಸಬೇಕೆಂದು ನಿರ್ಧರಿಸುತ್ತಿದ್ದರು.

ಜೈನ ಸಾಹಿತ್ಯದಲ್ಲಿ ಆದಿಕಾಲದಲ್ಲಿ ಪ್ರಾಕೃತವೇ ಪ್ರಮುಖ ಮಾಧ್ಯಮವಾಗಿತ್ತು. ಆಮೇಲೆ ಸಂಸ್ಕೃತ, ತದನಂತ ದೇಶಭಾಷೆ. ಕನ್ನಡದ ಮಹಾಕವಿಗಳಾದ ಪಂಪ, ರನ್ನ, ಪೊನ್ನ ಇತ್ಯಾದಿಗಳು ತ್ರಿಭಾಷಾ ಪಂಡಿತರಾಗಿದ್ದರು. ಅಪೇಕ್ಷೆ ಪಟ್ಟಿದ್ದರೆ ಅವರು ಸಂಸ್ಕೃತದಲ್ಲೂ ಪ್ರಾಕೃತದಲ್ಲೂ ಕಾವ್ಯಗಳನ್ನು ರಚಿಸಬಹುದಾಗಿತ್ತು. ಸುದೈವದಿಂದ ಅವರ ಒಲವು ಕನ್ನಡದ ಕಡೆಗೆ ಹರಿದು ಶ್ರೇಷ್ಠ ಗ್ರಂಥಗಳು ಕನ್ನಡದಲ್ಲಿ ಹುಟ್ಟಿದುವು.

ಸಂಸ್ಕೃತದ ಅಲಂಕಾರ ಶಾಸ್ತ್ರ ಗ್ರಂಥಗಳಲ್ಲಿ ಪ್ರಾಕೃತದ ಉದಾಹರಣ ಪದ್ಯಗಳು ಹೇರಳವಾಗಿ ದೊರಕುತ್ತವೆ. ಆನಂದವರ್ಧನನ ಧ್ವನ್ಯಾಲೋಕ, ಮಮ್ಮಟನ ಕಾವ್ಯಪ್ರಕಾಶ ಮುಂತಾದವುಗಳಲ್ಲಿ ಪ್ರಾಕೃತದ ಪದ್ಯಗಳನ್ನು ಧಾರಾಳವಾಗಿ ಉತ್ತಮಕಾವ್ಯೋದಾಹರಣಗಳೆಂದು ಕೊಟ್ಟಿದ್ದಾರೆ. ಈಚಿನವೆಂದು ಪರಿಗಣಿಸಲ್ಪಡಬಹುದಾದ ಕುವಲಯಾನಂದ (ಸು. 16ನೆಯ ಶತಮಾನ), ರಸಗಂಗಾಧರ (ಹದಿನೇಳನೆಯ ಶತಮಾನ)ಗಳಲ್ಲಿ ಪ್ರಾಕೃತ ಕಾವ್ಯದ ಉದಾಹರಣೆಗಳಿಲ್ಲ. ಆದರೆ ಆ ಕಾಲದಲ್ಲೂ ಪ್ರಾಕೃತ ಕಾವ್ಯಗಳ ರಚನೆ ನಡೆಯುತ್ತಿತ್ತು. ಪ್ರಾಕೃತ ಭಾಷೆಯ ರೂಪಾಂತರಗಳೇ ಹಿಂದೀ, ಗುಜರಾತೀ, ಮರಾಠೀ ಮುಂತಾದ ಇಂದಿನ ಭಾಷೆಗಳು.

ಪ್ರಾಕೃತ ಎಂಬ ಒಂದು ಭಾಷೆ ಎಂದು ನಾವು ಹೇಳಿದರೂ ವಾಸ್ತವದಲ್ಲಿ ಅನೇಕ ಪ್ರಾದೇಶಿಕ ವ್ಯತ್ಯಾಸಗಳಿಂದ ಅದು ಹಲವು ಪ್ರಭೇದಗಳನ್ನು ಹೊಂದಿತ್ತು. ಮಾಗಧೀ, ಅರ್ಧಮಾಗಧೀ, ಶೌರಸೇನೀ, ಮಹಾರಾಷ್ಟ್ರೀ ಎಂಬ ಪ್ರಾಕೃತ ಪ್ರಭೇದಗಳು ಪ್ರಸಿದ್ಧವಾಗಿವೆ. ಇವುಗಳ ವ್ಯಾಕರಣಗಳೂ ಇವೆ. ಮಹಾರಾಷ್ಟ್ರೀ ಎಂಬ ಪ್ರಾಕೃತವು ಶ್ರೇಷ್ಠ ಎಂಬ ಮಾತೂ ಆಗ ಪ್ರಚಲಿತವಾಗಿತ್ತು. ಪ್ರಾಕೃತ ಭಾಷಾಕವಿಗಳು ಸಂಸ್ಕೃತಕ್ಕಿಂತ ಪ್ರಾಕೃತವೇ ಮಧುರ ಎಂದು ಹೇಳಿದ್ದಾರೆ–

ಅಮಯಂ ಪಾಯಿಯ ಕವ್ವಂ
ಪಢಿಯಂ ಸೋಉಂ ಚ ಜೇ ಣ ಜಾಣಂತಿ।
ಕಾಮಸ್ಸ ತತ್ತವತ್ತಿಂ
ಕುಣಂತಿ ತೇ ಕಹ ಣ ಲಜ್ಜಂತಿ ॥

ಅಮೃತವೇ ಆಗಿರುವ ಪ್ರಾಕೃತ ಕಾವ್ಯವನ್ನು ಓದಲು ಮತ್ತು ಕೇಳಲು ಯಾರಿಗೆ ತಿಳಿಯದೋ ಅಂಥವರು ಕಾಮದ ತತ್ತ್ವ–ವೃತ್ತಿಗಳನ್ನು ಮಾಡಲು ಹೊರಟರೆ, ಅವರು ನಾಚಿಕೊಳ್ಳದಿರುವುದು ಹೇಗೆ? ಎಂದು ಈ ಗಾಹೆಯ ಅರ್ಥ.

ಲಲಿಏ ಮಹುರಕ್ಖರಏ
ಜುವಈ ಜಣವಲ್ಲಹೇ ಸಸಿಂಗಾರೇ।
ಪಂತೇ ಪಾಯಿಯಕವ್ವೇ
ಕೋ ಸಕ್ಕಇ ಸಕ್ಕಯಂ ಪಢಿಉಂ॥

ಲಲಿತವೂ ಮಧುರಾಕ್ಷರವೂ ಯುವತಿ ಜನರಿಗೆ ಇಷ್ಟವಾದುದೂ ಆಗಿರುವ ಪ್ರಾಕೃತ ಕಾವ್ಯವು ಇರುವಾಗ ಸಂಸ್ಕೃತವನ್ನು ಓದಲು ಯಾರಿಲ್ಲಿ ಇಷ್ಟಪಡುವರು?

ಅವರವರ ಭಾಷೆ ಅವರವರಿಗೆ ಅಂದವೆಂಬುದೇನೋ ಸತ್ಯ. ಆದರೆ ಸಂಸ್ಕೃತದಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳು ಇರುವ ಕಾರಣದಿಂದ ಉಚ್ಚಾರಣೆ ಕಷ್ಟವಾಗಬಹುದು. ಪ್ರಾಕೃತದಲ್ಲಿ ಈ ಕಷ್ಟವಿಲ್ಲ.

ಪ್ರಾಕೃತದಲ್ಲಿ ದಾರ್ಶನಿಕ ಸಾಹಿತ್ಯ

ಲಲಿತ ಸಾಹಿತ್ಯವು ಮಾತ್ರವಲ್ಲ, ಪ್ರಾಕೃತದಲ್ಲಿ ದರ್ಶನ ತತ್ತ್ವಗಳನ್ನು ತಿಳಿಸುವ ಗಂಭೀರ ಸಾಹಿತ್ಯವಿದೆ. ಜೈನದರ್ಶನವು ಅನೇಕಾಂತವಾದವೆಂದೂ ಸ್ಯಾದ್ವಾದವೆಂದೂ ಪ್ರಸಿದ್ಧವಾಗಿದೆ. ಜಗತ್ತಿನಲ್ಲಿ ಯಾವುದೂ ಒಂದೇ ರೂಪದಲ್ಲಿ ಇಲ್ಲ. ಒಬ್ಬ ಮನುಷ್ಯನು ದೊಡ್ಡವನೋ ಚಿಕ್ಕವನೋ ಎಂದರೆ ಅವನ ಮಗನಿಗಿಂತ ದೊಡ್ಡವನು, ತಂದೆಗಿಂತ ಚಿಕ್ಕವನು. ಒಬ್ಬ ವ್ಯಕ್ತಿ ಸುಂದರನೋ ಕುರೂಪಿಯೋ ಎಂದರೆ ನೋಡುವವನ ದೃಷ್ಟಿಯನ್ನು ಅವಲಂಬಿಸಿದೆ. ಈಗ ಎಲ್ಲಾ ಕಲಹಗಳಿಗೆ ಕಾರಣವೇನೆಂದರೆ ಇದು ಹೀಗೆ ಇದೆ ಎಂಬ ಆಗ್ರಹ. ಅದನ್ನು ತ್ಯಜಿಸುವ ಸ್ಯಾದ್ವಾದವನ್ನು ಅಂಗೀಕರಿಸಿದರೆ ಮನುಷ್ಯರಲ್ಲಿ ಪರಸ್ಪರ ಜಗಳಕ್ಕೆ, ಯುದ್ಧಕ್ಕೆ ಕಾರಣವಿರುವುದಿಲ್ಲ. ಈ ಸ್ಯಾದ್ವಾದವನ್ನು ಕುಂದ ಕುಂದ ಮುಂತಾದ ಮಹಾನುಭಾವರು ಪ್ರಾಕೃತ ಗ್ರಂಥಗಳಲ್ಲಿ ವಿವರಿಸಿ ಲೋಕೋಪಕಾರ ವನ್ನು ಮಾಡಿದ್ದಾರೆ. ಅವರ ತತ್ತ್ವಗಳು ಸರ್ವರಿಗೂ ಸ್ವೀಕಾರಾರ್ಹವಾಗಿವೆ. ಅವುಗಳನ್ನು ಅರ್ಥ ಮಾಡಿಕೊಳ್ಳಲು ಪ್ರಾಕೃತ ಭಾಷೆಯನ್ನು ಕಲಿಯಬೇಕು.

ನಮ್ಮ ದೇಶದ ಪ್ರಾಚೀನೇತಿಹಾಸವನ್ನು ತಿಳಿಸುವ ಶಾಸನಗಳು ಪ್ರಾಕೃತದಲ್ಲಿವೆ. ಇತಿಹಾಸ ಜಿಜ್ಞಾಸುಗಳು ಪ್ರಾಚೀನ ಶಾಸನಗಳನ್ನು ಓದಲು ಪ್ರಾಕೃತ ಭಾಷೆಯನ್ನೂ ಆ ಕಾಲದ ಲಿಪಿಗಳನ್ನೂ ಕಲಿತುಕೊಂಡರೆ ಅನುಕೂಲ. ಇದಕ್ಕಾಗಿ ಬಾಹುಬಲಿ ಪ್ರಾಕೃತ ವಿದ್ಯಾಪೀಠವು ಅನೇಕ ವಿಧದ ಪಾಠ ಕ್ರಮಗಳನ್ನು ರೂಪಿಸಿದೆ. ದೂರಶಿಕ್ಷಣ (Distance Education) ವ್ಯವಸ್ಥೆಯೂ ಅಲ್ಲಿದೆ.

ಪ್ರಾಕೃತ ಭಾಷೆಯು ಸಾಮಾನ್ಯ ಜನರ ಭಾಷೆಯಾಗಿದ್ದುದರಿಂದ ಅದರ ವ್ಯಾಕರಣವು ಜಟಿಲವಾಗಿಲ್ಲ. ಯಾರು ಬೇಕಾದರೂ ಅದನ್ನು ಕಲಿತುಕೊಳ್ಳಬಹುದು. ಸಂಸ್ಕೃತವನ್ನು ಈಗಾಗಲೇ ಕಲಿತಿದ್ದವರಿಗೆ ಪ್ರಾಕೃತ (ಹಾಗೆಯೇ ಪಾಲಿ) ಸುಲಭಗಮ್ಯ. ಇದನ್ನು ಜನರ ಗಮನಕ್ಕೆ ತಂದು, ಬಾಹುಬಲಿ ಪ್ರಾಕೃತ ವಿದ್ಯಾಪೀಠದ ನಿರ್ದೇಶಕರಾಗಿರುವ ಡಾ. ಜಯಕುಮಾರ್ ಉಪಾಧ್ಯೆ ಅವರು ಸತತ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳ ಅನುಗ್ರಹದಿಂದ ಆ ಪ್ರಯತ್ನಗಳು ಸಫಲವಾಗಲೆಂದು ಹಾರೈಸೋಣ. ಪ್ರಾಚೀನ ಜ್ಞಾನ ಋಷಿಗಳೂ ಮುನಿಗಳೂ ನಮಗೆ ಬಿಟ್ಟು ಹೋಗಿರುವ ಅಮೂಲ್ಯನಿಧಿ. ಅದನ್ನು ನಾವು ಕಳೆದುಕೊಳ್ಳಬಾರದು. ಬಾಹುಬಲಿ ಪ್ರಾಕೃತ ವಿದ್ಯಾಪೀಠವು ಒಂದು ಸ್ವತಂತ್ರ ವಿಶ್ವವಿದ್ಯಾನಿಲಯವಾಗ ಬೇಕೆಂದು ಪರಮಪೂಜ್ಯರ ಸಂಕಲ್ಪವಿದೆ. ಪಂಚ ಪರಮೇಷ್ಠಿಗಳ ಅನುಗ್ರಹದಿಂದ ಹಾಗಾಗಲಿ.

ಣಮೋ ಅರಿಹಂತಾಣಂ ಣಮೋ ಸಿದ್ಧಾಣಂ ಣಮೋ ಆಇರಿಯಾಣಂ
ಣಮೋ ಉವಜ್ಝಾಯಾಣಂ ಣಮೋ ಸವ್ವ ಸಾಹೂಣಂ

ಅರ್ಹಂತರಿಗೆ, ಸಿದ್ಧರಿಗೆ, ಆಚಾರ್ಯರಿಗೆ, ಉಪಾಧ್ಯಾಯರಿಗೆ, ಸರ್ವ ಸಾಧುಗಳಿಗೆ ನಮ್ಮ ನಮಸ್ಕಾರ.

ಮೈಸೂರಿನಲ್ಲಿ 'ಸಿದ್ದರಾಮಯ್ಯ–75' ಕೃತಿ ಲೋಕಾರ್ಪಣೆ

ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾತಂತ್ರ ಸತ್ತು ಹೋಗ್ತಿದೆ...

- ಹಿರಿಯ ನ್ಯಾಯವಾದಿ ಪ್ರೊ. ರವಿವರ್ಮಕುಮಾರ್ ವಿಷಾದ
- ಇದಕ್ಕೆ ಜ್ವಲಂತ ಸಾಕ್ಷಿ ಆರ್ಥಿಕ ದುರ್ಬಲ ವರ್ಗಕ್ಕೆ ಶೇ.10 ಮೀಸಲಾತಿ



ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ಮಂಗಳವಾರ ಡಾ.ಹರೀಶ್‌ಕುಮಾರ್ ಅವರ 'ಸಿದ್ದರಾಮಯ್ಯ–75' ಕೃತಿಯನ್ನು ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮಕುಮಾರ್ ಲೋಕಾರ್ಪಣೆಗೊಳಿಸಿದರು. ವಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಚಿಂತಕ ಪ.ಮಲ್ಲೇಶ್, ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಂ, ಗೋಪಾಲಕೃಷ್ಣ ಮತ್ತಿತರರಿದ್ದರು.

ಮೈಸೂರು, ನ.15(ಎಂಕೆ)– ಭಾರತದ ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾತಂತ್ರ ಸತ್ತು ಹೋಗಿದೆ. ಪರಿಣಾಮವಾಗಿ ದೊಡ್ಡ ದೊಡ್ಡ ಕಾಯ್ದೆ–ಕಾನೂನುಗಳು ಯಾವುದೇ ಚರ್ಚೆಯಿಲ್ಲದೆ 24 ಗಂಟೆಯೊಳಗೆ ಜಾರಿಗೆ ಬರುತ್ತಿವೆ. ಇದಕ್ಕೆ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗೆ ಶೇ.10ರಷ್ಟು ಮೀಸಲಾತಿ ನೀಡುವ ನಿರ್ಧಾರ (ಇಡಬ್ಲ್ಯೂಎಸ್) ತಾಜಾ ಉದಾಹರಣೆಯಾಗಿದೆ ಎಂದು ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್ ಹೇಳಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ವಿಚಾರವಾದಿ ಬಳಗ ಮೈಸೂರು ವತಿಯಿಂದ ಆಯೋಜಿಸಿದ್ದ ಡಾ.ಹರೀಶ್ ಕುಮಾರ್ ಅವರ 'ಸಿದ್ದರಾಮಯ್ಯ–75' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಪಕ್ಷಗಳಲ್ಲಿಯೇ ಪ್ರಜಾತಂತ್ರ ಸತ್ತುಹೋಗಿದೆ ಎಂದರೆ ಪಾರ್ಲಿಮೆಂಟ್‌ನಲ್ಲಿಯೂ ಯಾವುದೇ ಚರ್ಚೆ ಸಾಧ್ಯವಿಲ್ಲ. ರಾಜಕೀಯ ಪಕ್ಷಗಳು ಅದರಲ್ಲೂ ನೂರಾರು ವರ್ಷಗಳ ಇತಿಹಾಸವಿರುವ ಕಾಂಗ್ರೆಸ್ ಪಕ್ಷ ಎಚ್ಚೆತ್ತುಕೊಂಡು ಸ್ಪಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ ಎಂದು ಸಲಹೆ ನೀಡಿದರು.

ಮೈಸೂರಿಗೆ ಸಂಬಂಧಿಸಿದ ಮಹಾ ಚರಿತ್ರೆ ಎಂದರೆ ಮೊಟ್ಟ ಮೊದಲು ಮೀಸಲಾತಿ ನೀಡಿದ್ದು. 1872ರಲ್ಲಿ ಜನಗಣತಿ ನಡೆಸುವುದಕ್ಕೂ ಮೊದಲು ಬ್ರಾಹ್ಮಣರು ಕೋಟ್ಯಾಂತರ ಜನರಿದ್ದಾರೆ ಎನ್ನಲಾಗಿತ್ತು ಆದರೆ ಜನಗಣತಿ ನಂತರ ತಿಳಿದಿದ್ದು ಅವರು ಕೇವಲ ಶೇ.3 ರಷ್ಟಿದ್ದಾರೆ ಎಂದು. ಶೇ.3ರಷ್ಟಿರುವ ಬ್ರಾಹ್ಮಣ ಸಮುದಾಯ ಸಂಬಳದ ರೂಪದಲ್ಲಿ ಖಜಾನೆಯ ಶೇ.99ರಷ್ಟನ್ನು ಖಾಲಿ ಮಾಡುತ್ತಿದ್ದರು. ಅಂದಿದ್ದ ಬಸವರಾಜಪ್ಪ ಎಂಬ ನಾಯಕರು ಮೈಸೂರು ಮಹಾರಾಜರ ಬಳಿ ಸ್ವಾಮಿ ನಿಮ್ಮ ಬೊಕ್ಕಸಕ್ಕೆ ಎಲ್ಲಿಂದ ಹಣ ಬರುತ್ತದೆ ಎಂದು ಕೇಳಿದ್ದರು. ಅದಕ್ಕೆ ಮಹಾರಾಜರು ಭೂ ಕಂದಾಯದಿಂದ ಎಂದಾಗ ಸಂಗ್ರಹಿಸಿದ ತೆರಿಗೆ ಹಣವನ್ನು ಯಾರಿಗೆ ನೀಡುತ್ತಿದ್ದೀರಿ ಎಂದು ಮರು ಪ್ರಶ್ನಿಸಿದಾಗ ಸಂಬಳ ನೀಡುತ್ತಿದ್ದೇವೆ ಎಂದರಂತೆ. ರೈತರಿಂದ ಬರುವ ತೆರಿಗೆ ಹಣವನ್ನು ಯಾರಿಗೆ ನೀಡುತ್ತಿದ್ದೇವೆ ಎಂಬುದನ್ನು ಅರಿತ ಮೈಸೂರು ಮಹಾರಾಜರು 1874ರಲ್ಲಿ ಮೀಸಲಾತಿ ಜಾರಿಗೆ ತರುವ ಮೂಲಕ ದೇಶಕ್ಕೆ ಮಾದರಿಯಾದರು. ಅಲ್ಲದೆ ಮಿಲ್ಲರ್ ಆಯೋಗ ರಚನೆ ಮಾಡಿ ಸರ್ಕಾರಿ ಹುದ್ದೆಗಳಲ್ಲಿ ಬ್ರಾಹ್ಮಣ್ಯರ ಪ್ರಾಬಲ್ಯವನ್ನು ಕಡಿಮೆಗೊಳಿಸುವ ಪ್ರಯತ್ನ ಮಾಡಿದರು ಎಂದು ತಿಳಿಸುವ ಮೂಲಕ ಇಂತಹ ಮೀಸಲಾತಿ ವಿಚಾರಗಳು ಪಕ್ಷಗಳಲ್ಲಿಯೂ, ಸಂಸತ್ತಿನಲ್ಲೂ ಚರ್ಚೆಯಾಗಬೇಕು. ಇಡಬ್ಲ್ಯೂಎಸ್(ಆರ್ಥಿಕವಾಗಿ ದುರ್ಬಲ ವರ್ಗ) ಮೀಸಲಾತಿ ವಿಚಾರದಲ್ಲಿ ಪ್ರತಿಕ್ರಿಯೆ ನೀಡಿರುವ ಸಿದ್ದರಾಮಯ್ಯ, ರಾಷ್ಟ್ರಕ್ಕೆ ಮಾದರಿಯಾಗುತ್ತಾರೆ. ಅದರ ಪುನರ್ ವಿಮರ್ಶೆಯಾಗುವ ರೀತಿಯಲ್ಲಿ ಮಾರ್ಗದರ್ಶನ ನೀಡಬೇಕಾಗಿದೆ ಎಂದರು.

ನ್ಯಾಯಾಂಗದಲ್ಲಿ ಸಾಮಾಜೀಕರಣವಾಗಿಲ್ಲ. ಇದರ ಬಗ್ಗೆ ರಾಜಕೀಯ ಪಕ್ಷಗಳಲ್ಲಿ ಯಾವ ಚರ್ಚೆಯೂ ಆಗುತ್ತಿಲ್ಲ. ರಾಷ್ಟ್ರದ ಎಲ್ಲಾ ಸಂಸ್ಥೆಗಳಲ್ಲಿ ಮೀಸಲಾತಿ ಜಾರಿಯಾಗಿದ್ದರೂ ಉನ್ನತ ನ್ಯಾಯಾಂಗದಲ್ಲಿ ಅಂದರೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇಮಕಾತಿಯಲ್ಲಿ ಯಾವುದೇ ಪ್ರಾತಿನಿಧ್ಯ ದಲಿತರಿಗಾಗಲೀ, ಮಹಿಳೆಯರಿಗಾಗಲೀ ಅಥವಾ ಹಿಂದುಳಿದ ವರ್ಗಗಳಿಗಾಗಲೀ ಸಿಗುತ್ತಿಲ್ಲ. ಇತ್ತೀಚೆಗಂತೂ ದಲಿತರಿಗೆ, ಹಿಂದುಳಿದ ವರ್ಗಗಳಿಗೆ, ಮಹಿಳೆಯರಿಗೆ ಮಾರಕವಾಗುವ ಕಾಯ್ದೆಗಳು ಬರುತ್ತಿವೆ. ಎಲ್ಲಾ ಜಾತಿ–ಜನಾಂಗದವರ ಸಂಖ್ಯೆಗನುಗುಣವಾಗಿ ಮೀಸಲಾತಿ ನೀಡಬೇಕಾಗಿದೆ ಎಂದರು.

ಪರಿಶಿಷ್ಟ ಜಾತಿಯೊಳಗೆ ಸೇರಿಸುವ ಯತ್ನ: ಜಸ್ಟಿಸ್ ಬಾಲಕೃಷ್ಣ ಅವರ ನೇತೃತ್ವದಲ್ಲಿ ಆಯೋಗ ರಚನೆಯಾಗಿದ್ದು, ಪರಿಶಿಷ್ಟ ಜಾತಿಯೊಳಗೆ ದಲಿತ ಕ್ರೈಸ್ತರು ಹಾಗೂ ದಲಿತ ಮುಸ್ಲಿಂಮರನ್ನು ಸೇರಿಸಬೇಕು ಎನ್ನಲಾಗುತ್ತಿದೆ. ಈ ವಿಚಾರ ಹಿಂದೊಮ್ಮೆಯೂ ಪ್ರಸ್ತಾಪವಾಗಿ ಕೈಬಿಡಲಾಗಿತ್ತು. ಇದರ ಬಗ್ಗೆ ಕಾಂಗ್ರೆಸ್ ಪಕ್ಷ ಸ್ಪಷ್ಟ ನಿಲುವು ಕಂಡುಕೊಳ್ಳುವ ಮೂಲಕ ಅಂತಿಮ ಸ್ವರೂಪ ನೀಡಬೇಕಾಗಿದೆ. ಮೋದಿಯವರು, ಸಿದ್ದರಾಮಯ್ಯ ಅವರು ಜಾರಿಗೆ ತಂದ ಅನ್ನಭಾಗ್ಯ, ಕ್ಷೀರಭಾಗ್ಯ ಇನ್ನಿತರ ಯೋಜನೆಗಳನ್ನು ರದ್ದುಗೊಳಿಸುವುದಾಗಿ ಹೇಳಿ ಅದೇ ಮಾದರಿಯಲ್ಲಿ ಮಹಾರಾಷ್ಟ್ರ ಸೇರಿದಂತೆ ಎರಡ್ಮೂರು ರಾಜ್ಯಗಳಲ್ಲಿ ಉಚಿತ ಅಕ್ಕಿ, ಹಾಲು ವಿತರಣೆ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಹೇಳುವುದು ಒಂದಾದರೆ, ಮಾಡುವುದು ಮತ್ತೊಂದಾಗಿದೆ ಎಂದು ಟೀಕಿಸಿದರು.

ತುಲನಾತ್ಮಕ ಅಧ್ಯಯನವಾಗಬೇಕು: ಹೋರಾಟದ ಮೂಲಕ ಅಧಿಕಾರ ಪಡೆದ ಸೈದ್ಧಾಂತಿಕ ಹಿನ್ನೆಲೆಯುಳ್ಳ ಸಿದ್ದರಾಮಯ್ಯ ಅವರ ಅಧಿಕಾರಾವಧಿಯಲ್ಲಿ ಕೈಗೊಂಡ ಜನಪರ ಕಾರ್ಯಕ್ರಮಗಳ ದಾಖಲೆ ಮಾಡುವುದರ ಜೊತೆಗೆ ಮೌಲ್ಯಮಾಪನ ಮಾಡುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದಿಂದಲೇ ತುಲನಾತ್ಮಕ ಅಧ್ಯಯನವಾಗಬೇಕು. ರಾಜ್ಯದ ಜನರ ಯೋಗಕ್ಷೇಮಕ್ಕಾಗಿ ಪ್ರಾಮಾಣಿಕ ಕೆಲಸ ಮಾಡಿದ ಸಿದ್ದರಾಮಯ್ಯ, ಅನ್ನಭಾಗ್ಯ, ಗುಟ್ಕಾ ನಿಷೇಧ ಮಾಡಿ ಸಾಮಾಜಿಕ ಕಾಳಜಿ ತೋರಿದ್ದಾರೆ.

ಸಿದ್ದರಾಮಯ್ಯ ಕಾಂಗ್ರೆಸ್‌ನ ಮೂಲ ಸಿದ್ಧಾಂತಕ್ಕೆ ಸೇರಿದವರು...

"ಮಾಜಿ ಸಿಎಂ ಸಿದ್ದರಾಮಯ್ಯ ಕಾಂಗ್ರೆಸ್ ಮೂಲದರಾಗದಿದ್ದರೂ ಕಾಂಗ್ರೆಸ್‌ನ ಸಿದ್ಧಾಂತಕ್ಕೆ ಸೇರಿದವರಾಗಿದ್ದಾರೆ. ಸೈದ್ಧಾಂತಿಕ ಸ್ಪಷ್ಟತೆ, ಅಭಿವೃದ್ಧಿ ಮುನ್ನೋಟ ಇರುವ ಸಿದ್ದರಾಮಯ್ಯ ಅವರು, ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಅನ್ನು ಪ್ರಾದೇಶಿಕ ಪಕ್ಷವನ್ನಾಗಿಸಲು ಪ್ರಯತ್ನಿಸಿದ್ದಾರೆ. ರಾಹುಲ್ ಗಾಂಧಿಯವರ ಚಿಂತನೆಯೂ ಇದೆ ಆಗಿದೆ. ಕೊರೊನಾ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ನೀಡಿದ ಅನ್ನಭಾಗ್ಯ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿಯರು ವಿಸ್ತರಣೆ ಮಾಡಿದ್ದಾರೆ.

–ದಿನೇಶ್ ಅಮಿನ್‌ಮಟ್ಟು, ಹಿರಿಯ ಪತ್ರಕರ್ತ

ಬ್ರಾಹ್ಮಣರನ್ನು, ಬ್ರಾಹ್ಮಣಿಕೆಯನ್ನು ಎಂದೂ ನಂಬಬೇಡಿ....

- ಸಿದ್ದರಾಮಯ್ಯ ಸಮ್ಮುಖದಲ್ಲೇ ಚಿಂತಕ ಪ.ಮಲ್ಲೇಶ್ ವಿವಾದಾತ್ಮಕ ಹೇಳಿಕೆ
- ಈ ದೇಶವನ್ನು ಹಾಳು ಮಾಡಿದ್ದೇ ವೇದಗಳು, ಉಪನಿಷತ್ತುಗಳು
- ಬ್ರಾಹ್ಮಣರು, ಲಿಂಗಾಯತರು, ಒಕ್ಕಲಿಗರು ಮಠ ಮಾಡಿಕೊಂಡು ಮೀಸಲಾತಿಗೆ ಡಿಮ್ಯಾಂಡ್ ಮಾಡ್ತವ್ರೆ...

ಮೈಸೂರು,ನ.15(ಎಂಕೆ)–ನನ್ನ ಪ್ರಾರ್ಥನೆ ಇಷ್ಟೇ... ಈ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಏನಾದರೂ ಮಾಡಿ. ಎಷ್ಟೊಂದು ಸ್ವಾಮಿಗಳಾಗಿದ್ದಾರೆ... ಎಷ್ಟೊಂದು ಮಠಗಳಾಗಿಬಿಟ್ಟಿವೆ... ಕಲ್ಪನೆಗೂ ಸಾಧ್ಯವಿಲ್ಲ. ಆ .... ಬ್ರಾಹ್ಮಣರು ಒಂದು ಮಾಡಿದರು, ಆಮೇಲೆ ಲಿಂಗಾಯತರು ಒಂದು ಮಾಡಿದರು. ಇತ್ತೀಚಿನ ವರ್ಷ ಗೌಡರು ಮಾಡಿದರು ಎಂದು ಚಿಂತಕ ಪ.ಮಲ್ಲೇಶ್ ಮಾರ್ಮಿಕವಾಗಿ ನುಡಿದರು.

'ಸಿದ್ದರಾಮಯ್ಯ–75' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಯಾವ ಕಾರಣಕ್ಕೂ ಈ ಬ್ರಾಹ್ಮಣರನ್ನು, ಬ್ರಾಹ್ಮಣಿಕೆಯನ್ನು ನಂಬಬೇಡಿ. ಇವತ್ತು ಎಲ್ಲಾ ಜಾತಿಗಳು ಡಿಮ್ಯಾಂಡ್ ಮಾಡುತ್ತಾರೆ. ಸಂಘಟನೆ ಮಾಡಿಕೊಂಡು ಮಠಾಧಿಪತಿಗಳನ್ನು ಸೃಷ್ಟಿ ಮಾಡಿಕೊಂಡು ಡಿಮ್ಯಾಂಡ್ ಮಾಡುತ್ತಾರೆ. ಎಲ್ಲರಿಗೂ ಮೀಸಲಾತಿ ಬೇಕು. ಎಲ್ಲಿ ಕೊಡಲು ಸಾಧ್ಯ. 50ರಷ್ಟಕ್ಕಿಂತ ಕೊಡಲು ಸಾಧ್ಯವೇ ಇಲ್ಲ. ಆದರೂ ಇಡಬ್ಲ್ಯೂಎಸ್ ಮಾಡಿಕೊಂಡು 60ರಷ್ಟು ಮೀಸಲಾತಿ ಮಾಡಿಕೊಂಡಿದ್ದಾರೆ. ಅದೂ ಕೂಡ ಬ್ರಾಹ್ಮಣರ ಕೈವಾಡ. ನಾನು ಒಂದು ಮಾತು ಹೇಳುತ್ತೇನೆ ಯಾವ ಕಾರಣಕ್ಕೂ ಈ ಬ್ರಾಹ್ಮಣರನ್ನು ಬ್ರಾಹ್ಮಣಿಕೆಯನ್ನು ನಂಬಬೇಡಿ. ಈ ದೇಶವನ್ನು ಹಾಳುಮಾಡಿದ ಒಂದು ವ್ಯವಸ್ಥೆ ಇದ್ದರೆ ಅದು ಈ ವೇದಗಳು, ಉಪನಿಷತ್ತುಗಳು. ಬುದ್ಧನನ್ನು ಕೈ ಹಿಡಿಯಿರಿ. ನಮಗೆ ಬುದ್ಧನ ಶೂನ್ಯವಿದೆ ಎಂದರು.

ನಾನು ಈ ಮಾತುಗಳನ್ನು ಯಾಕಿಷ್ಟು ಒರಟಾಗಿ ಹೇಳುತ್ತೇನೆ ಎಂದರೆ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಹೇಗೆ ಸಹಿಸುತ್ತೀರಿ. ಎಲ್ಲಾ ನಿರ್ವೀರ್ಯರಾಗಿ ಸುಮ್ಮನಿದ್ದೀವಿ. ಆದರೆ ಸುದ್ದಿಯನ್ನು ಕೇಳಿ ಕೇಳಿ ಚಪ್ಪರಿಸುತ್ತೇವೆ. ಇಷ್ಟೊಂದು ಭ್ರಷ್ಟಾಚಾರ, ಇಷ್ಟೊಂದು ಅತ್ಯಾಚಾರ ನಡೆಸುತ್ತಿರುವಾಗ ಯುವಕರು ಹೇಗೆ ಸುಮ್ಮನಿದ್ದೀರಿ ಎಂದು ಪ್ರಶ್ನಿಸಿದ ಅವರು, ಆ ಪುಣ್ಯಾತ್ಮ ಯಾರು ಅವರು... ಚಿತ್ರದುರ್ಗದ ಮುರುಘಾ ಮಠ ಸ್ವಾಮೀಜಿ ಮಾಡಿದ ಅನ್ಯಾಯ, ಎಂತಹ ಅಧರ್ಮ, ಎಂತಹ ಅತ್ಯಾಚಾರ. ನಾವೆಲ್ಲರೂ ತಲೆ ತಗ್ಗಿಸಬೇಕು. ಬರೀ ಆ ಸ್ವಾಮಿಯಲ್ಲ. ಎಂತಹ ಸಮಾಜವನ್ನು ಸೃಷ್ಟಿಸುತ್ತಿದ್ದೇವೆ ಎಂದು ಚಿಂತೆಯಾಗಿದೆ. ಇಲ್ಲೊಬ್ಬ ಅಡ್ಡಂಡ ಕಾರ್ಯಪ್ಪ ಅಂತೆ... ಅವನಿಗೆ ಅಡ್ನಾಡಿ ಕಾರ್ಯಪ್ಪ ಎಂದು ಹೆಸರು. ಅವನು ಟಿಪ್ಪುವಿನ ಮೇಲೆ ಅವನ ಕನಸುಗಳನ್ನು ಬರೆದಿದ್ದಾನಂತೆ... ನಾಟಕ ಬೇರೆ ಆಗುತ್ತಂತೆ. ನಮ್ಮ ಸ್ನೇಹಿತರಿಗೆ ಆ ನಾಟಕ ಆಗದಂತೆ ನೋಡಿಕೊಳ್ಳುವಂತೆ ಹೇಳಿದ್ದೇನೆ. ಇದಕ್ಕೆ ಭೈರಪ್ಪನವರು ಹೋಗಿ ಪುಸ್ತಕ ಬಿಡುಗಡೆ ಮಾಡುತ್ತಾರಂತೆ... ನನ್ನ ಪ್ರಾರ್ಥನೆ ಅಥವಾ ಒತ್ತಾಯ.. ನನ್ನಲ್ಲಾಗುತ್ತಿರುವ ಸಿಟ್ಟು ಯುವಕರ ಮೇಲೆ... ಯಾವ ಸ್ಥಿತಿಯಲ್ಲಿದ್ದೇವೆ ನೋಡಿ ನಾವು... ಹೇಗಾಗಬೇಕು ಎಂದರೆ 'ಹತ್ತಿ ತುಳಿ ಮತ್ತೆ ತುಳಿ, ಒತ್ತಿ ತುಳಿ, ಅಹಂಕಾರವಳಿಯಲಿ ನಾನು ಎಂಬುದೆಲ್ಲ ಉದುರಿ ನೀನು ಮಾತ್ರ ಉಳಿಯಲಿ' ಎಂಬಂತಾಗಬೇಕು ಎಂದರು.

ವಾಸ್ತವತೆಯನ್ನು ಮರೆತು ನಾವು ಮಾತನಾಡುವುದೆಂದರೆ ಗಂಟೆಗಟ್ಟಲೇ ನಾವು ಮಾತನಾಡಬಹುದು. ಈ ರಾಜ್ಯ, ದೇಶ ಯಾವ ಮಟ್ಟದಲ್ಲಿ ಹೋಗುತ್ತಿದೆ ಎಂಬುದು ಎಲ್ಲರ ಮನಸ್ಸಿನಲ್ಲಿ ಹುಟ್ಟಬೇಕು. 50 ಪೈಸೆಗೆ ಸಿಗುತ್ತಿದ್ದ ಚಾಕೊಲೇಟ್‌ಗಳು 1 ರೂ. ಆಗಿದೆ. ದಿಕ್ಕೆ ಇಲ್ಲದ ಸಮಾಜವನ್ನು ನಾವು ಕಟ್ಟುತ್ತಿದ್ದೇವೆ. ಪ್ರಧಾನಮಂತ್ರಿ ಈ ದೇಶಕ್ಕೆ ಪ್ರಧಾನ ಮಂತ್ರಿ. ಆದರೆ ಅವರು ಕೇವಲ ಆರ್‌ಎಸ್‌ಎಸ್ ಮತ್ತು ಬಿಜೆಪಿಗೆ ಮಾತ್ರ ಪ್ರಧಾನ ಮಂತ್ರಿಯಾಗಿದ್ದಾರೆ. ಆದರೆ ಇದಕ್ಕೆ ನಮ್ಮ ಪ್ರತಿಕ್ರಿಯೆ ಏನು? ಯುವಕರು ಏನು ಮಾಡುತ್ತಿದ್ದಾರೆ. ಇಷ್ಟೊಂದು ಅನ್ಯಾಯವಾಗುತ್ತಿದೆಯಲ್ಲ ಹೇಗೆ ಸಾಧ್ಯ ಎಂದು ಬೇಸರ ವ್ಯಕ್ತಪಡಿಸಿದರು. ಇಷ್ಟೊಂದು ಭ್ರಷ್ಟಾಚಾರ? ನಂಜನಗೂಡಿನಲ್ಲಿ ನಮ್ಮ ಸಂಬಂಧಿಕರ ಮೂರೂವರೆ ಎಕರೆ ಜಮೀನು 40 ವರ್ಷಗಳ ಕೋರ್ಟ್‌ನಲ್ಲಿ ಕಡೆಗೆ ಅವರಂತೆ ಆಯಿತು. ಅವರು ಖಾತೆ ಮಾಡಿಸಲು ಹೋದರೆ ತಹಸಿಲ್ದಾರರಿಗೆ 10 ಲಕ್ಷ ರೂ. ಕೊಡಬೇಕಂತೆ.. ಸಿದ್ದರಾಮಯ್ಯನ ಕಾಲದಲ್ಲೂ ಲಂಚ ಇತ್ತು. ಆದರೆ ಇಷ್ಟೊಂದು ಮಟ್ಟಕ್ಕೆ ಇರಲಿಲ್ಲ. ಯಾವ ಮುಲಾಜು ಇಲ್ಲದೆ ಅಧಿಕಾರಿಗಳು ಕೇಳುತ್ತಾರಲ್ಲ... ಯುವಕರು ಇಂತಹ ವಿಷಯದಲ್ಲಿ ಯೋಚನೆಯನ್ನೇ ಮಾಡುತ್ತಿಲ್ಲ. ಭವಿಷ್ಯದ ಬಗ್ಗೆ ಯೋಚನೆಯನ್ನೇ ಮಾಡುತ್ತಿಲ್ಲ ಎಂದರು.

ಸಿದ್ದರಾಮಯ್ಯ ಮುಂದೆ ದೊಡ್ಡ ಸವಾಲು: ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯ ಗೆಲ್ಲುತ್ತಾರೆ. ಆದರೆ ಅವರ ಮುಂದೆ ದೊಡ್ಡ ಸವಾಲುಗಳಿವೆ. ಈ ಪುಣ್ಯಾತ್ಮ ಸೋತಾಗ ಬಸ್‌ನಲ್ಲಿ ಹೋಗುತ್ತಿದ್ದ. ವಾಸ್ತವ ಸ್ಥಿತಿಗತಿ ಹಾಗೂ ಮುಂದಿನ ಭವಿಷ್ಯದ ಬಗ್ಗೆ ಸದಾ ಎಚ್ಚರ ಇರುವ ಸಿದ್ದರಾಮಯ್ಯ ಧೀಮಂತ ನಾಯಕ. ಅವರದ್ದು ಸಾಮಾನ್ಯ ಬುದ್ಧಿಶಕ್ತಿಯಲ್ಲ. ನಾಡಿನ ಅಭಿವೃದ್ಧಿಯ ಬಗ್ಗೆ ಸದಾ ಚಿಂತನೆ ಮಾಡುತ್ತಾರೆ. ಸಿದ್ದರಾಮಯ್ಯ ಅಧಿಕಾರಕ್ಕೆ ಬಂದೇ ಬರುತ್ತಾರೆ. ನೀವು ಬಂದರೆ ಕೋಟಿ ಕೋಟಿ ಜನ ಸಂತೋಷಪಡುತ್ತಾರೆ. ಅಧಿಕಾರಕ್ಕೆ ಬಂದ ಮೇಲೆ ಮಾಡುವ ಕರ್ತವ್ಯಗಳನ್ನು ಮಾಡಲೇಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com, For advertisements: ad@mysurumithra.com, website: www.mysurumithra.com

ಭಾವನಾತ್ಮಕವಾಗಿ ಮತ ಕೇಳುತ್ತಿರುವ ಸಿದ್ದರಾಮಯ್ಯ ನೂರು ಕಾಲ ಬದುಕಲಿ

ಚಿಕ್ಕಮಗಳೂರು: ಸಿದ್ದರಾಮಯ್ಯ ಅವರು ತಮಗೆ ಆರೋಗ್ಯ ಸರಿ ಇಲ್ಲ ಎಂದು ಭಾವನಾತ್ಮಕವಾಗಿ ಮತ ಕೇಳುತ್ತಿದ್ದು, ಅವರು ನೂರು ಕಾಲ ಬದುಕಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಮಂಗಳವಾರ ಹೇಳಿದ್ದಾರೆ. ಜನಸಂಕಲ್ಪ ಯಾತ್ರೆ ಹಿನ್ನೆಲೆ ಕಡೂರಿಗೆ ಆಗಮಿಸಿದ್ದ ಸಿಎಂ ಬಸವರಾಜ ಬೊಮ್ಮಾಯಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.



ಸಿದ್ದರಾಮಯ್ಯ ಅವರು ತಮಗೆ ಆರೋಗ್ಯ ಸರಿ ಇಲ್ಲ. ಬಿಪಿ ಶುಗರ್ ಇದೆ, ಬಹಳ ದಿನ ಬದುಕಿರ್ತೀನೋ ಇಲ್ಲವೋ ಗೊತ್ತಿಲ್ಲ. ನಾನು ಸಿಎಂ ಆಗಬೇಕಾದರೆ ನೀವು ಮತ ಹಾಕಲೇಬೇಕು ಎಂದು ಭಾವನಾತ್ಮಕವಾಗಿ ಮತ ಕೇಳುತ್ತಿದ್ದಾರೆ. ಅವರಿಗೆ ಏನು ಆಗುವುದು ಬೇಡ, ಅವರು ನೂರು ಕಾಲ ಬದುಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ ಎಂದು ಹೇಳಿದ್ದಾರೆ. 2013 ರಲ್ಲೂ ಸಿದ್ದರಾಮಯ್ಯ ಅವರು ಇದೇ ರೀತಿ ಹೇಳಿದ್ದರು. ಆಗ ಜನ ಅವರನ್ನು ನಂಬಿ ಮತ ಹಾಕಿದ್ದರು. ಆದರೆ, ಸಿದ್ದರಾಮಯ್ಯ ಜನರ ಮತಗಳಿಗೆ ಬೆಲೆ ನೀಡಿಲ್ಲ. ಸಿದ್ದರಾಮಯ್ಯ ಅವರ ಆಡಳಿತ ಕಾಲದಲ್ಲಿ ಕೊಲೆ, ಸುಲಿಗೆ ಜಾಸ್ತಿ ಇತ್ತು. ಈಗ ಜನ ಅವರನ್ನು ನಂಬದೆ ವಿರೋಧ ಪಕ್ಷದಲ್ಲಿ ಕೂರಿಸಿದ್ದಾರೆ. ಈಗ ಮತ್ತೆ ಅವರನ್ನು ನಂಬುವ ಸ್ಥಿತಿಯಲ್ಲಿ ಜನ ಇಲ್ಲ. ಕನ್ನಡಿಗರು ಇಂತಹ ಮಾತಿಗೆ ಬೆಲೆ ನೀಡಲ್ಲ. ಕನ್ನಡಿಗರು ವಿಶ್ಲೇಷಣೆ ಮಾಡಿ ಮತ ಹಾಕುತ್ತಾರೆ ಎಂದು ತಿಳಿಸಿದರು.

ಗುಂಬಜ್ ಮಾದರಿ ಬಸ್ ನಿಲ್ದಾಣ ಧ್ವಂಸಗೊಳಿಸುವ ಪ್ರತಾಪ್‌ಸಿಂಹ ಹೇಳಿಕೆಗೆ ಸಿದ್ದರಾಮಯ್ಯ ವಾಗ್ದಾಳಿ

ಒಡೆದು ಹಾಕಲು ಇವನ್ಯಾವ್ನೋನು?



ಮೈಸೂರು, ನ.15(ಆರ್‌ಕೆಬಿ)– ಗುಂಬಜ್ ಮಾದರಿಯ ಬಸ್ ತಂಗುದಾಣಗಳನ್ನು ತೆರವು ಮಾಡದಿದ್ದರೆ ಜೆಸಿಬಿ ತಂದು ಧ್ವಂಸಗೊಳಿಸುತ್ತೇನೆಂದು ಎಚ್ಚರಿಕೆ ನೀಡಿರುವ ಸಂಸದ ಪ್ರತಾಪ್ ಸಿಂಹ ವಿರುದ್ಧ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಏಕವಚನದಲ್ಲೇ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಿನ ತಮ್ಮ ನಿವಾಸದ ಬಳಿ ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಒಡೆದು ಹಾಕಲು ಇವನ್ಯಾವ್ನೋನು ಎಂದು ಪ್ರತಾಪ್ ಸಿಂಹ ವಿರುದ್ಧ ಸಿದ್ದರಾಮಯ್ಯ ಏಕವಚನದಲ್ಲಿ ಗುಡುಗಿದರು. ಕಟ್ಟುವವರೆಗೂ ಇವರು ಏನು ಮಾಡುತ್ತಿದ್ದರು. ಖಾಸಗಿ ಇಂಜಿನಿಯರ್‌ಗಳು ಅವುಗಳನ್ನು ಕಟ್ಟಿಲ್ಲ. ಸರ್ಕಾರದ ಇಂಜಿನಿಯರ್‌ಗಳು ಕಟ್ಟಿದ್ದಾರೆ. ಸರ್ಕಾರದ ಹಣದಿಂದ ಬಸ್ ತಂಗುದಾಣಗಳನ್ನು ಕಟ್ಟಲಾಗಿದೆ. ಈಗ ಅವುಗಳನ್ನು ಒಡೆದು ಹಾಕಲು ಇವನ್ಯಾರು. ಮುಂಬರುವ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಮತಗಳ ಧ್ರುವೀಕರಣಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ. ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಮತಗಳ ಧ್ರುವೀಕರಣಕ್ಕೆ ಹೊರಟಿದ್ದಾರೆ. ಮೊಘಲರು 600 ವರ್ಷ ಆಳ್ವಿಕೆ ಮಾಡಿದರಲ್ಲಾ, ಆಗ ಇವರೆಲ್ಲ ಎಲ್ಲಿಗೆ ಹೋಗಿದ್ದರು ಎಂದು ಹರಿಹಾಯ್ದರು.

ಪ್ರತಾಪ್ ಸಿಂಹಗೆ ಸಾಮಾನ್ಯ ಜ್ಞಾನವಿಲ್ಲ: ಹೀಗೇ ಇರಬೇಕು ಎಂಬ ರೂಲ್ಸ್ ಎಲ್ಲಿದೆ. ಸರ್ಕಾರಿ ಅಧಿಕಾರಿಗಳು ಮಾಡಿರುವ ಪ್ಲ್ಯಾನ್ ಇದು. ಗುಂಬಜ್ ರೀತಿ ಇರುವುದನ್ನೆಲ್ಲಾ ಒಡೆದು ಬಿಡುತ್ತೀರಾ. ಬಿಜೆಪಿಯ ಈ ತಂತ್ರ ಯಶಸ್ವಿಯಾಗುವುದಿಲ್ಲ. ಕರ್ನಾಟಕ ಮತ್ತು ಈ ದೇಶದ ಜನರು ಜಾತ್ಯಾತೀತರು. ಜಾತಿ ಧರ್ಮದ ವಿಚಾರವನ್ನು ಜನರು ಎಂದಿಗೂ ಒಪ್ಪುವುದಿಲ್ಲ ಎಂದು ಸಿದ್ದರಾಮಯ್ಯ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಬಲವಂತ ಮತಾಂತರಕ್ಕೆ ವಿರೋಧ: ಬಲವಂತದ ಮತಾಂತರಕ್ಕೆ ನನ್ನ ವಿರೋಧವೂ ಇದೆ. ಯಾರನ್ನೂ ಸಹ ಬಲವಂತವಾಗಿ ಮತಾಂತರ ಮಾಡಕೂಡದು. ಯಾರು ಯಾವ ಧರ್ಮವನ್ನು ಬೇಕಾದರೂ ಪಾಲನೆ ಮಾಡಬಹುದು. ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಪರ ನಾವು ಸಹ ಇದ್ದೇವೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಬಸ್ ಯಾತ್ರೆ ದಿನಾಂಕ ನಿಗದಿಯಾಗಿಲ್ಲ: ಕಾಂಗ್ರೆಸ್ ಪಕ್ಷದಿಂದ ಬಸ್ ಯಾತ್ರೆ ವಿಚಾರ ಕುರಿತು ಪ್ರಸ್ತಾಪಿಸಿದ ಅವರು, ಬಸ್ ಯಾತ್ರೆಗೆ ಇನ್ನೂ ದಿನಾಂಕ ನಿಗದಿಯಾಗಿಲ್ಲ. ಬಸ್ ಮಾತ್ರ ಸಿದ್ಧವಾಗುತ್ತಿದೆ. ಬಸ್ ಕೋಲಾರಕ್ಕೆ ಹೋಗಿ ಟೆಸ್ಟ್ ರನ್ ಆಗಿದೆ. ನಾನೊಂದು ಟೀಂ, ಡಿಕೆಶಿ ಒಂದು ಟೀಂ ಆಗಿ ಪ್ರಚಾರ ಮಾಡುತ್ತೇವೆ. ನಾನೊಂದು ಭಾಗದಲ್ಲಿ, ಅವರೊಂದು ಭಾಗದಲ್ಲಿ ಹೋಗುತ್ತೇವೆ. ಬಿಜೆಪಿಯ ಭ್ರಷ್ಟಾಚಾರ, ದುರಾಡಳಿತ ಎಲ್ಲವನ್ನೂ ಜನರಿಗೆ ಹೇಳುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದರು.

ಬಸ್ ಯಾತ್ರೆ ಆರಂಭಕ್ಕೆ ನಾವೇನು ಜೋತಿಷ್ಯ ನೋಡುವುದಿಲ್ಲ. ಶೂನ್ಯ ಮಾಸದಲ್ಲಿ ಹುಟ್ಟಿದ ಮಕ್ಕಳೆಲ್ಲಾ ಏನ್ ಸತ್ತು ಹೋಗ್ತಾರಾ. ನಮಗೆ ರಾಹುಕಾಲ, ಗುಳಿಕಕಾಲ, ಯಮಗಂಡಕಾಲ ಯಾವುದೂ ಇಲ್ಲ. ಎಲ್ಲಾ ಕಾಲಗಳು ಒಳ್ಳೆಯ ಕಾಲವೇ ಆಗಿರುತ್ತದೆ, ನವೆಂಬರ್ ಕೊನೆಯಲ್ಲಿ ಅಥವಾ ಡಿಸೆಂಬರ್ ಮೊದಲ ವಾರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡುತ್ತೇವೆ ಎಂದು ತಿಳಿಸಿದರು.

ಮತ್ತೆ ಚಾಮುಂಡೇಶ್ವರಿಯಲ್ಲಿ ನಾನು ಸ್ಪರ್ಧಿಸಲ್ಲ



ಮೈಸೂರು,ನ.15(ಎಂಟಿವೈ)– ಮುಂಬರುವ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲೇ ಸ್ಪರ್ಧಿಸುವಂತೆ ಬೆಂಬಲಿಗರ ಒತ್ತಾಯವನ್ನು ನಯವಾಗಿ ತಿರಸ್ಕರಿಸಿರುವ ಮಾಜಿ ಸಿಎಂ ಸಿದ್ದರಾಮಯ್ಯ ಕಳೆದ ಚುನಾವಣೆಯಲ್ಲಿ ಸೋಲನನುಭವಿಸಿರುವ ಹಿನ್ನೆಲೆಯಲ್ಲಿ ಮತ್ತೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರಿನಿಂದ ಕೆ.ಆರ್.ನಗರಕ್ಕೆ ಪ್ರಯಾಣಿಸುವ ವೇಳೆ ಹಳೇ ಕಾಮನಕೊಪ್ಪಲು ಗ್ರಾಮದ ಬಳಿ ಇಲವಾಲ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಕಾಂಗ್ರೆಸ್ ಕಾರ್ಯಕರ್ತರು ಸಿದ್ದರಾಮಯ್ಯ ಅವರನ್ನು ಸ್ವಾಗತಿಸಿ, ಮುಂಬರುವ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದಲೇ ನೀವು ಸ್ಪರ್ಧಿಸಬೇಕು. ಈ ಬಾರಿ ಗೆಲ್ಲಿಸುತ್ತೇವೆ ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಚಾಮುಂಡೇಶ್ವರಿ ಕ್ಷೇತ್ರ ನನ್ನನ್ನು ಮುಖ್ಯಮಂತ್ರಿ ಆಗುವವರೆಗೆ ಬೆಳೆಸಿದೆ. ಈ ಕ್ಷೇತ್ರದ ಜನರ ಋಣವನ್ನು ಈ ಜನ್ಮದಲ್ಲಿ ತೀರಿಸಲು ಸಾಧ್ಯವಿಲ್ಲ. ನಿಮ್ಮ ಅಭಿಮಾನಕ್ಕೆ ನಾನು ಋಣಿಯಾಗಿದ್ದೇನೆ. ಆದರೆ ಮತ್ತೊಮ್ಮೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸುವುದಿಲ್ಲ. ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೆ. ನೀವೆಲ್ಲರೂ ಪಕ್ಷ ನಿರ್ಧರಿಸಿದ ಅಭ್ಯರ್ಥಿಗೆ ಬೆಂಬಲ ನೀಡಿ ಒಗ್ಗಟ್ಟಿನಿಂದ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಜಿ.ಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಸದಸ್ಯ ಅರುಣ್‌ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸತೀಶ್‌ಕುಮಾರ್, ತಾ.ಪಂ ಮಾಜಿ ಸದಸ್ಯ ಸಿ.ಎಂ.ಸಿದ್ಧರಾಮೇಗೌಡ, ಕಾಮನಕೊಪ್ಪಲು ಕರೀಗೌಡ, ಮೈದನಹಳ್ಳಿ ಶಿವಣ್ಣ, ಶಿವೇಗೌಡ, ನಾಗವಾಲ ಮಹೇಶ, ಆನಂದೂರು ರಾಮೇಗೌಡ, ವೈ.ಸಿ.ಸ್ವಾಮಿ, ರವಿ, ರಾಮು, ಪಾಷ, ಮಂಜುನಾಥ್, ನಾಗೇಶ್, ರಾಜೇಶ್ ಸೇರಿದಂತೆ ಮಹಿಳೆಯರು, ನೂರಾರು ಕಾರ್ಯರ್ತರು ಹಾಜರಿದ್ದರು.

ಶಾಲಾ ಮಕ್ಕಳಿಗೆ ಸೈಕಲ್ ಸ್ಥಗಿತಕ್ಕೆ ಸರ್ಕಾರ ಚಿಂತನೆ

ಮೂಲ ಸೌಕರ್ಯದ ನೆಪ ಮುಂದೊಡ್ಡಿ ಬಡ ಮಕ್ಕಳ ಯೋಜನೆಗೆ ಎಳ್ಳು-ನೀರು ಬಿಡಲು ನಿರ್ಧಾರ



ಬೆಂಗಳೂರು, ನ.15(ಕೆಎಂಶಿ)– ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಎಂಟನೇ ತರಗತಿ ಓದುತ್ತಿರುವ ಮಕ್ಕಳಿಗೆ ನೀಡುತ್ತಿರುವ ಸೈಕಲ್ ಭಾಗ್ಯ ಸ್ಥಗಿತಗೊಳಿಸಲು ಸರ್ಕಾರ ಮುಂದಾಗಿದೆ.

ಕೋವಿಡ್ ಕಾರಣದಿಂದ ಕಳೆದ ವರ್ಷವೂ ಸೈಕಲ್ ವಿತರಣೆ ಮಾಡಲಿಲ್ಲ. ಪ್ರಸಕ್ತ ಶೈಕ್ಷಣಿಕ ವರ್ಷವೂ ಅರ್ಧ ಭಾಗ ಪೂರ್ಣಗೊಂಡಿದ್ದರೂ, ವಿದ್ಯಾರ್ಥಿಗಳಿಗೆ ಆ ಭಾಗ್ಯ ದೊರೆತಿಲ್ಲ. ವಿಧಾನಸೌಧದಲ್ಲಿಂದು ಸುದ್ದಿಗಾರರ ಜತೆ ಮಾತನಾಡಿದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಮೊದಲು ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸುವ ಕಡೆ ನಾವು ಗಮನ ಹರಿಸಿದ್ದೇವೆ. ಸೈಕಲ್ ಎಂದಾದರೂ ಕೊಡಬಹುದು ಎಂದು ಹಾರಿಕೆ ಉತ್ತರ ನೀಡಿದರು. ಎಷ್ಟೋ ಸರ್ಕಾರಿ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ. ವಿದ್ಯಾರ್ಥಿಗಳು ಹೆಚ್ಚು ಇರುವ ಕಡೆ ಕೊಠಡಿಗಳ ಕೊರತೆ ಇದೆ ಇಂತಹ ಶಾಲೆಗಳಿಗೆ ಮೊದಲು ಮೂಲ ಸೌಕರ್ಯ ಕಲ್ಪಿಸಬೇಕು. ಮಕ್ಕಳಿಗೆ ಗುಣಮಟ್ಟ ಶಿಕ್ಷಣ ನೀಡುವುದು ನಮ್ಮ ಆದ್ಯತೆ. ಇದಕ್ಕಾಗಿ ಸರ್ಕಾರ ಒತ್ತು ನೀಡುತ್ತಿದೆ. ಶಿಕ್ಷಕರ ಕೊರತೆ ಯಾಗಬಾರದೆಂದು ಹೊಸದಾಗಿ 15 ಸಾವಿರ ಶಿಕ್ಷಕರ ನೇಮಕಾತಿಯ ಜೊತೆಗೆ 30 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿದ್ದೇವೆ ಎಂದರು. ನಾವು ಈಗ ಮಕ್ಕಳ ಕಲಿಕೆಯ ಗುಣಮಟ್ಟವನ್ನು ಹೆಚ್ಚಳ ಮಾಡಲು ಆದ್ಯತೆ ನೀಡಿದ್ದೇವೆ. ಮಕ್ಕಳ ಓದಿಗೆ ಅನುಕೂಲ ಮಾಡಿಕೊಡಲು ಸರ್ಕಾರಿ ಶಾಲೆಗಳ ಕೊಠಡಿಗಳ ಕಟ್ಟುವಿಕೆಗೆ ಆದ್ಯತೆ ನೀಡಿದ್ದೇವೆ. ಈ ವರ್ಷ ಎಂಟು ಸಾವಿರ ಶಾಲಾ ಕೊಠಡಿಗಳನ್ನು ನಿರ್ಮಿಸಲು ಬಯಸಿದ್ದೇವೆ ಎಂದು ವಿವರಿಸಿದರು.



ಸುಮಾರು ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಎಂಟು ಸಾವಿರ ಶಾಲಾ ಕೊಠಡಿಗಳನ್ನು ನಿರ್ಮಿಸುತ್ತಿದ್ದು ಇದರಿಂದ ಮಕ್ಕಳ ಕಲಿಕೆಗೆ ಪೂರಕ ವಾತಾವರಣ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಜ್ಞರು ಹೇಳಿದರೆ ಶಾಲಾ ಕೊಠಡಿಗಳಿಗೆ ಕೇಸರಿ ಬಣ್ಣ ಹಚ್ಚಲು ಸಿದ್ಧ: ಬಿ.ಸಿ.ನಾಗೇಶ್

ಬೆಂಗಳೂರು: ಶಾಲಾ ಕೊಠಡಿಗಳಿಗೆ ನಿರ್ದಿಷ್ಟ ಬಣ್ಣ ಬಳಿಯುವಂತೆ ಯಾವುದೇ ಸುತ್ತೋಲೆ ಹೊರಡಿಸಿಲ್ಲ. ಆದರೆ, ವಿದ್ಯಾರ್ಜನೆಗೆ ಕೇಸರಿ ಬಣ್ಣ ಪೂರಕ ಎಂಬುದಾಗಿ ತಜ್ಞರು ಶಿಫಾರಸು ಮಾಡಿದರೆ ಅದೇ ಬಣ್ಣ ಬಳಿಯಲು ಸರ್ಕಾರ ಸಿದ್ಧ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಜ್ಞಾನ ಸಂಪಾದನೆಗೆ ವಿವೇಕಾನಂದರನ್ನು ಮಾದರಿಯನ್ನಾಗಿ ಇರಿಸಿಕೊಳ್ಳಬೇಕಿದೆ. ಆ ಕಾರಣಕ್ಕಾಗಿ 'ವಿವೇಕ' ಎಂಬ ಹೆಸರಿನಡಿ 7,601 ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಹೆಚ್ಚುವರಿಯಾಗಿ 900 ಕೊಠಡಿ ಮಂಜೂರು ಮಾಡಲಾಗುವುದು ಎಂದರು. ಶಾಲಾ ಕೊಠಡಿಗಳ ವಿನ್ಯಾಸ, ಬಣ್ಣ ಮತ್ತಿತರ ವಿಚಾರಗಳಿಗೆ ಸಂಬಂಧಿಸಿದಂತೆ ಇಲಾಖಾ ಹಂತದಲ್ಲಿ ಯಾವುದೇ ನಿರ್ಧಾರವೂ ಆಗಿಲ್ಲ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಶಾಲೆ, ಕಾಲೇಜುಗಳಲ್ಲಿ ಹಿಜಾಬ್ ನಿಷೇಧದ ವಿಚಾರದಲ್ಲಿ ಕಾಂಗ್ರೆಸ್ ರಾಜಕೀಯ ಮಾಡಿತ್ತು. ಈಗಲೂ ಶಾಲಾ ಕೊಠಡಿಯ ಬಣ್ಣದ ವಿಚಾರದಲ್ಲೂ ಅದೇ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು.

ವಿರೋಧ ಮಾಡುವುದಕ್ಕಾಗಿಯೇ ಕೆಲವರು ಇರುತ್ತಾರೆ. ಕೇಸರಿ ಬಣ್ಣವನ್ನು ಕಾಂಗ್ರೆಸ್‌ನವರು ಏಕೆ ವಿರೋಧ ಮಾಡುತ್ತಾರೆ ಕೇಸರಿ ಬಣ್ಣದಲ್ಲಿ ಹಿಂದುತ್ವ ಕಾಣಿಸಿತೆ ಎಂದು ನಾಗೇಶ್ ಪ್ರಶ್ನಿಸಿದರು. ಎಲ್ಲ ಶಾಲೆಗಳಲ್ಲೂ ವಿವೇಕಾನಂದರ ಭಾವಚಿತ್ರ ಇರಿಸಲಾಗುವುದು. ಯಾವ ಮಾದರಿಯ ಭಾವಚಿತ್ರ ಎಂಬುದನ್ನು ಶೀಘ್ರದಲ್ಲಿ ನಿರ್ಧರಿಸಲಾಗುವುದು ಎಂದರು.

ಮಕ್ಕಳನ್ನು 1ನೇ ತರಗತಿಗೆ ಸೇರಿಸಲು 6 ವರ್ಷ ಕಡ್ಡಾಯ: ಅಧಿಕೃತ ಆದೇಶ

ಬೆಂಗಳೂರು: ಒಂದನೇ ತರಗತಿ ಸೇರ್ಪಡೆಗೆ ವಿದ್ಯಾರ್ಥಿಗೆ 6 ವರ್ಷ ಕಡ್ಡಾಯ ಎಂಬ ನಿಯಮವನ್ನು ಜಾರಿಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ವಿದ್ಯಾರ್ಥಿ ಒಂದನೇ ತರಗತಿ ಸೇರಬೇಕಾದರೆ ಕಡ್ಡಾಯವಾಗಿ 6 ವರ್ಷ ತುಂಬಿರಬೇಕು. 2025–26ನೇ ಸಾಲಿನಿಂದ ನಿಯಮ ಅನ್ವಯವಾಗಲಿದೆ ಎಂದು ಸರ್ಕಾರ ಅಧಿಕೃತ ಆದೇಶದಲ್ಲಿ ತಿಳಿಸಿದೆ. 2025–26ನೇ ಸಾಲಿನಿಂದ ಅನ್ವಯವಾಗುವಂತೆ ಜೂನ್ 1ಕ್ಕೆ 6 ವರ್ಷ ತುಂಬಿರುವ ಮಗುವನ್ನು ಒಂದನೇ ತರಗತಿಗೆ ದಾಖಲಿಸಲು ವಯೋಮಿತಿಯನ್ನು ನಿಗದಿಪಡಿಸಿ ಆದೇಶಿಸಿದೆ. ಹಳೆಯ ಆದೇಶಕ್ಕೆ ತಿದ್ದುಪಡಿ ಮಾಡಿ ಸರ್ಕಾರ ಪ್ರಕಟಣೆ ಹೊರಡಿಸಿದೆ.

ಮೈಸೂರಿನ ಸೇವೆ ತೃಪ್ತಿ ತಂದಿದೆ

ನಿರ್ಗಮಿತ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅಭಿಮತ



ಮೈಸೂರು, ನ.15(ಆರ್‌ಕೆ)ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ 2 ವರ್ಷ, 9 ತಿಂಗಳ ಕಾಲ ಪೊಲೀಸ್ ಆಯುಕ್ತರಾಗಿ ಸಲ್ಲಿಸಿದ ಸೇವೆ ತಮಗೆ ಅತೀವ ತೃಪ್ತಿ ತಂದಿದೆ ಎಂದು ಡಾ. ಚಂದ್ರಗುಪ್ತ ತಿಳಿಸಿದ್ದಾರೆ.

ನೂತನ ಆಯುಕ್ತ ಬಿ.ರಮೇಶ್ ಅವರಿಗೆ ಅಧಿಕಾರ ಹಸ್ತಾಂತರಿಸಿದ ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸಲು ಸಿಕ್ಕಿದ ಅವಕಾಶವನ್ನು ಬಳಸಿಕೊಂಡು ಯಾವುದೇ ಚ್ಯುತಿ ಬಾರದಂತೆ ಕರ್ತವ್ಯ ನಿರ್ವಹಿಸಿ ಎಲ್ಲರ ಸಹಕಾರದಿಂದ ಆದಷ್ಟೂ ಒಳ್ಳೆಯ ಕೆಲಸ ಮಾಡಿದ್ದೇನೆಂಬ ತೃಪ್ತಿ ಇದೆ ಎಂದರು. 2020ರ ಫೆಬ್ರವರಿ 1ರಂದು ಅಧಿಕಾರ ಸ್ವೀಕರಿಸಿದಾಗ ಕೋವಿಡ್ ಪರಿಸ್ಥಿತಿ ಇತ್ತು. ಸರ್ಕಾರ ಕಾಲ ಕಾಲಕ್ಕೆ ಹೊರಡಿಸಿದ ಮಾರ್ಗಸೂಚಿಗಳನ್ನು ಅನುಷ್ಠಾನ ಮಾಡುವ ಮೂಲಕ ಕೊರೊನಾ ಸೋಂಕು ಹರಡದಂತೆ ಎಲ್ಲ ಸಿಬ್ಬಂದಿ ಸಹಕಾರದಿಂದ ತಡೆಯಲು ಸಾಧ್ಯವಾಯಿತು. ನಮ್ಮವರು ಹಸಿದವರಿಗೆ ಆಹಾರ, ನೀರು, ಪುನರ್ವಸತಿ ಕಲ್ಪಿಸುವಲ್ಲಿ ವಲಸೆ ಕಾರ್ಮಿಕರನ್ನು ಸುರಕ್ಷಿತವಾಗಿ ಅವರ ಊರುಗಳಿಗೆ ಕಳುಹಿಸಿಕೊಟ್ಟು ಮಾನವೀಯತೆ ಮೆರೆದಿದ್ದನ್ನು ನಾನೆಂದೂ ಮರೆಯಲಾರೆ ಎಂದು ಡಾ. ಚಂದ್ರಗುಪ್ತ ನುಡಿದರು.

ಕೋವಿಡ್ ಸೋಂಕಿತರನ್ನು ಆಸ್ಪತ್ರೆಗೆ ಕರೆದೊಯ್ಯುವುದು, ಲಾಕ್‌ಡೌನ್ ನಿರ್ಬಂಧ ಜಾರಿಗೊಳಿಸುವುದು, ಪೊಲೀಸ್ ಸಿಬ್ಬಂದಿಗೆ ಪ್ರತ್ಯೇಕ ಕೋವಿಡ್ ಕೇಂದ್ರದಲ್ಲಿ ಚಿಕಿತ್ಸಾ ವ್ಯವಸ್ಥೆ, ಗಾಂಯುತ್ರಿಪುರಂನಲ್ಲಿ ಪೊಲೀಸ್ ಸಿಬ್ಬಂದಿ ಮತ್ತು ಕುಟುಂಬದವರಿಗೆ ಖಾಯಂ ಪ್ರಾಥಮಿಕ ಆರೋಗ್ಯ ಕೇಂದ್ರ, ಸಿಎಆರ್ ಘಟಕದಲ್ಲಿ ಸುಸಜ್ಜಿತ ಶೌಚಾಲಯ ನಿರ್ಮಾಣ ಮಾಡುವ ಮೂಲಕ ಇಲಾಖೆಯ ಸಿಬ್ಬಂದಿ ಕ್ಷೇಮಾಭಿವೃದ್ಧಿಗೆ ಒತ್ತು ನೀಡಲಾಯಿತು.

ಆಲನಹಳ್ಳಿ ಮತ್ತು ಹೆಬ್ಬಾಳು ಠಾಣೆಗಳಿಗೆ ಹೊಸ ಕಟ್ಟಡ ನಿರ್ಮಾಣ, ಪೊಲೀಸ್ ಆಯುಕ್ತರ ಕಚೇರಿಗೆ ಹೊಸ ಕಟ್ಟಡ ಉದ್ಘಾಟನೆ, ಬ್ಯಾಂಡ್ ಹೌಸ್‌ಗಾಗಿ ಹಳೇ ಪಾರಂಪರಿಕ ಕಟ್ಟಡದ ನವೀಕರಣ, ಸಿಸಿಬಿ ಘಟಕದ ರೀ–ಆರ್ಗನೈಜೇಷನ್, ಹೊಸದಾಗಿ ಸೆನ್ ಪೊಲೀಸ್ ಠಾಣೆ, ಠಾಣೆಗಳಲ್ಲಿ ಸಿಬ್ಬಂದಿ ಸೇವಾ ವರದಿ ವೀಕ್ಷಿಸಲು ಮುಕ್ತ ಅವಕಾಶ, 10 ಹೊಸ ಕುದುರೆ ಖರೀದಿ, ಮೌಂಟೆಡ್ ಪೊಲೀಸ್ ಪೆಟ್ರೋಲಿಂಗ್, ಸಿಸಿಟಿವಿ ಕ್ಯಾಮರಾಗಳ ಅಳವಡಿಕೆ, ಸಂಚಾರ ನಿಯಮ ಉಲ್ಲಂಘನೆ ನೋಟಿಸ್ ಜನರೇಟ್ ಸಿಸ್ಟಂ ನಮ್ಮ ಅವಧಿಯಲ್ಲಿ ಮಾಡಿದ ಕೆಲಸಗಳು ಎಂದರು.

ಹಾರ್ಡಿಂಜ್ ಸರ್ಕಲ್, ವಾಜಪೇಯಿ ಸರ್ಕಲ್ (ಹಿನಕಲ್ ರಿಂಗ್ ರೋಡ್ ಜಂಕ್ಷನ್)ನಲ್ಲಿ ಸಿಗ್ನಲ್ ಫ್ರೀ ವೃತ್ತ, ದಸರಾ ಸಂದರ್ಭ 9 ದಿನ ಸಂಜೆ ವೇಳೆ ಅರಮನೆ ಸುತ್ತಲಿನ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧ, ಸಿಎಆರ್ ಮೈದಾನ ಮತ್ತು ಪೊಲೀಸ್ ಠಾಣೆಗಳಲ್ಲಿ ಹಲವು ವರ್ಷಗಳಿಂದ ನಿಂತಿದ್ದ ವಾಹನಗಳ ವಿಲೇವಾರಿ, ರಾಷ್ಟ್ರಪತಿ, ಪ್ರಧಾನಮಂತ್ರಿಗಳ ಭೇಟಿ, 3 ಬಾರಿ ದಸರಾ ಮಹೋತ್ಸವ ನಿರ್ವಹಣೆ ಹಾಗೂ 2 ಬಾರಿ ವಾರ್ಷಿಕ ಪ್ರಾಪರ್ಟಿ ಪರೇಡ್ ಸೇರಿದಂತೆ ಮೈಸೂರು ನಗರದ ಪೊಲೀಸ್ ಘಟಕದಲ್ಲಿ ಹಲವು ಮಹತ್ತರ ಕೆಲಸ ಮಾಡಲು ತಮ್ಮ ಅವಧಿಯಲ್ಲಿ ಸಾಧ್ಯವಾಯಿತು ಎಂದು ಡಾ. ಚಂದ್ರಗುಪ್ತ ತಿಳಿಸಿದರು.

ಇಲ್ಲಿ ತಮ್ಮೊಂದಿಗೆ ಸಹಕರಿಸಿದ ಅಧಿಕಾರಿಗಳು, ಸಿಬ್ಬಂದಿಗಳಿಗೆ ಧನ್ಯವಾದ ತಿಳಿಸಿದ ಅವರು, ಇಲ್ಲಿನ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳು, ಜಿಲ್ಲಾಡಳಿತ, ಮಾಧ್ಯಮ ಸಂಸ್ಥೆಗಳು ನೀಡಿದ ಸಹಕಾರವನ್ನು ತಾವು ಸದಾ ಸ್ಮರಿಸುವುದಾಗಿ ನುಡಿದರು.

ಮೈಸೂರು ನೂತನ ಪೊಲೀಸ್ ಆಯುಕ್ತರಾಗಿ

ಬಿ.ರಮೇಶ್ ಅಧಿಕಾರ ಸ್ವೀಕಾರ

ಮೈಸೂರು ನನಗೆ ಹೊಸದು, ಎಲ್ಲರೂ ಸೇರಿ ಒಳ್ಳೆ ಕೆಲಸ ಮಾಡೋಣ



ಮೈಸೂರು, ನ.15(ಆರ್‌ಕೆ)–ಮೈಸೂರು ನಗರ ನೂತನ ಪೊಲೀಸ್ ಆಯುಕ್ತರಾಗಿ ಬಿ. ರಮೇಶ್ ಇಂದು ಅಧಿಕಾರ ವಹಿಸಿಕೊಂಡರು. ಮಂಗಳೂರಿನ ಪಶ್ಚಿಮ ವಲಯದ ಡಿಐಜಿಪಿ ಆಗಿ ವರ್ಗಾವಣೆಗೊಂಡಿರುವ ನಿರ್ಗಮಿತ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ರಮೇಶ್ ಅವರಿಗೆ ಅಧಿಕಾರ ಹಸ್ತಾಂತರಿಸಿ, ಪುಷ್ಪಗುಚ್ಛ ನೀಡಿ ಶುಭ ಕೋರಿದರು. ಅಧಿಕಾರ ವಹಿಸಿಕೊಂಡ ನಂತರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಬಿ. ರಮೇಶ್, ತಾವು ಬೆಂಗಳೂರು, ಹುಬ್ಬಳ್ಳಿ ಸೇರಿ ರಾಜ್ಯದ ಹಲವೆಡೆ ಕೆಲಸ ನಿರ್ವಹಿಸಿದ್ದೇನೆ. ನನಗೆ ಮೈಸೂರು ನಗರ ಹೊಸದು. ಇಲ್ಲಿ ಯಾವ ವಿಭಾಗಕ್ಕೆ ಹೆಚ್ಚು ಒತ್ತು ನೀಡಬೇಕೆಂಬುದರ ಬಗ್ಗೆ ಅಧಿಕಾರಿಗಳ ಸಭೆ ಕರೆದು ತಿಳಿದುಕೊಳ್ಳುತ್ತೇನೆ ಎಂದರು.

ಮೈಸೂರು ಸಾಂಸ್ಕೃತಿಕ ನಗರಿ. ಇಲ್ಲಿಯ ಜನರು ಪ್ರಜ್ಞಾವಂತರು, ಬುದ್ಧಿವಂತರು ಎಂದು ಕೇಳಿದ್ದೇನೆ. ಜನಪ್ರತಿನಿಧಿಗಳು, ಅಧೀನಾಧಿಕಾರಿಗಳು, ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಧ್ಯಮದವರು ಸಾರ್ವಜನಿಕರ ಸಹಕಾರದಿಂದ ಒಳ್ಳೆಯ ಕೆಲಸ ಮಾಡೋಣ. ಸಮಾಜದ ಹಿತದೃಷ್ಟಿಯಿಂದ ನಗರದ ಶಾಂತಿ ಕಾಪಾಡಿಕೊಂಡು ಕಾನೂನು–ಸುವ್ಯವಸ್ಥೆಗೆ ಭಂಗ ಉಂಟಾಗದಂತೆ ಕರ್ತವ್ಯ ನಿರ್ವಹಿಸಲು ಪ್ರಯತ್ನಿಸುತ್ತೇನೆ ಎಂದರು. ಹಿಂದಿನ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಮಾಡಿರುವ ಒಳ್ಳೆಯ ಕೆಲಸವನ್ನು ಮುಂದುವರಿಸಿಕೊಂಡು, ಎಲ್ಲರ ಸಹಕಾರದಿಂದ ಅಪರಾಧ ತಡೆ ಮತ್ತು ಪತ್ತೆ ಕಾರ್ಯಕ್ಕೆ ಆದ್ಯತೆ ನೀಡಿ ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವುದಾಗಿಯೂ ರಮೇಶ್ ನುಡಿದರು.

ಜೆಡಿಎಸ್ ಪಕ್ಷಕ್ಕೆ ಮಾಜಿ ಶಾಸಕ ಹೆಚ್.ನಿಂಗಪ್ಪ ರಾಜೀನಾಮೆ



ತುಮಕೂರು: ಜೆಡಿಎಸ್ ಮುಖಂಡ ಹಾಗೂ ಮಾಜಿ ಶಾಸಕ ಹೆಚ್.ನಿಂಗಪ್ಪ ಜೆಡಿಎಸ್ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆಂದು ಮಂಗಳವಾರ ತಿಳಿದುಬಂದಿದೆ.

2006ರಲ್ಲಿ ತುಮಕೂರು ಗ್ರಾಮಾಂತರ ಕ್ಷೇತ್ರದ ಶಾಸಕರಾಗಿದ್ದ ನಿಂಗಪ್ಪ ಅವರು 2013ರಲ್ಲಿ JDS ಟಿಕೆಟ್ ಸಿಗದಿದ್ದಕ್ಕೆ ಕೆಜೆಪಿಯಿಂದ ಸ್ಪರ್ಧಿಸಿದ್ದರು. ಬಳಿಕ ಕಾಂಗ್ರೆಸ್ ಸೇರಿದ್ದ ನಿಂಗಪ್ಪನವರು ಮತ್ತೆ 2018ರಲ್ಲಿ ಜೆಡಿಎಸ್‌ಗೆ ಮರಳಿದ್ದರು. ಇದೀಗ ಜೆಡಿಎಸ್ ಪಕ್ಷಕ್ಕೆ ನಿಂಗಪ್ಪ ಅವರು ರಾಜೀನಾಮೆ ನೀಡಿದ್ದಾರೆ. ಪಕ್ಷದ ಎಲ್ಲಾ ಚಟುವಟಿಕೆಗಳಿಂದ ದೂರ ಇಟ್ಟಿದ್ದಕ್ಕೆ ಅಸಮಾಧಾನವಾಗಿದೆ ಎಂದು ರಾಜೀನಾಮೆ ಪತ್ರದಲ್ಲಿ ಮಾಜಿ ಶಾಸಕ ನಿಂಗಪ್ಪ ಉಲ್ಲೇಖಿಸಿದ್ದಾರೆ.

2018 ರಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅವರು ಹೆಚ್.ನಿಂಗಪ್ಪನವರನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಎಂದು ನೇಮಿಸಿ ಆದೇಶ ಪತ್ರ ನೀಡಿದ್ದರು.

ಆದ್ರೆ ಅದು ಪತ್ರವಾಗಿಯೇ ಉಳಿಯಿತು. ಪಕ್ಷದ ಎಲ್ಲಾ ಚಟುವಟಿಕೆಗಳಿಂದ ನನ್ನ ದೂರ ಇಟ್ಟಿದ್ದರು ಎಂದು ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬ್ಯಾಟಿಂಗ್ ಕೋಚ್ ಆಗಿ ಮುಂದುವರಿಕೆ

ಮುಂಬೈ: ಮುಂಬೈ ಇಂಡಿಯನ್ಸ್ ಹಿರಿಯ ಆಲ್ ರೌಂಡರ್ ಕೀರಾನ್ ಪೊಲಾರ್ಡ್ ಮಂಗಳವಾರ ಐಪಿಎಲ್‌ನಿಂದ ನಿವೃತ್ತಿ ಘೋಷಿಸಿದ್ದಾರೆ. ಆದಾಗ್ಯೂ, ನೂತನ ಬ್ಯಾಟಿಂಗ್ ಕೋಚ್ ಆ ತಂಡದೊಂದಿಗೆ ಮುಂದುವರೆಯಲಿದ್ದಾರೆ.

ಇದು ಯುದ್ಧದ ಯುಗವಲ್ಲ: ಪುಟಿನ್‌ಗೆ ಪ್ರಧಾನಿ ಮೋದಿ ಸಲಹೆ

ಜಿ–20 ಶೃಂಗಸಭೆಯಲ್ಲಿ ಸದ್ದು



ಬಾಲಿ: ರಷ್ಯಾ–ಉಕ್ರೇನ್ ನಡುವಿನ ಯುದ್ಧವನ್ನು ಕೊನೆಗಾಣಿಸಲು ರಷ್ಯಾ ಅಧ್ಯಕ್ಷ ಪುಟಿನ್‌ಗೆ ಸಲಹೆ ನೀಡಿದ್ದಾಗ ಪ್ರಧಾನಿ ಮೋದಿ ಹೇಳಿದ್ದ ಮಾತುಗಳು ಈಗ ಬಾಲಿಯಲ್ಲಿ ನಡೆಯುತ್ತಿರುವ ಜಿ–20 ಶೃಂಗಸಭೆಯಲ್ಲೂ ಸದ್ದು ಮಾಡಿದ್ದು, ಸದಸ್ಯ ರಾಷ್ಟ್ರಗಳು ರಷ್ಯಾಗೆ ನೀಡುವ ಸಲಹೆ, ಎಚ್ಚರಿಕೆಗಳಲ್ಲಿ ಪ್ರಧಾನಿ ಮೋದಿ ಅವರ ಹೇಳಿಕೆಯನ್ನು ಉಲ್ಲೇಖಿಸಲು ನಿರ್ಧರಿಸಿವೆ.


ಇದು ಯುದ್ಧದ ಕಾಲವಲ್ಲ ಎಂದು ಪ್ರಧಾನಿ ಮೋದಿ ರಷ್ಯಾ ಅಧ್ಯಕ್ಷರಿಗೆ ಕಿವಿಮಾತು ಹೇಳಿದ್ದು ಜಿ–20 ಯ ಅಧಿಕೃತ ಹೇಳಿಕೆಗಳ ದಾಖಲೆಗೆ ಸೇರ್ಪಡೆಯಾಗಿದೆ ಎಂದು ಫೈನಾನ್ಷಿಯಲ್ ಟೈಮ್ಸ್ ವರದಿ ಪ್ರಕಟಿಸಿದೆ. ಜಾಗತಿಕ ನಾಯಕರು ಪ್ರಧಾನಿ ಅವರ ಈ ಕಾಲ ಯುದ್ಧದ ಕಾಲವಲ್ಲ ಎಂಬ ಹೇಳಿಕೆಯನ್ನು ಜಿ–20 ಶೃಂಗಸಭೆಯಲ್ಲಿ ಪುನರುಚ್ಛರಿಸಲಿದ್ದು, ಕರಡು ದಾಖಲೆಯಲ್ಲಿ ಇದು ಉಲ್ಲೇಖವಾಗಿದೆ. ಇದಕ್ಕೆ ಪರಮಾಣು ಶಸ್ತ್ರಾಸ್ತ್ರಗಳ ಬಳಕೆಯನ್ನು ವಿರೋಧಿಸಿರುವ ಎಲ್ಲಾ ರಾಯಭಾರಿಗಳೂ ಒಪ್ಪಿಗೆ ಸೂಚಿಸಿದ್ದಾರೆ. ಈ ಬಗ್ಗೆ ಮಾಹಿತಿಯುಳ್ಳ ಇಬ್ಬರು ಅಧಿಕಾರಿಗಳ ಪ್ರಕಾರ, ರಷ್ಯಾ ಆಕ್ರಮಣವನ್ನು ತೀವ್ರವಾಗಿ ಟೀಕಿಸುತ್ತಿದ್ದ ಸದಸ್ಯ ರಾಷ್ಟ್ರಗಳ ನಡುವೆ, ರಷ್ಯಾವನ್ನು ಟೀಕಿಸುವ ಮಾತು, ಶಬ್ದಗಳ ಬಗ್ಗೆ ಒಮ್ಮತ ಮೂಡುವುದಕ್ಕೆ ಭಾರತೀಯ ನಿಯೋಗ ಮಹತ್ವದ ಪಾತ್ರ ವಹಿಸಿತ್ತು. ಫೈನಾನ್ಷಿಯಲ್ ಟೈಮ್ಸ್ ಕರಡು ಹೇಳಿಕೆಯನ್ನು ನೋಡಿದ್ದು, ಜಿ–20 ಅಧಿಕೃತ ಹೇಳಿಕೆಯ ಕರಡು ಪ್ರತಿ ಹೀಗಿದೆ "ಬಹುತೇಕ ಸದಸ್ಯ ರಾಷ್ಟ್ರಗಳು ಉಕ್ರೇನ್ ಮೇಲಿನ ಯುದ್ಧವನ್ನು ಖಂಡಿಸಿದ್ದು, ಮನುಷ್ಯರು ಅತೀವ ನೋವು ಎದುರಿಸುವಂತಾಗಿದೆ. ಈ ನಡುವೆ ಪರಮಾಣು ಶಸ್ತ್ರಾಸ್ತ್ರಗಳ ಬಳಕೆ ಬೆದರಿಕೆ ಸ್ವೀಕಾರಾರ್ಹವಲ್ಲ, ಸಂಘರ್ಷಗಳ ಶಾಂತಿಯುತ ಪರಿಹಾರ, ಬಿಕ್ಕಟ್ಟುಗಳನ್ನು ಪರಿಹರಿಸಲು ಪ್ರಯತ್ನಗಳು, ರಾಜತಾಂತ್ರಿಕತೆ ಮತ್ತು ಸಂಭಾಷಣೆ ಬಹುಮುಖ್ಯವಾದದ್ದು, "ಇಂದಿನ ಯುಗ ಯುದ್ಧದ್ದಾಗಿರಬಾರದು". ಈ ಕರಡು ಹೇಳಿಕೆಗೆ ಎಲ್ಲಾ ದೇಶಗಳ ರಾಜತಾಂತ್ರಿಕ ಅಧಿಕಾರಿಗಳೂ ಒಪ್ಪಿಗೆ ನೀಡಿದ್ದು, ಜಿ–20 ನಾಯಕರಿಂದ ಇನ್ನಷ್ಟೇ ಸಹಿ ಆಗಬೇಕಿದೆ.

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ವೃತ್ತಪತ್ರಿಕೆಗಳ ಪಾತ್ರ ಪ್ರಮುಖವಾದುದು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ, ಪತ್ರಿಕೋದ್ಯಮ ವಿಭಾಗದಿಂದ ಕಾರ್ಯಾಗಾರ

ಮೈಸೂರು, ನ.15– ಬ್ರಿಟಿಷರ ದಾಸ್ಯದ ಸಂಕೋಲೆಯಲ್ಲಿದ್ದ ಭಾರತಕ್ಕೆ ಸ್ವಾತಂತ್ರ್ಯ ದೊರೆಯಲು ವೃತ್ತಪತ್ರಿಕೆಗಳು ಪ್ರಮುಖ ಪಾತ್ರ ವಹಿಸಿದ್ದವು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹೇಳಿದರು.

ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಮತ್ತು ಪತ್ರಿಕೋದ್ಯಮ ವಿಭಾಗಗಳು ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ 'ಸ್ವಾತಂತ್ರ್ಯ ಪೂರ್ವದಲ್ಲಿ ವೃತ್ತಪತ್ರಿಕೆಗಳ ಪಾತ್ರ' ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟಕ್ಕೆ ಪತ್ರಿಕೆಗಳು ಒಟ್ಟಾಗಿ ಕೈಜೋಡಿಸಿದವು. ಲೇಖನಗಳು, ಸುದ್ದಿ, ಸಂಪಾದಕೀಯ ಮತ್ತು ಘಟನಾವಳಿಗಳ ಚಿತ್ರಣಗಳನ್ನು ಜನರಿಗೆ ಮನಮುಟ್ಟುವ ರೀತಿಯಲ್ಲಿ ತಲುಪಿಸಿ ಹೋರಾಟದ ಮನೋಭಾವವನ್ನು ಮತ್ತು ದೇಶಪ್ರೇಮದ ಬಗ್ಗೆ ಕಿಚ್ಚನ್ನು ಹಚ್ಚಲು ಪತ್ರಿಕೆಗಳು ಮುನ್ನುಡಿ ಬರೆದವು ಎಂದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ವೃತ್ತಪತ್ರಿಕೆಗಳ ಪಾತ್ರ ಕುರಿತ ಕಾರ್ಯಾಗಾರವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಡಾ.ಸುಕನ್ಯಾ, ಡಾ.ಎಚ್.ಆರ್. ತಿಮ್ಮೇಗೌಡ, ಎಲ್. ರವಿ ಅಯ್ಯರ್, ಡಾ.ಎಚ್. ಶ್ರೀಧರ್, ಎ.ಆರ್. ನಂದೀಶ್ ಇದ್ದಾರೆ.

ದೇಶದ ಮೂಲೆ ಮೂಲೆಗಳಲ್ಲಿ ನಡೆಯುವ ಮಾಹಿತಿಗಳನ್ನು ಜನರಿಗೆ ತಲುಪಿಸುವುದು ಅಂದಿನ ಪತ್ರಿಕೆಗಳ ಮೂಲ ಉದ್ದೇಶವಾಗಿತ್ತು. ಬಹಳಷ್ಟು ಸ್ವಾತಂತ್ರ್ಯ ಹೋರಾಟಗಾರರು ತಮ್ಮದೇ ಆದ ಪತ್ರಿಕೆಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು ಹೊರತಂದರು. ಇವರಲ್ಲಿ ಪ್ರಮುಖರಾಗಿ ರಾಜರಾಮ್ ಮೋಹನ್‌ರಾಯ್, ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್, ಡಾ. ಬಿ.ಆರ್. ಅಂಬೇಡ್ಕರ್, ಎಂ. ವೆಂಕಟಕೃಷ್ಣಯ್ಯ (ತಾತಯ್ಯ) ಮೊದಲಾದವರು ಸೇರಿದ್ದಾರೆ ನಂಜನಗೂಡಿನ ತಿರುಮಲಾಂಬ ರಾಜ್ಯದ ಮೊದಲ ಮಹಿಳಾ ಪತ್ರಕರ್ತೆ ಎನಿಸಿಕೊಂಡಿದ್ದರು ಎಂದರು. ಮಾಧ್ಯಮ ಎಂದರೆ ಪ್ರಜಾಪ್ರಭುತ್ವದ ಕಾವಲು ನಾಯಿ. ಪ್ರಜೆಗಳಿಗೆ ತಿಳಿಹೇಳುವ ಮೂಲಕ ಎಚ್ಚರಿಕೆಯ ಗಂಟೆಯನ್ನು ಬಾರಿಸಬೇಕು. ಜನರಿಗೂ ಸರ್ಕಾರಕ್ಕೂ ಸೇತುವೆಯಾಗಿ ನಿಲ್ಲಬೇಕು. ಆದರೆ ಇಂದು ಮಾಧ್ಯಮದಲ್ಲಿ ನೈತಿಕತೆ ಕುಗ್ಗುತ್ತಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿ, ವಿದ್ಯಾರ್ಥಿಗಳು ಪತ್ರಿಕೆಗಳು, ನಿಯತಕಾಲಿಕೆಗಳನ್ನು ಪ್ರತಿದಿನ ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಹಾಗೂ ಜ್ಞಾನವನ್ನು ವೃದ್ಧಿಸಲು ಸಹಕಾರಿಯಾಗಲಿದೆ. ಇಂದು ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ ಮೊರೆ ಹೋಗಿದ್ದಾರೆ. ಇದರಿಂದ ಅನಾನುಕೂಲಗಳೇ ಹೆಚ್ಚು ಎಂದರು.

ಕಾಲೇಜಿನ ಶೈಕ್ಷಣಿಕ ಸಲಹೆಗಾರ ಹಾಗೂ ಕಾರ್ಯನಿರ್ವಾಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್. ರವಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಉಪಸ್ಥಿತರಿದ್ದರು. ವಿದ್ಯಾರ್ಥಿ ಸುಪ್ರಿತ್ ಎಸ್. ಭಾರದ್ವಾಜ್ ಪ್ರಾರ್ಥಿಸಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್.ರವಿ ಸ್ವಾಗತಿಸಿದರು. ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಎ.ಆರ್. ನಂದೀಶ ಎ.ಆರ್. ವಂದಿಸಿದರು. ವಿದ್ಯಾರ್ಥಿನಿ ಸೃಷ್ಟಿ ಆರ್. ಜೋಯಿಸ್ ಕಾರ್ಯಕ್ರಮ ನಿರೂಪಿಸಿದರು.

ಟಿಕೆಟ್‌ಗಾಗಿ ಕೆಪಿಸಿಸಿ ಅರ್ಜಿ ಆಹ್ವಾನ

ಮಂಡ್ಯದಿಂದ 13, ಕೆ.ಆರ್.ಪೇಟೆಯಿಂದ ಅರ್ಧ ಡಜನ್ ಆಕಾಂಕ್ಷಿಗಳು

• ಮತ್ತಷ್ಟು ಆಕಾಂಕ್ಷಿಗಳಿಂದ ಅರ್ಜಿ ಸಾಧ್ಯತೆ • ಮಳವಳ್ಳಿ, ಶ್ರೀರಂಗಪಟ್ಟಣದಿಂದ ತಲಾ 3, ಮೇಲುಕೋಟೆಯಿಂದ ನಾಲ್ವರು, ನಾಗಮಂಗಲ, ಮದ್ದೂರಿಂದ ತಲಾ ಒಬ್ಬರು ಆಕಾಂಕ್ಷಿಗಳು

• ಎಂ.ಕೆ.ಮೋಹನ್‌ರಾಜ್

ಮಂಡ್ಯ, ನ.15– ಮುಂಬರುವ 2023ರ ವಿಧಾನಸಭಾ ಚುನಾವಣೆಗೆ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಅರ್ಜಿ ಆಹ್ವಾನಿಸಿರುವ ಹಿನ್ನೆಲೆಯಲ್ಲಿ ಮಂಡ್ಯದಿಂದ 13 ಹಾಗೂ ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಿಂದ 6 ಮಂದಿ ಟಿಕೆಟ್ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮುಂಬರುವ ಚುನಾವಣೆಗೆ ಟಿಕೆಟ್ ಪಡೆಯಲಿಚ್ಛಿಸುವವರು 5 ಸಾವಿರ ರೂ. ಕಟ್ಟಿ ಅರ್ಜಿ ಪಡೆದು, 2 ಲಕ್ಷ ರೂ. ಕಟ್ಟಡ ನಿಧಿಗೆ ನೀಡಿ, ಅರ್ಜಿ ಸಲ್ಲಿಸಬೇಕೆಂದು ಕಟ್ಟಾಜ್ಞೆ ಮಾಡಿರುವ ಹಿನ್ನೆಲೆಯಲ್ಲಿ ಮಂಡ್ಯದಲ್ಲಿ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಟಿಕೆಟ್ ಆಕಾಂಕ್ಷಿಗಳು ನಾ ಮುಂದು ತಾ ಮುಂದು ಎಂದು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಮಂಗಳವಾರ ಕಡೆಯ ದಿನ ಎಂದು ಹೇಳಿದರಾದರೂ, ಮತ್ತೆ ಒಂದಷ್ಟು ದಿನ ಸಮಯಾವಕಾಶ ನೀಡಿರುವುದರಿಂದ ಮತ್ತಷ್ಟು ಟಿಕೆಟ್ ಆಕಾಂಕ್ಷಿಗಳು ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ.

ಮಂಡ್ಯದಲ್ಲಿ 13 ಆಕಾಂಕ್ಷಿಗಳು: ಪ್ರತಿ ಚುನಾವಣೆಯಲ್ಲೂ ಸಾಕಷ್ಟು ಕುತೂಹಲ ಕೆರಳಿಸುವ ಕೇಂದ್ರ ಸ್ಥಾನ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್‌ಗಾಗಿ ಬರೋಬ್ಬರಿ 13 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಮಾಜಿ ಸಚಿವ, ಶಾಸಕ ಹಾಗೂ ಹಿರಿಯ ಕಾಂಗ್ರೆಸ್ಸಿಗ ಎಂ.ಎಸ್.ಆತ್ಮಾನಂದ ಮಂಗಳವಾರ ತಮ್ಮ ಅಪಾರ ಬೆಂಬಲಿಗರೊಂದಿಗೆ ಅರ್ಜಿ ಸಲ್ಲಿಸಿದರೆ, ಯೂತ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಂ.ಎಸ್.ಚಿದಂಬರ್, ಕಾಂಗ್ರೆಸ್ ಮುಖಂಡ ಸಿದ್ದಾರೂಢ ಸತೀಶ್‌ಗೌಡ, ಖ್ಯಾತ ವೈದ್ಯ ಡಾ.ಕೃಷ್ಣ, ಉದ್ಯಮಿ ಹಾಗೂ ಡಿಕೆಶಿ ಆಪ್ತ ಅಮರಾವತಿ ಚಂದ್ರಶೇಖರ್, ಮನ್‌ಮುಲ್ ನಿರ್ದೇಶಕ ಉಮ್ಮಡಹಳ್ಳಿ ಶಿವಪ್ಪ ಹಾಗೂ 2018ರ ವಿಧಾನಸಭಾ ಚುನಾವಣೆ ಪರಾಜಿತ ಅಭ್ಯರ್ಥಿ ಗಣಿಗ ರವಿಕುಮಾರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ನಗರಸಭೆ ಸದಸ್ಯ ರಾಮಲಿಂಗಯ್ಯ, ಮಂಡ್ಯ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಹಾಲಹಳ್ಳಿ ಅಶೋಕ್, ಕಾಂಗ್ರೆಸ್ ಮುಖಂಡ ಹನಕೆರೆ ಶಿವರಾಮು, ಮಾಜಿ ಶಾಸಕ ಹೆಚ್.ಬಿ.ರಾಮು, ಸಮಾಜ ಸೇವಕ ಕೀಲಾರ ರಾಧಕೃಷ್ಣ ಅರ್ಜಿ ಸಲ್ಲಿಸಿದ್ದಾರೆ.

ಕೆ.ಆರ್.ಪೇಟೆಯಿಂದಲೂ 6 ಅರ್ಜಿ ಸಲ್ಲಿಕೆ: ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಿಂದ ಬರೋಬ್ಬರಿ 6 ಮಂದಿ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸತತ 3 ಬಾರಿ ಚುನಾವಣೆಯಲ್ಲಿ ಸೋತಿರುವುದರಿಂದ ಈ ಬಾರಿ ಅವರಿಗೆ ಟಿಕೆಟ್ ಕೈತಪ್ಪಬಹುದೆಂಬ ಕಾರಣಕ್ಕೆ ಹೆಚ್ಚಿನ ಮಂದಿ ಟಿಕೆಟ್ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದಾರೆ.

ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿ ವಿಜಯರಾಮೇಗೌಡ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕಿಕ್ಕೇರಿ ಸುರೇಶ್, ಕಾಂಗ್ರೆಸ್ ಮುಖಂಡರಾದ ಎಂ.ಡಿ.ಕೃಷ್ಣಮೂರ್ತಿ, ಐಕನಹಳ್ಳಿ ನಾಗೇಂದ್ರ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಮಳವಳ್ಳಿಯಿಂದ ಮೂವರು: ಜಿಲ್ಲೆಯ ಏಕೈಕ ಮೀಸಲು ವಿಧಾನಸಭಾ ಕ್ಷೇತ್ರ ಮಳವಳ್ಳಿಯಲ್ಲಿ ಕ್ಷೇತ್ರದ ಮಾಜಿ ಶಾಸಕ ಪಿ.ಎಂ.ನರೇಂದ್ರಸ್ವಾಮಿಗೆ ಟಿಕೆಟ್ ಕೊಡಬಾರದೆಂದು ಇತ್ತೀಚೆಗೆ ಪಕ್ಷದ ಕೆಲ ಬಂಡಾಯ ನಾಯಕರು ರಹಸ್ಯ ಸಭೆ ಸೇರಿದ್ದರು. ಇದೀಗ ನರೇಂದ್ರಸ್ವಾಮಿ ಅಲ್ಲದೇ ಮತ್ತಿಬ್ಬರು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದು, ನರೇಂದ್ರಸ್ವಾಮಿಗೆ ತಲೆಬಿಸಿಯಾಗಿದೆ. ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ಇವರ ಜೊತೆಗೆ ಮಾಜಿ ಶಾಸಕಿ ಮಲ್ಲಾಜಮ್ಮ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಪ್ತ ಡಾ.ಮೂರ್ತಿ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಶ್ರೀರಂಗಪಟ್ಟಣದಿಂದ ಮೂವರು ಅರ್ಜಿ ಸಲ್ಲಿಕೆ: ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಮಾಜಿ ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ ಜೊತೆಗೆ ಹಿರಿಯ ಕಾಂಗ್ರೆಸ್ಸಿಗ ಪಾಲಹಳ್ಳಿ ಚಂದ್ರಶೇಖರ್, ಹಿರಿಯ ವಕೀಲ ಪುಟ್ಟೇಗೌಡ ಅರ್ಜಿ ಸಲ್ಲಿಸಿದ್ದು, ಟಿಕೆಟ್‌ಗಾಗಿ ಪೈಪೋಟಿ ಎದುರಾಗುವ ಸಾಧ್ಯತೆ ಇದೆ.

ಮೇಲುಕೋಟೆಯಿಂದ ನಾಲ್ವರು ಅರ್ಜಿ ಸಲ್ಲಿಕೆ: ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಾಕದ ಏಕೈಕ ಕ್ಷೇತ್ರ ಎಂದರೆ ಅದು ಮೇಲು ಕೋಟೆ ವಿಧಾನಸಭಾ ಕ್ಷೇತ್ರ. ರೈತ ಮುಖಂಡ ದಿ.ಕೆ.ಎಸ್.ಪುಟ್ಟಣ್ಣಯ್ಯ ಪುತ್ರ ದರ್ಶನ್ ಪುಟ್ಟಣ್ಣಯ್ಯ ಗೆ ಬೆಂಬಲ ನೀಡುವ ಸಲುವಾಗಿ ರಾಜ್ಯದ 224 ಕ್ಷೇತ್ರಗಳ ಪೈಕಿ ಕಾಂಗ್ರೆಸ್ 223 ರಲ್ಲಿ ಅಭ್ಯರ್ಥಿ ಹಾಕಿ ಮೇಲು ಕೋಟೆಯಲ್ಲಿ ಮಾತ್ರ ಅಭ್ಯರ್ಥಿ ಕಣಕ್ಕಿಳಿಸಿರಲಿಲ್ಲ. ಆದರೆ ಈ ಬಾರಿ ನಾಲ್ವರು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ರಾಜ್ಯ ವೈದ್ಯಕೀಯ ಸಂಘದ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಡಾ.ರವೀಂದ್ರ ಹಾಗೂ ಮಾಜಿ ಶಾಸಕ ಹಲಗೇಗೌಡರ ಪುತ್ರ ತ್ಯಾಗರಾಜು, ಕಾಂಗ್ರೆಸ್ ಮುಖಂಡ ನಾಗಭೂಷಣ್, ಆನಂದ್ ಕುಮಾರ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದರೆ, ಮಹತ್ವದ ಬೆಳವಣಿಗೆಯಲ್ಲಿ ಕಳೆದ 2018ರ ಚುನಾವಣೆಯ ಪ್ರಬಲ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೊರೊನಾ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಬಹಳಷ್ಟು ಓಡಾಟ ನಡೆಸಿದ್ದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಡಾ.ಬಿ.ರೇವಣ್ಣ ಅರ್ಜಿ ಪಡೆಯದಿರುವುದು ಕುತೂಹಲ ಮೂಡಿಸಿದೆ.

ಮದ್ದೂರಿನಿಂದಲೂ ಅರ್ಜಿ ಸಲ್ಲಿಕೆ: ಮದ್ದೂರು ಕ್ಷೇತ್ರದಿಂದ ಈಗಾಗಲೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಭ್ಯರ್ಥಿ ಘೋಷಣೆ ಮಾಡಿದ್ದು, ಮದ್ದೂರು ಕ್ಷೇತ್ರದ ಕಾಂಗ್ರೆಸ್‌ನ ಘೋಷಿತ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಣ್ಣನ ಮಗ ಎಂ.ಎಸ್.ಗುರುಚರಣ್ ಮದ್ದೂರು ಕ್ಷೇತ್ರದ ಕಾಂಗ್ರೆಸ್ ಮುಖಂಡರೊಂದಿಗೆ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೂ ಮುನ್ನ ತಮ್ಮ ದೊಡ್ಡಪ್ಪ ಎಸ್.ಎಂ.ಕೃಷ್ಣ ಆಶೀರ್ವಾದ ಪಡೆದರು. ಕೆಪಿಸಿಸಿ ಅಧ್ಯಕ್ಷ ಡಿಕೆಶಿ ಕಳೆದ ಒಂದು ವರ್ಷದ ಹಿಂದೆಯೇ ಮದ್ದೂರಿನಿಂದ ಗುರುಚರಣ್ ಹೆಸರು ಘೋಷಿಸಿದ್ದರು.

ನಾಗಮಂಗಲದಿಂದ ಸಿಆರ್‌ಎಸ್ ಅರ್ಜಿ ಸಲ್ಲಿಕೆ: ಜಿಲ್ಲಾ ಕಾಂಗ್ರೆಸ್ ನಾಯಕ ಎನ್.ಚಲುವರಾಯಸ್ವಾಮಿ ನಾಗಮಂಗಲ ಕ್ಷೇತ್ರದಿಂದ ಸ್ಪರ್ಧಿಸಲು ಅರ್ಜಿ ಸಲ್ಲಿಸಿದ್ದಾರೆ. ಆದರೆ ಅವರಿಗೆ ಪೈಪೋಟಿ ನೀಡಲು ಈವರೆಗೆ ನಾಗಮಂಗಲದಿಂದ ಯಾರು ಅರ್ಜಿಯೂ ಸಲ್ಲಿಸಿಲ್ಲ.

ಒಟ್ಟಾರೆ ಟಿಕೆಟ್ ಪಡೆಯಲು ಅರ್ಜಿ ಸಲ್ಲಿಸಬೇಕೆಂಬ ಮಾನದಂಡಕ್ಕೆ ಮಂಡ್ಯದಲ್ಲಿ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನಾಗಮಂಗಲ ಮದ್ದೂರು ಹೊರತುಪಡಿಸಿ, ಉಳಿದ ಕಡೆ ಟಿಕೆಟ್ ಆಕಾಂಕ್ಷಿತರು ತಂಡೋಪತಂಡವಾಗಿ ಅರ್ಜಿ ಸಲ್ಲಿಸಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಿಎಸ್‌ಪಿ ಭೂಮಿಪೂಜೆ



ಪಾಂಡವಪುರ, ನ.15– ತಾಲೂಕಿನ ಮಂಡಿಬೆಟ್ಟಹಳ್ಳಿ ಹಾಗೂ ಶಂಭೂನಹಳ್ಳಿ ಗ್ರಾಮದಲ್ಲಿ ಕೆಆರ್‌ಐಡಿಎಲ್ ಯೋಜನೆಯಡಿ 1.40 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿದರು.

ಮಂಡಿಬೆಟ್ಟಹಳ್ಳಿಯಲ್ಲಿ 55 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದ ಮುಖ್ಯರಸ್ತೆಯಿಂದ ಹರಿಜನ ಕಾಲೋನಿಗೆ ಸಂಪರ್ಕಿಸುವ ರಸ್ತೆ ಹಾಗೂ ಶಂಭೂನಹಳ್ಳಿಯಲ್ಲಿ 85 ಲಕ್ಷ ರೂ. ವೆಚ್ಚದಲ್ಲಿ ಡೇರಿ ಪಕ್ಕದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಂಡಿಬೆಟ್ಟಹಳ್ಳಿಯಲ್ಲಿ ಹರಿಜನ ಕಾಲೋನಿಗೆ ಸಂಪರ್ಕಿಸುವ ರಸ್ತೆ ಹಲವು ವರ್ಷಗಳಿಂದ ಗುಂಡಿ ಬಿದ್ದು ಅದ್ವಾನಗೊಂಡಿತ್ತು. ಇದೀಗ ಜನರಿಗೆ ಅನುಕೂಲ ಮಾಡಿಕೊಡಲು ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಅದೇ ರೀತಿ ಶಂಭೂನಹಳ್ಳಿಯ ಡೇರಿ ಪಕ್ಕದ ರಸ್ತೆಯನ್ನು ಗ್ರಾಮಸ್ಥರ ಒತ್ತಾಯದ ಮೇರೆಗೆ 85 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ಈ ವೇಳೆ ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಜಿಲ್ಲಾ ಯೂನಿಯನ್ ನಿರ್ದೇಶಕ ವಿ.ಎಸ್.ನಿಂಗೇಗೌಡ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮನೋಹರ್, ಮಾಜಿ ಅಧ್ಯಕ್ಷ ರವಿ, ಎಇಇ ಮಂಜುನಾಥ್, ಎಇ ಉದಯ್, ಮುಖಂಡರಾದ ಎಸ್.ನಾರಾಯಣಗೌಡ, ದ್ಯಾವಪ್ಪ, ಮಂಜುನಾಥ್, ವೆಂಕಟೇಶ್, ಎಂ.ಎ.ಮಂಜು, ಬೋರೇಗೌಡ ಸೇರಿದಂತೆ ಹಲವರಿದ್ದರು.

ಅಂಗನವಾಡಿ ಭವನ ಉದ್ಘಾಟನೆ: ಪಟ್ಟಣದ ಬಾಬು ಜಗಜೀವನ್‌ರಾಂ ಬಡಾವಣೆಯಲ್ಲಿ ನೂತನ ಅಂಗನವಾಡಿ ಕಟ್ಟಡವನ್ನು ಶಾಸಕ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು. ಅಲ್ಲದೇ ಅಂಗನವಾಡಿಯಲ್ಲಿ ಕೇಕ್ ಕತ್ತರಿಸಿ ಮಕ್ಕಳಿಗೆ ತಿನ್ನಿಸುವ ಮೂಲಕ ಶಾಸಕರು ಸಂಭ್ರಮಿಸಿದರು. ಇದಕ್ಕೂ ಮುನ್ನ ಪಟ್ಟಣದ ಮಹಾಕಾಳೇಶ್ವರಿ ದೇವಸ್ಥಾನಕ್ಕೆ ತೆರಳಿದ ಶಾಸಕರು ದೇವಿಗೆ ವೈಯಕ್ತಿಕವಾಗಿ ಬೆಳ್ಳಿಕಿರೀಟ ಧಾರಣೆ ಮಾಡಿಸಿದರು.

ಈ ವೇಳೆ ಎಸಿ ಅಕ್ರಂ, ಪುರಸಭಾಧ್ಯಕ್ಷೆ ಅರ್ಚನ, ಮುಖ್ಯಾಧಿಕಾರಿ ವೀಣಾ, ಸಿಡಿಪಿಓ ನಟರಾಜು, ಮುಖಂಡ ಟೌನ್ ಚಂದ್ರು ಸೇರಿದಂತೆ ಪುರಸಭೆ ಸದಸ್ಯರು ಹಾಜರಿದ್ದರು.

ಇಂದು ದಾಸ್ತಾನು ಮಳಿಗೆ ಕಟ್ಟಡ ಉದ್ಘಾಟನೆ

ಮಂಡ್ಯ, ನ.15– ನಗರದ ಉಪವಿಭಾಗಾಧಿಕಾರಿ ಕಚೇರಿ ಪಕ್ಕದಲ್ಲಿ ನೂತನವಾಗಿ ನಿರ್ಮಾಣವಾಗಿರುವ ವಿದ್ಯುನ್ಮಾನ ಮತಯಂತ್ರಗಳ ದಾಸ್ತಾನು ಮಳಿಗೆಯನ್ನು ನ.16ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರು ಉದ್ಘಾಟಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗ್ರಹಾರಬಾಚಹಳ್ಳಿ: ಸರಣಿಗಳ್ಳತನ

ಕೆ.ಆರ್.ಪೇಟೆ, ನ.15– ತಾಲೂಕಿನ ಅಗ್ರಹಾರಬಾಚಹಳ್ಳಿಯಲ್ಲಿ ಸರಣಿ ಕಳ್ಳತನ ನಡೆದಿದ್ದು, ದುಷ್ಕರ್ಮಿಗಳು ನಗನಾಣ್ಯ ದೋಚಿ ಪರಾರಿಯಾಗಿರುವ ಘಟನೆ ಸೋಮವಾರ ರಾತ್ರಿ ನಡೆದಿದೆ.

ಗ್ರಾಮದ ಮುಜರಾಯಿ ಇಲಾಖೆಗೆ ಸೇರಿದ ಶ್ರೀಚನ್ನಕೇಶವ ದೇವಾಲಯದ ಬೀಗ ಒಡೆದು ಒಳನುಗ್ಗಿರುವ ಕಳ್ಳರು ಹುಂಡಿ ಹಾಗೂ ದೇವರ ಆಭರಣ ದೋಚಿದ್ದಾರೆ. ಬಳಿಕ ಗ್ರಾಮದೇವತೆ ಶ್ರೀಲಕ್ಷ್ಮೀದೇವಮ್ಮನವರ ದೇವಾಲಯದ ಬೀಗ ಮುರಿದು ಒಳನುಗ್ಗಲು ಯತ್ನಿಸಿದ್ದು, ಅಷ್ಟರಲ್ಲಿ ಪಕ್ಕದ ಮನೆಯವರು ಎಚ್ಚರಗೊಂಡು ಕೂಗಿಕೊಂಡಾಗ ಕಳ್ಳರು ಪರಾರಿಯಾಗಿದ್ದಾರೆ.

ಇನ್ನು ಗ್ರಾಮದ ಶಿಕ್ಷಕ ದಿ.ಮಾಟಣ್ಣನ ಸುರೇಶ್ ಅವರ ಮನೆಯಲ್ಲಿ 1 ಲಕ್ಷ ರೂ. ಹಾಗೂ ಚಿನ್ನಾಭರಣ, ಶಿವರಾಜ್ ಅವರ ಮನೆಯಲ್ಲಿ ಚಿನ್ನಾಭರಣ ಹಾಗೂ ನಗದು ದೋಚಿದ್ದಾರೆ. ಪ್ರಥಮ ದರ್ಜೆ ಗುತ್ತಿಗೆದಾರ ಎ.ಪಿ.ಕೇಶವ್ ಅವರ ಮನೆಗೆ ನುಗ್ಗಲು ಯತ್ನಿಸಿದ್ದು, ಮನೆಯವರು ಎಚ್ಚರಗೊಂಡ ಹಿನ್ನೆಲೆಯಲ್ಲಿ ಕಳ್ಳರು ಪರಾರಿಯಾಗಿದ್ದಾರೆ. ಈ ಸಂಬಂಧ ಕೆ.ಆರ್.ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಶ್ವಾನದಳ ಮತ್ತು ಬೆರಳಚ್ಚು ತಜ್ಞರೊಂದಿಗೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಜುವಾರಿ ಡೆವಲಪರ್ಸ್‌ನಿಂದ ಬಂಡಿ ರಸ್ತೆ ಒತ್ತುವರಿ ಆರೋಪ

ತಹಸೀಲ್ದಾರ್ ಆದೇಶದ ಮೇರೆಗೆ ಸರ್ವೆ

ಶ್ರೀರಂಗಪಟ್ಟಣ, ನ.15– ತಾಲೂಕಿನ ಹುಲಿಕೆರೆಯಲ್ಲಿ ಖಾಸಗಿ ಸಂಸ್ಥೆ ಜುವಾರಿ ಡೆವಲಪರ್ಸ್‌ನವರು ಸರ್ಕಾರಿ ಬಂಡಿ ರಸ್ತೆ ಒತ್ತುವರಿ ಮಾಡಿಕೊಂಡು ತಡೆಗೋಡೆ ನಿರ್ಮಿಸಿರುವುದಾಗಿ ಸಾರ್ವಜನಿಕರಿಂದ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಶ್ವೇತಾ ಎನ್.ರವೀಂದ್ರ ಅವರ ಆದೇಶದ ಮೇರೆಗೆ ಸರ್ವೆ ಕಾರ್ಯ ನಡೆಯಿತು.

ಗ್ರಾಮದ ಸರ್ವೆ ನಂ. 105, 106, 10, 11, 104, 123ರ ಮಧ್ಯೆ ಹಾದು ಹೋಗಿರುವ ಸರ್ಕಾರಿ ಬಂಡಿ ರಸ್ತೆಯನ್ನು ಜುವಾರಿ ಡೆವಲಪರ್ಸ್‌ನವರು ಒತ್ತುವರಿ ಮಾಡಿಕೊಂಡು ತಡೆಗೋಡೆ ನಿರ್ಮಿಸಿರುವುದರಿಂದ ಸಾರ್ವಜನಿಕರು ತಿರುಗಾಡಲು ತೊಂದರೆಯಾಗಿದೆ. ಹೀಗಾಗಿ ಒತ್ತುವರಿ ತೆರವುಗೊಳಿಸುವಂತೆ ಗ್ರಾಮಸ್ಥರು ತಹಸೀಲ್ದಾರ್‌ಗೆ ದೂರು ನೀಡಿದ್ದರು.


ಈ ಹಿನ್ನೆಲೆಯಲ್ಲಿ ಬೆಳಗೊಳ ಹೋಬಳಿ ರಾಜಸ್ವ ನಿರೀಕ್ಷಕರು ಮತ್ತು ತಾಲೂಕು ಭೂ ಮಾಪಕರು ಜಂಟಿ ಸರ್ವೆ ನಡೆಸಿ ಒಂದು ವೇಳೆ ಒತ್ತುವರಿಯಾಗಿದ್ದರೆ 10 ದಿನದೊಳಗಾಗಿ ಒತ್ತುವರಿ ತೆರವುಗೊಳಿಸಿ, ಸ್ಥಳದ ಮಹಜರ್, ಸ್ಕೆಚ್ ಮತ್ತು ಜಿಪಿಆರ್‌ಎಸ್ ಭಾವಚಿತ್ರ ಸಹಿತ ವರದಿ ಸಲ್ಲಿಸುವಂತೆ ತಹಸೀಲ್ದಾರ್ ಶ್ವೇತಾ ಎನ್.ರವೀಂದ್ರ ಆದೇಶ ಹೊರಡಿಸಿದ್ದರು. ಹೀಗಾಗಿ ಸರ್ವೆಯರ್ ಬಸವರಾಜು, ಗ್ರಾಮ ಲೆಕ್ಕಿಗ ರಮೇಶ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಸರ್ವೆ ಕಾರ್ಯ ನಡೆಸಿದರು.

ತಾಲೂಕು ಸರ್ವೆಯರ್ ಬಸವರಾಜು ಪ್ರತಿಕ್ರಿಯಿಸಿ, ಜುವಾರಿ ಡೆವಲಪರ್ಸ್ ಖಾಸಗಿ ಸಂಸ್ಥೆ ಕೆಆರ್‌ಎಸ್ ರಸ್ತೆಯಿಂದ ಹೊಂಗಹಳ್ಳಿಗೆ ಸಂಪರ್ಕ ಕಲ್ಪಿಸುವ ಸರ್ಕಾರಿ ಬಂಡಿ ರಸ್ತೆ ಒತ್ತುವರಿ ಮಾಡಿಕೊಂಡಿರುವುದಲ್ಲದೇ ಎರಡೂ ಬದಿಗಳಲ್ಲಿ ತಡೆಗೋಡೆ ನಿರ್ಮಿಸಿ ಕಾನೂನು ಉಲ್ಲಂಘಿಸಿರುವುದು ಕಂಡು ಬಂದಿದೆ. ರಸ್ತೆ ಮಧ್ಯ ಗಿಡಗಳನ್ನು ನೆಟ್ಟು, ಉದ್ಯಾನವನ ಮಾಡಿಕೊಂಡಿದ್ದಾರೆ.



ಕೆಲವೆಡೆ ರಸ್ತೆ ಬಿಟ್ಟಿದ್ದು, ಜುವಾರಿ ಡೆವಲಪರ್ಸ್ ವಿಲ್ಲಾ ಮಾಲೀಕರು ಮಾತ್ರ ಓಡಾಡಲು ರಸ್ತೆಯ ಎರಡೂ ಬದಿಗಳಲ್ಲಿ ಬೃಹದಾಕಾರದ ತಡೆಗೋಡೆ ನಿರ್ಮಿಸಿಕೊಂಡು ಸಾರ್ವಜನಿಕರು ಈ ರಸ್ತೆಯಲ್ಲಿ ಓಡಾಡದಂತೆ ಅತಿಕ್ರಮಣ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಸಂಬಂಧ ಮೇಲಧಿಕಾರಿಗಳಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದರು. ಈ ವೇಳೆ ಸದಸ್ಯರಾದ ಮಜ್ಜಿಗೆಪುರ ಮಂಜುನಾಥ್, ಕರಿಗೌಡ, ಗ್ರಾಮಸ್ಥರಾದ ರಾಜಣ್ಣ ಇತರರಿದ್ದರು.

ದ್ಯಾವಪ್ಪಣ್ಣ ನಿಧನ



ಕೆ.ಆರ್.ಪೇಟೆ, ನ.15– ತಾಲೂಕಿನ ಬೊಮ್ಮನಾಯಕನಹಳ್ಳಿ ಗ್ರಾಮದ ಹಿರಿಯ ಮುಖಂಡ ಭೈರೇಗೌಡರ ಪುತ್ರ ಜಮೀನ್ದಾರ್ ದ್ಯಾವಪ್ಪಣ್ಣ ಉ.ದೇವೇಗೌಡ(85) ಮಂಗಳವಾರ ನಿಧನರಾದರು. ಮೃತರು ಟಿಎಪಿಸಿಎಂಎಸ್ ಉದ್ಯೋಗಿ ಅನಂತು ಸೇರಿದಂತೆ ಮೂವರು ಪುತ್ರರು, ಮೂವರು ಪುತ್ರಿಯರು, ಮೂವರು ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾರ್ವಜನಿಕ ಜೀವನದಲ್ಲಿರುವವರು ಸ್ವಯಂ ನಿರ್ಬಂಧ ವಿಧಿಸಿಕೊಳ್ಳಬೇಕು

ನವದೆಹಲಿ: ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕ ಜೀವನದಲ್ಲಿರುವ ಪ್ರಮುಖ ವ್ಯಕ್ತಿಗಳು ಸ್ವಯಂ ನಿರ್ಬಂಧ ವಿಧಿಸಿಕೊಳ್ಳುವುದು ಅಲಿಖಿತ ನಿಯಮವಾಗಿದೆ. ದೇಶದ ಜನರನ್ನು ಅವಮಾನಿಸುವ ಮತ್ತು ಅವಹೇಳನ ಮಾಡುವ ವಿಷಯಗಳ ಬಗ್ಗೆ ನಾಲಿಗೆ ಹರಿ ಬಿಡಬಾರದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಎಚ್ಚರಿಕೆ ನೀಡಿದೆ.

ಅಂತರ್ಗತ ಸಾಂವಿಧಾನಿಕ ನಿರ್ಬಂಧದ ಅಸ್ತಿತ್ವವನ್ನು ಒತ್ತಿಹೇಳಿದ ನ್ಯಾಯಮೂರ್ತಿಗಳಾದ ಎಸ್ ಅಬ್ದುಲ್ ನಜೀರ್, ಬಿಆರ್ ಗವಾಯಿ, ಎಎಸ್ ಬೋಪಣ್ಣ, ವಿ ರಾಮಸುಬ್ರಮಣಿಯನ್ ಮತ್ತು ಬಿವಿ ನಾಗರತ್ನ ಅವರನ್ನೊಳಗೊಂಡ ಸಾಂವಿಧಾನಿಕ ಪೀಠ, ಅವಹೇಳನಕಾರಿ ಹೇಳಿಕೆಗಳಿಂದ ದೂರವಿರುವ ಅಭ್ಯಾಸವನ್ನು ನಮ್ಮ ಜನಪ್ರತಿನಿಧಿಗಳು ಮತ್ತು ನಮ್ಮ ನಾಗರಿಕರು ರೂಢಿಸಿಕೊಳ್ಳಬೇಕು ಎಂದಿದೆ.



ಜನಪ್ರತಿನಿಧಿಗಳಿಗೆ ನಾವು ಹೇಗೆ ತಾನೇ ನೀತಿ ಸಂಹಿತೆ ರೂಪಿಸಲು ಸಾಧ್ಯ ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರ ವ್ಯಾಪ್ತಿ ಕುರಿತಂತೆ ನಾವು ಹಸ್ತಕ್ಷೇಪ ಮಾಡಿದಂತಾಗುವುದಿಲ್ಲವೇ ಎಂದು ನ್ಯಾಯಮೂರ್ತಿ ಗವಾಯಿ ವಿಚಾರಣೆ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು. ಸಾರ್ವಜನಿಕ ಸೇವಕರಾಗಿರುವ ಯಾವುದೇ ವ್ಯಕ್ತಿಗೆ ಅಲಿಖಿತ ನಿಯಮವಿದೆ ಮತ್ತು ನಾವು ಜವಾಬ್ದಾರಿಗಳ ಹೊಂದಿರುವಾಗ ಸ್ವಯಂ ನಿರ್ಬಂಧವನ್ನು ವಿಧಿಸಿಕೊಳ್ಳಬೇಕು. ಇತರರನ್ನು ಅವಮಾನಿಸುವ ಅಥವಾ ಅವಹೇಳನ ಮಾಡುವ ವಿಷಯಗಳ ಬಗ್ಗೆ ಜನಪ್ರತಿನಿಧಿಗಳು ಮಾತನಾಡಬಾರದು ಎಂದು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಹೇಳಿದರು. ಈ ವೇಳೆ ಸಂವಿಧಾನದ ತತ್ವಗಳ ಅನುಸಾರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿ ದಂತೆ ಯಾವುದೇ ಸೇರ್ಪಡೆ ಅಥವಾ ನಿಬಂಧನೆಗಳ ಪರಿಷ್ಕರಣೆ ಕುರಿತ ಪ್ರಸ್ತಾಪ ಸಂಸತ್ತಿನಿಂದಲೇ ಬರಬೇಕಾಗಿದೆ ಎಂದು ಅಟಾರ್ನಿ ಜನರಲ್ ಅವರು ಪೀಠದ ಗಮನಕ್ಕೆ ತಂದರು. ಸೂಕ್ಷ್ಮ ವಿಷಯಗಳ ಕುರಿತು ನಿಲುವು ವ್ಯಕ್ತಪಡಿಸುವ ಜನಪ್ರತಿನಿಧಿಗಳು ಅಥವಾ ಸಾರ್ವಜನಿಕ ಜೀವನದಲ್ಲಿರುವ ಪ್ರಮುಖರು ಅಭಿವ್ಯಕ್ತಿ ಸ್ವಾತಂತ್ರ್ಯ ಹಕ್ಕಿನ ರಕ್ಷಣೆ ಪಡೆಯಬಹುದೇ ಎಂಬ ಕುರಿತ ವಿಷಯವನ್ನು ತ್ರಿಸದಸ್ಯರ ಪೀಠವು ಅ.5, 2017ರಂದು ಸಂವಿಧಾನಿಕ ಪೀಠಕ್ಕೆ ವರ್ಗಾಯಿಸಿತ್ತು.

ಇಂದಿನಿಂದ ಎರಡು ದಿನ ಮೈಸೂರಲ್ಲಿ ಹಿರಿಯ ನಾಗರಿಕರ ರಾಷ್ಟ್ರೀಯ ಸಮ್ಮೇಳನ



ಮೈಸೂರು, ನ.15(ಪಿಎಂ)– ಅಖಿಲ ಭಾರತ ಹಿರಿಯ ನಾಗರಿಕರ ಒಕ್ಕೂಟದ 20ನೇ ರಾಷ್ಟ್ರೀಯ ಸಮ್ಮೇಳನ' ನ.16 ಮತ್ತು 17ರಂದು ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿದೆ ಎಂದು ಒಕ್ಕೂಟದ ಮೈಸೂರು ಘಟಕದ ಅಧ್ಯಕ್ಷ ಡಿ.ರವೀಂದ್ರನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನ.16ರಂದು ಬೆಳಗ್ಗೆ 10ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಒಕ್ಕೂಟದ ಅಧ್ಯಕ್ಷ ಪ್ರಿನ್ಸಿಪಾಲ್ ವಿಶ್ವಾಸರಾವ್ ಭದನೆ ಅಧ್ಯಕ್ಷತೆ ವಹಿಸಲಿದ್ದಾರೆ. ವೈದ್ಯ ಡಾ.ರವಿಪಾಟೀಲ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಆರ್.ಮಾಲಿನಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ದೇಶ ವಿವಿಧ ಭಾಗಗಳ ಒಂದೂವರೆ ಸಾವಿರ ಮಂದಿ ಒಕ್ಕೂಟದ ಸದಸ್ಯರು ಇದರಲ್ಲಿ ಪಾಲ್ಗೊಳ್ಳಲು ತಲಾ 2 ಸಾವಿರ ಪಾವತಿಸಿ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

ಹಿರಿಯ ನಾಗರಿಕರಿಗೆ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳು ಹಾಗೂ ಕುಂದು ಕೊರತೆಗಳ ಮೇಲೆ ಸಮ್ಮೇಳನ ಬೆಳಕು ಚೆಲ್ಲಲಿದೆ. ಬೆಳಗ್ಗೆ–ಮಧ್ಯಾಹ್ನ ವಿಚಾರ ಗೋಷ್ಠಿಗಳು ನಡೆಯಲಿದ್ದು, ಸಂಜೆ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ ಎಂದರು. ಒಕ್ಕೂಟದ ಮೈಸೂರು ಘಟಕದ ಉಪಾಧ್ಯಕ್ಷರಾದ ಬಿ.ಆರ್.ಉಮಾಕಾಂತ್, ಹೆಚ್.ಎಸ್.ಲಕ್ಷ್ಮೀಗೌಡ, ಸದಸ್ಯ ಡಾ.ಪಿ.ನಿರ್ಮಲ ಮತ್ತಿತರರು ಗೋಷ್ಠಿಯಲ್ಲಿದ್ದರು.

ಒಂದನೇ ಪುಟದಿಂದ

ದಾಂಡೇಲಿ ಅಭಯಾರಣ್ಯಕ್ಕೆ ಸಾಗಾಣೆ

ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಇದರೊಂದಿಗೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಮೈಸೂರು ಮೃಗಾಲಯದಲ್ಲಿ ಹೆಚ್ಚುವರಿಯಾಗಿರುವ ಸಸ್ಯಹಾರಿ ಪ್ರಾಣಿಗಳನ್ನು ಅರಣ್ಯ ಹಾಗೂ ವನ್ಯಧಾಮಗಳಲ್ಲಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಸಾಫ್ಟ್ ರಿಲೀಸ್ ಮೆಥೆಡ್: ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಮೃಗಾಲಯಗಳಿಂದ ಜಿಂಕೆ ಹಾಗೂ ಸಾರಂಗ ಪ್ರಾಣಿಗಳನ್ನು ಅರಣ್ಯ ಪ್ರದೇಶ ಅಥವಾ ವನ್ಯಧಾಮಗಳಿಗೆ ಕೊಂಡೊಯ್ದು ಬಿಡುವುದು ಸಾಮಾನ್ಯ ಪ್ರಕ್ರಿಯೆ. ಈ ಹಿಂದೆಯೂ ಮೈಸೂರು ಮೃಗಾಲಯದಿಂದ 100ಕ್ಕೂ ಹೆಚ್ಚು ಜಿಂಕೆಗಳನ್ನು ಅರಬ್ಬಿತಿಟ್ಟು ವನ್ಯಧಾಮಕ್ಕೆ ಕೊಂಡೊಯ್ದು ಬಿಡಲಾಗಿತ್ತು. ಹಂಪಿ ಮೃಗಾಲಯದಿಂದಲೂ 50ಕ್ಕೂ ಹೆಚ್ಚು ಜಿಂಕೆಗಳನ್ನು ಚಿತ್ರದುರ್ಗದ ಮಾರಿ ಕಣಿವೆಗೆ ಕೊಂಡೊಯ್ದು ಬಿಡಲಾಗಿದೆ. ಅದೇ ಮಾದರಿಯಲ್ಲಿ ಈಗ ಮೈಸೂರು ಮೃಗಾಲಯದಿಂದ ಹೆಚ್ಚುವರಿಯಾಗಿರುವ ಜಿಂಕೆ ಹಾಗೂ ಸಾರಂಗವನ್ನು ಕೊಂಡೊಯ್ದು ದಾಂಡೇಲಿ ಅಭಯಾರಣ್ಯಕ್ಕೆ ಕೊಂಡೊಯ್ದು ಪುನರ್ವಸತಿ ಕಲ್ಪಿಸಲಾಗುತ್ತಿದೆ ಎಂದರು. ಪ್ರಾಣಿಗಳನ್ನು ಮೃಗಾಲಯದಿಂದ ಕೊಂಡೊಯ್ದು ಬಿಡಲು ಸಾಫ್ಟ್ ರಿಲೀಸ್ ಹಾಗೂ ಹಾರ್ಡ್ ರಿಲೀಸ್ ಎಂಬ ಎರಡು ವಿಧಾನವಿದ್ದು, ಅವುಗಳಲ್ಲಿ ಈ ಹಿಂದೆ ಹಾರ್ಡ್ ರಿಲೀಸ್ ವಿಧಾನ ಅನುಸರಿಸಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಸಾಫ್ಟ್ ರಿಲೀಸ್ ವಿಧಾನ ಅನುಸರಿಸಲಾಗುತ್ತಿದೆ. ಈ ವಿಧಾನದಲ್ಲಿ ಅರಣ್ಯ ಪ್ರದೇಶಕ್ಕೆ ಬಿಡಲು ಗುರುತಿಸಲ್ಪಟ್ಟ ಪ್ರಾಣಿಗಳು ಸರಾಗವಾಗಿ ಬೋನ್ ಒಳಗೆ ಹೋಗುವ ತರಬೇತಿ ನೀಡಲು ಎರಡು ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಬೋನ್‌ನಲ್ಲಿ ಆಹಾರ, ಕುಡಿಯಲು ನೀರನ್ನು ಇಟ್ಟು ಪ್ರಾಣಿಗಳನ್ನು ಒಗ್ಗಿಸಿಕೊಳ್ಳಲಾಗುತ್ತದೆ. ಈ ವಿಧಾನದಿಂದ ಪ್ರಾಣಿಗಳಿಗೆ ಯಾವುದೇ ಒತ್ತಡವಾಗುವುದಿಲ್ಲ. ಬಿಡುಗಡೆ ಮಾಡುವ ಸ್ಥಳದಲ್ಲೂ ಏಕಾಏಕಿ ಅರಣ್ಯ ಪ್ರದೇಶಕ್ಕೆ ಬಿಡದೆ, ಒಂದು ಭಾಗದಲ್ಲಿ ಕುಡಿಯುವ ನೀರು, ಆಹಾರ ಸಿಗುವ ಸ್ಥಳ ಗುರುತಿಸಿ ಬಿಡಲಾಗುತ್ತದೆ. ಹಂತ ಹಂತವಾಗಿ ಅವುಗಳು ಅರಣ್ಯ ಪ್ರದೇಶದ ಪರಿಚಯವಾಗಿ ಸ್ವಚ್ಛಂದವಾಗಿ ವಿಹರಿಸಲು ಇದು ನೆರವಾಗುತ್ತದೆ ಎಂದು ತಿಳಿಸಿದರು.

ಪರಿಸ್ಥಿತಿ ಸುಧಾರಿಸಿದೆ: 2019ರಲ್ಲಿ ಅರಬ್ಬಿತಿಟ್ಟು ವನ್ಯಧಾಮಕ್ಕೆ ಮೃಗಾಲಯದಿಂದ ಜಿಂಕೆಗಳನ್ನು ಬಿಡಲಾಗಿತ್ತು. ಈಗ ಅಲ್ಲಿ ಪರಿಸ್ಥಿತಿ ಸುಧಾರಿಸಿದೆ. ಜಿಂಕೆಗಳ ಸಂಖ್ಯೆಯೂ ಹೆಚ್ಚಾಗಿದೆ. ಇದರಿಂದಾಗಿ ಅರಬ್ಬಿತಿಟ್ಟಲ್ಲಿ ಚಿರತೆ ಹಾಗೂ ಕಾಡುನಾಯಿ(ಸೀಳುನಾಯಿ)ಗಳ ಸಂಖ್ಯೆ ಹೆಚ್ಚಾಗಿದೆ. ನಾವು ಕೇವಲ ಹುಲಿಗಳ ಸಂರಕ್ಷಣೆಗೆ ಹೆಚ್ಚು ಗಮನ ನೀಡುತ್ತಿದ್ದೇವೆ. ಆದರೆ ಸಸ್ಯಹಾರಿ ಪ್ರಾಣಿಗಳ ಸಂಖ್ಯೆ ಹೆಚ್ಚಾದರೆ, ತಾನಾಗಿಯೇ ಮಾಂಸಹಾರಿ ಪ್ರಾಣಿಗಳ ಸಂಖ್ಯೆ ಹೆಚ್ಚಾಗುತ್ತದೆ. ಅರಬ್ಬಿತಿಟ್ಟು ವನ್ಯಧಾಮದಲ್ಲಿ ವನ್ಯಜೀವಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಒಳ್ಳೆ ಬೆಳವಣಿಗೆ ಎಂದು ಅಭಿಪ್ರಾಯಪಟ್ಟರು.

ಸುರಕ್ಷಿತವಾಗಿ ರವಾನೆ: ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸಭೆಯಲ್ಲಿ ದಾಂಡೇಲಿ ಅರಣ್ಯಕ್ಕೆ ಜಿಂಕೆ ಹಾಗೂ ಸಾರಂಗವನ್ನು ಬಿಡುವ ಸಂಬಂಧ ಪ್ರಸ್ತಾಪವಾಯಿತು. ಅದಕ್ಕೆ ಅನುಮೋದನೆ ನೀಡಿದ ಬಳಿಕ ಮೊದಲ ಹಂತದಲ್ಲಿ 3 ಹೆಣ್ಣು ಹಾಗೂ ಒಂದು ಗಂಡು ಸಾರಂಗ(ಸಾಂಬರ್)ವನ್ನು ಸುರಕ್ಷಿತವಾಗಿ ದಾಂಡೇಲಿ ಅರಣ್ಯಕ್ಕೆ ಬಿಡಲಾಗಿದೆ. ಮತ್ತೆ ಹಲವು ಜಿಂಕೆಗಳ ಬಿಡಲು ನಿರ್ಧರಿಸಲಾಗಿದ್ದು, ಈಗಾಗಲೇ ಬೋನ್‌ವೊಂದನ್ನು ಜಿಂಕೆ ಮನೆ ಬಳಿ ಇಡಲಾಗಿದೆ. ಇದರ ಪರಿಚಯವಾದ ನಂತರ ಅವುಗಳನ್ನು ಇದರಲ್ಲಿ ಇರಿಸಿ, ದಾಂಡೇಲಿಗೆ ಸಾಗಿಸಲಾಗುತ್ತದೆ. ಸುರಕ್ಷತೆಗೆ ಆದ್ಯತೆ ನೀಡಲಾಗಿದ್ದು, ನಮ್ಮ ಮೃಗಾಲಯದ ಅವಶ್ಯಕತೆಗೆ ಅನುಗುಣವಾಗಿ ಪ್ರಾಣಿಗಳನ್ನು ಉಳಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರಾಣಿಗಳನ್ನು ಬೇರೆಡೆ ಸಾಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಶ್ರದ್ಧಾ ದೇಹದ ಭಾಗಗಳು ಫ್ರಿಡ್ಜ್‌ನಲ್ಲಿರುವಾಗಲೇ ಹೊಸ ಗೆಳತಿಯನ್ನು ಮನೆಗೆ ಕರೆತಂದಿದ್ದ ಪಾತಕ ಪ್ರೇಮಿ

ನವದೆಹಲಿ: ಕೊಲೆಗಾರ ಅಫ್ತಾಬ್ ಅಮಿನ್ ಪೂನವಾಲಾ ಪ್ರೇಯಸಿ ಶ್ರದ್ಧಾಳನ್ನು ಕೊಲೆಗೈದು, ದೇಹದ ತುಂಡುಗಳನ್ನು ಕತ್ತರಿಸಿ ಮನೆಯ ಫ್ರಿಡ್ಜ್‌ನಲ್ಲಿ ಇಟ್ಟಿರುವಾಗಲೇ ಮತ್ತೊಬ್ಬ ಮಹಿಳೆಯನ್ನು ಮನೆಗೆ ಕರೆತಂದಿದ್ದ ಎಂಬ ಸತ್ಯ ವಿಚಾರಣೆ ವೇಳೆ ಬೆಳಕಿಗೆ ಬಂದಿದೆ ಎಂದು ವರದಿಯಾಗಿದೆ.



ಶ್ರದ್ಧಾ ಕೊಲೆಯ ಬಳಿಯ ಅಫ್ತಾಬ್ ಬಂಬ್ಲ್ ಎಂಬ ಡೇಟಿಂಗ್ ಆಪ್ ಡೌನ್‌ಲೋಡ್ ಮಾಡಿಕೊಂಡು ಮತ್ತೊಂದು ಮಹಿಳೆಯ ಸಂಪರ್ಕ ಸಾಧಿಸಿದ್ದ. ಶ್ರದ್ಧಾ ದೇಹದ ಕತ್ತರಿಸಿ ತುಂಡಾಗಿಸಿ, ಅದನ್ನು ದಕ್ಷಿಣ ದೆಹಲಿಯ ಮೆಹ್ರೌಲಿಯ ಅಪಾರ್ಟ್‌ಮೆಂಟ್‌ನ ಫ್ರಿಡ್ಜ್‌ನಲ್ಲಿ ಇಟ್ಟಿರುವಾಗಲೇ ಹೊಸ ಗೆಳತಿಯನ್ನು ಮನೆಗೆ ಕರೆತಂದಿದ್ದ. ಶ್ರದ್ಧಾಳನ್ನು ಕೂಡ ಈತ 2019ರಲ್ಲಿ ಇದೇ ಆಪ್‌ನಲ್ಲಿ ಭೇಟಿಯಾಗಿದ್ದ ಎಂದು ವರದಿ ಹೇಳಿದೆ.

ಹೊಸ ಗೆಳತಿ ಜೂನ್ ಮತ್ತು ಜುಲೈನಲ್ಲಿ ಕೆಲವು ಸಲ ಅಫ್ತಾಬ್ ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿದ್ದಾಳೆ. ಅಡುಗೆ ಕೋಣೆಯ ಫ್ರಿಡ್ಜ್‌ನಲ್ಲಿ ಶ್ರದ್ಧಾ ದೇಹದ ಭಾಗಗಳಿರುವಾಗಲೇ ಈತ ಹೊಸ ಗೆಳತಿಗೆ ಮನೆಯಲ್ಲೇ ಆತಿಥ್ಯ ನೀಡಿದ್ದಾನೆ. ಶ್ರದ್ಧಾ ಕೊಲೆಯ ನಂತರ ಆಕೆಯ ಕ್ರೆಡಿಟ್ ಕಾರ್ಡ್‌ಗಳ ಬಿಲ್‌ಗಳನ್ನು ಈತ ಪಾವತಿಸಿದ್ದ. ಆಕೆಯ ಸಾಮಾಜಿಕ ಜಾಲತಾಣದ ಪುಟಗಳಿಗೆ ಲಾಗಿನ್ ಆಗಿ ಮೆಸೇಜ್‌ಗಳಿಗೆ ಉತ್ತರಿಸಿದ್ದ. ಪೋಸ್ಟ್‌ಗಳನ್ನು ಮಾಡಿದ್ದ. ಆಕೆ ಬದುಕಿದ್ದಾಳೆ ಎಂದು ಬಿಂಬಿಸಲು ಆಕೆಯ ಸ್ನೇಹಿತರಿಗೆ ಆಕೆಯ ಖಾತೆಯಿಂದ ಸಂದೇಶಗಳನ್ನು ಕೂಡ ಕಳುಹಿಸಿದ್ದ ಎಂದು ವಿಚಾರಣೆಯಿಂದ ತಿಳಿದುಬಂದಿದೆ.

ಮುಂಬೈನಲ್ಲಿ ಇರುವಾಗಲೇ ಇಬ್ಬರ ನಡುವೆ ಸಾಕಷ್ಟು ಜಗಳ ನಡೆಯುತ್ತಿತ್ತು. ಸಂಬಂಧದ ಕುರಿತು ಅನುಮಾನಗೊಂಡಿದ್ದ ಇಬ್ಬರೂ ಫೋನ್ ಜಿಪಿಎಸ್ ಮತ್ತು ಫೋಟೊಗಳನ್ನು ಟ್ರೇಸ್ ಮಾಡುತ್ತಿದ್ದರು. ಸಂಬಂಧ ಸುಧಾರಣೆಗಾಗಿ ಏಪ್ರಿಲ್‌ನಲ್ಲಿ ಹಿಮಾಚಲ ಪ್ರದೇಶ ಪ್ರವಾಸ ಯೋಜಿಸಿದ್ದರು. ಅದಾದ ಬಳಿಕ ದೆಹಲಿಗೆ ಸ್ಥಳಾಂತರಗೊಂಡಿದ್ದರು.

ಮೇ.15ರಂದು ದೆಹಲಿಗೆ ಸ್ಥಳಾಂತರಗೊಂಡ 3 ದಿನಗಳ ನಂತರ ಮತ್ತೆ ಜಗಳವಾಗಿದ್ದು, ಶ್ರದ್ಧಾಳನ್ನು ಕೊಲೆಗೈದಿದ್ದಾನೆ. ಅಫ್ತಾಬ್ ಅಮೆರಿಕದ ಕ್ರೈಂ ಸರಣಿ 'ಡೆಕ್ಸ್‌ಟರ್'ನಿಂದ ಸ್ಫೂರ್ತಿ ಪಡೆದಿದ್ದ. ಕೊಲೆಗಾಗಿ ಸಾಕಷ್ಟು ಸಂಶೋಧನೆ ಮಾಡಿದ್ದ. ಮನುಷ್ಯನ ದೇಹ ರಚನಾ ಶಾಸ್ತ್ರ ಅಧ್ಯಯನ ಮಾಡಿದ್ದ.

ರಕ್ತದ ಕಲೆ ಕಾಣಿಸದಂತೆ ಮಾಡುವ ಮಾರ್ಗಗಳ ಕುರಿತು ಗೂಗಲ್‌ನಲ್ಲಿ ಹುಡುಕಾಟ ನಡೆಸಿದ್ದ ಎಂದು ವರದಿಯಾಗಿದೆ. ಆತ ಬಳಸಿದ್ದ ಚಾಕುವಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಖಾತೆ ಬದಲಾವಣೆಗೆ 5 ಲಕ್ಷ ಲಂಚ: ಕೆಎಎಸ್ ಅಧಿಕಾರಿ ವರ್ಷಾ ಒಡೆಯರ್ ಬಂಧನ

ಬೆಂಗಳೂರು, ನ.15– ಜಮೀನಿನ ಖಾತೆ ಬದಲಾವಣೆಗೆ 5 ಲಕ್ಷ ಲಂಚ ಪಡೆಯುತ್ತಿದ್ದ



ಕೆಎಎಸ್ ಅಧಿಕಾರಿ, ಬೆಂಗಳೂರು ಉತ್ತರ (ಯಲಹಂಕ) ತಾಲೂಕಿನ ವಿಶೇಷ ತಹಶೀಲ್ದಾರ್ ವರ್ಷಾ ಒಡೆಯರ್ ಹಾಗೂ ಮಧ್ಯವರ್ತಿ ರಮೇಶ್ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಸಂಜೆ ಬಂಧಿಸಿದ್ದಾರೆ.

ಬೆಂಗಳೂರು ಉತ್ತರ ತಾಲೂಕಿನ ದಾಸನಪುರ ಹೋಬಳಿ ವ್ಯಾಪ್ತಿಯ ಕೆಂಗನಹಳ್ಳಿ ಗ್ರಾಮದಲ್ಲಿ ತಾವು ಹೊಂದಿರುವ ಜಮೀನಿನ ಖಾತೆ ಬದಲಾವಣೆ ಕೋರಿ ಕಾಂತರಾಜು ಎಂಬುವವರು ಅರ್ಜಿ ಸಲ್ಲಿಸಿದ್ದರು. ಖಾತೆ ಬದಲಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು 10 ಲಕ್ಷ ರೂ. ಲಂಚ ನೀಡುವಂತೆ ವಿಶೇಷ ತಹಶೀಲ್ದಾರ್ ಮಧ್ಯವರ್ತಿ ಮೂಲಕ ಅರ್ಜಿದಾರರಿಗೆ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು.

ಆರೋಪಿಗಳ ಸೂಚನೆಯಂತೆ ಕಾಂತರಾಜು ಅವರು ಮಂಗಳವಾರ ಸಂಜೆ 5 ಗಂಟೆ ಸುಮಾರಿಗೆ ಬೆಂಗಳೂರು ಉತ್ತರ ತಹಶೀಲ್ದಾರ್ ಕಚೇರಿಯಲ್ಲಿ ಆರೋಪಿಗಳನ್ನು ಭೇಟಿಮಾಡಿದರು. 5 ಲಕ್ಷ ರೂ. ಲಂಚದ ಹಣವನ್ನು ಮಧ್ಯವರ್ತಿ ರಮೇಶ್ ಕೈಗೆ ನೀಡುವಂತೆ ವರ್ಷಾ ಸೂಚಿಸಿದರು. ಅದರಂತೆ ಕಾಂತರಾಜು ಹಣವನ್ನು ನೀಡಿದರು. ತಕ್ಷಣ ದಾಳಿ ಮಾಡಿದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ವಿಶೇಷ ತಹಶೀಲ್ದಾರ್ ಮತ್ತು ಮಧ್ಯವರ್ತಿ ಇಬ್ಬರನ್ನೂ ಬಂಧಿಸಿದರು ಎಂದು ಲೋಕಾಯುಕ್ತದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸೋಬಾನೆ ಮಂಚಮ್ಮ ನಿಧನ



ಮೈಸೂರು, ನ.15– ಹಿರಿಯ ಜಾನಪದ ಕಲಾವಿದ ಮಳವಳ್ಳಿ ಎಂ.ಮಹದೇವಸ್ವಾಮಿ ಅವರ ತಾಯಿ ಸೋಬಾನೆ ಮಂಚಮ್ಮ(85) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಮೃತರು ಐವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ನ.16) ಬೆಳಗ್ಗೆ 11 ಗಂಟೆಗೆ ಮಳವಳ್ಳಿಯ ಕೃಷ್ಣಾಪುರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಕ್ರಮ ಹಣ ವರ್ಗಾವಣೆ ಪ್ರಕರಣ

ನಟಿ ಜಾಕ್ವಲೀನ್ ಫರ್ನಾಂಡೀಸ್‌ಗೆ ದೆಹಲಿ ಕೋರ್ಟ್‌ನಿಂದ ಜಾಮೀನು

ನವದೆಹಲಿ: ಬಾಲಿವುಡ್ ನಟಿ ಜಾಕ್ವಲೀನ್ ಫರ್ನಾಂಡೀಸ್‌ಗೆ ದೆಹಲಿ ಕೋರ್ಟ್ 200 ಕೋಟಿ ರೂಪಾಯಿ ಮೊತ್ತದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಮಂಜೂರು ಮಾಡಿದೆ.



ಈ ಪ್ರಕರಣದಲ್ಲಿ ವಂಚಕ ಸುಕೇಶ್ ಚಂದ್ರಶೇಖರ್ ಸಹ ಭಾಗಿಯಾಗಿದ್ದಾನೆ. ನ.11 ರಂದು ಜಾರಿ ನಿರ್ದೇಶನಾಲಯ ಕೋರ್ಟ್‌ನಲ್ಲಿ ವಾದ ಮಂಡಿಸಿ ಜಾಕ್ವಲೀನ್ ಫರ್ನಾಂಡೀಸ್ ದೇಶ ಬಿಟ್ಟು ಹೋಗುವ ಸಾಧ್ಯತೆ ಇದೆ ಎಂದು ಹೇಳಿತ್ತು.

ಇದಕ್ಕೆ ಪ್ರತಿಯಾಗಿ, ಎಲ್‌ಒಸಿಯನ್ನು ನೀಡಿದ ಹೊರತಾಗಿಯೂ ತನಿಖೆ ವೇಳೆ ಜಾರಿ ನಿರ್ದೇಶನಾಲಯ ಏಕೆ ಜಾಕ್ವಲೀನ್ ಫರ್ನಾಂಡೀಸ್ ಅವರನ್ನು ಬಂಧಿಸಿಲ್ಲ ಎಂದು ಕೋರ್ಟ್ ಪ್ರಶ್ನಿಸಿತ್ತು. ಬೇರೆ ಆರೋಪಿಗಳು ಜೈಲಿನಲ್ಲಿದ್ದಾರೆ. ಯಾಕೆ ಆಯ್ಕೆ ಮಾಡಿಕೊಳ್ಳುವ ನೀತಿ ಅನುಸರಿಸುತ್ತಿದ್ದೀರ ಎಂದು ಕೋರ್ಟ್ ತನಿಖಾ ಸಂಸ್ಥೆಯನ್ನು ಪ್ರಶ್ನಿಸಿದೆ.

ತನಿಖೆ ಪೂರ್ಣಗೊಂಡಿದ್ದು, ಆರೋಪ ಪಟ್ಟಿ ದಾಖಲಾಗಿರುವ ಹಿನ್ನೆಲೆಯಲ್ಲಿ ತಮ್ಮನ್ನು ಕಸ್ಟಡಿಗೆ ಪಡೆಯುವ ಅಗತ್ಯವಿಲ್ಲ ಎಂಬ ಆಧಾರದಲ್ಲಿ ಜಾಮೀನು ನೀಡುವುದಕ್ಕೆ ಆರೋಪಿ ಮನವಿ ಮಾಡಿದ್ದರು. ಸೆ.26 ರಂದು ಕೋರ್ಟ್ ಜಾಕ್ವಲೀನ್ ಫರ್ನಾಂಡೀಸ್‌ಗೆ 50,000 ರೂಪಾಯಿ ಮೌಲ್ಯದ ವೈಯಕ್ತಿಕ ಬಾಂಡ್ ನೀಡಲು ಸೂಚಿಸಿ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು.

ಜಾರಿ ನಿರ್ದೇಶನಾಲಯ ಸಲ್ಲಿಸಿದ್ದ ಪೂರಕ ಚಾರ್ಜ್ ಶೀಟ್ ನ್ನು ಪರಿಗಣಿಸಿದ್ದ ಕೋರ್ಟ್, ಜಾಕ್ವಲೀನ್ ಫರ್ನಾಂಡೀಸ್ ಅವರನ್ನು ಕೋರ್ಟ್ ಎದುರು ಹಾಜರಾಗುವಂತೆ ಸೂಚಿಸಿತ್ತು. ಜಾರಿ ನಿರ್ದೇಶನಾಲಯದಿಂದ ಹಲವು ಬಾರಿ ತನಿಖೆಗೆ ಹಾಜರಾಗಲು ಸಮನ್ಸ್ ಪಡೆದಿದ್ದ ಫರ್ನಾಂಡೀಸ್ ವಿರುದ್ಧ ಪೂರಕ ಆರೋಪ ಪಟ್ಟಿಯಲ್ಲಿ ಮೊದಲ ಬಾರಿಗೆ ಉಲ್ಲೇಖಿಸಲಾಗಿತ್ತು.

ಮೈಸೂರು ಮಿತ್ರ ಬುಧವಾರ 16 ನವೆಂಬರ್ 2022

ನ.18ರಿಂದ ಬಾಳುಗೋಡುವಿನಲ್ಲಿ 'ಕೊಡವ ನಮ್ಮೆ' ಕಾರ್ಯಕ್ರಮ

ಮಡಿಕೇರಿ, ನ.15– ಬಾಳುಗೋಡುವಿನ ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ನ.18ರಿಂದ 20ರವರೆಗೆ ಅಂತರ ಕೊಡವ ಸಮಾಜಗಳ ನಡುವಿನ 'ಕೊಡವ ನಮ್ಮೆ' ಕಾರ್ಯಕ್ರಮ ನಡೆಯಲಿದೆ. ಬಾಳುಗೋಡು ಕೊಡವ ಸಮಾಜಗಳ ಒಕ್ಕೂಟದ ಸಭಾಂಗಣದಲ್ಲಿ 3 ದಿನಗಳ ಕಾಲ ವಿವಿಧ ಸ್ಪರ್ಧೆಗಳು ನಡೆಯಲಿವೆ.

ನ.18ರಂದು ಬೆಳಗ್ಗೆ ಸ್ಥಳೀಯ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ನಂತರ ಬೆಳಿಗೆ 8.30ಕ್ಕೆ ಅಂತರ ಕೊಡವ ಸಮಾಜಗಳ ನಡುವೆ ನಡೆಯುವ ನಾಕೌಟ್ ಮಾದರಿಯ ಹಾಕಿ ಪಂದ್ಯಾವಳಿಗೆ ಚಾಲನೆ ದೊರೆಯಲಿದೆ

ನ.19ರಂದು ಬೆಳಗೆ 9.30 ಗಂಟೆಗೆ ಹಾಕಿ ಸೆಮಿಫೈನಲ್ ಪಂದ್ಯಾವಳಿ ನಡೆಯಲಿದ್ದು, 10.30 ಗಂಟೆಗೆ ಹುತಾತ್ಮರಿಗೆ ಗೌರವ ನಮನ, ಗುಂಡು ಎಸೆತ ಸ್ಪರ್ಧೆ ಹಾಗೂ ಮಧ್ಯಾಹ್ನ 1.30 ಗಂಟೆಗೆ 2ನೇ ಹಾಕಿ ಸೆಮಿ ಫೈನಲ್ ನಡೆಯಲಿದೆ.

ನ.20ರಂದು ಬೆಳಿಗ್ಗೆ 8.30 ಗಂಟೆಗೆ ಮಂದ್ ಕಾರ್ಯಕ್ರಮ ನಡೆಯಲಿದ್ದು, 9 ಗಂಟೆಯಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದೆ. ಮಧ್ಯಾಹ್ನ 2 ಗಂಟೆಗೆ ಹಾಕಿ ಫೈನಲ್ಸ್ ಪಂದ್ಯಾವಳಿ ಹಾಗೂ ಮಹಿಳೆಯರಿಗೆ ಮತ್ತು ಪುರುಷರಿಗೆ ಹಗ್ಗ ಜಗ್ಗಾಟ ಸ್ಪರ್ಧೆ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ.

ಉಮ್ಮತ್ತಾಟ್, ಕೋಲಾಟ್, ಬೊಳಕಾಟ್, ಕತ್ತಿಯಾಟ್, ಪರೆಯಕಳಿ, ಸಮ್ಮಂದ ಅಡುಕುವೊ, ತಾಲಿಪಾಟ್, ಕಪ್ಪೆಯಾಟ್ ಸೇರಿದಂತೆ ವಿವಿಧ ಜನಪದೀಯ ಕಲೆಗಳ ಪ್ರದರ್ಶನ ಆಕರ್ಷಿಸಲಿವೆ. ಎಲ್ಲಾ ಕೊಡವ ಸಮಾಜಗಳು, ಕೊಡವ ಸಂಘ ಸಂಸ್ಥೆಗಳು, ಹಾಗೂ ಕೊಡವಾ ಭಿಮಾನಿಗಳು ಕೊಡವ ನಮ್ಮೆಯಲ್ಲಿ ಪಾಲ್ಗೊಳ್ಳುವಂತೆ ಬಾಳುಗೋಡು ಕೊಡವ ಸಮಾಜ ಮನವಿ ಮಾಡಿದೆ.

ನ.26ರಂದು ಕೊಡವ ನ್ಯಾಷನಲ್ ಡೇ

ಮಡಿಕೇರಿ, ನ.15– ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ 32ನೇ ವರ್ಷದ ಕೊಡವ ನ್ಯಾಷನಲ್ ಡೇ 'ಭಾರತದ ಸಂವಿಧಾನ' ದಿನವಾದ ನ.26ರಂದು ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಮಡಿಕೇರಿ ಸಮೀಪದ ಕ್ಯಾಪಿಟಲ್ ವಿಲೇಜ್‌ನಲ್ಲಿ ಬೆಳಗ್ಗೆ 10.30 ಗಂಟೆಗೆ ನಡೆಯಲಿರುವ ಕಾರ್ಯಕ್ರಮಕ್ಕೆ ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರ ಕಾನೂನು ಮಾಜಿ ಮಂತ್ರಿ ಡಾ.ಸುಬ್ರಮಣಿಯನ್ ಸ್ವಾಮಿ ಹಾಗೂ ವಿರಾಟ್ ಹಿಂದೂಸ್ತಾನ್ ಸಂಗಮ್ (ವಿಹೆಚ್‌ಎಸ್) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ ಪಾಲ್ಗೊಳ್ಳಲಿದ್ದಾರೆ. ಕೊಡವ ಭೌಗೋಳಿಕ ರಾಜಕೀಯ ಸ್ವಾಯತ್ತತೆ ಅನ್ವೇಷಣೆ ಹಾಗೂ ಕೊಡವ ಜನಾಂಗದ ಆಂತರಿಕ ರಾಜಕೀಯ ಸ್ವಯಂ ನಿರ್ಧಾರದ ಹಕ್ಕು ಮತ್ತು ಜಾಗತಿಕ ರಾಜಕಾರಣ ಎಂಬ ವಿಷಯದ ಕುರಿತು ಮಾತನಾಡಲಿದ್ದಾರೆ. ತಮ್ಮ ಅಧ್ಯಕ್ಷತೆಯಲ್ಲಿ ನಡೆಯುವ 'ಕೊಡವ ನ್ಯಾಷನಲ್ ಡೇ' ಕಾರ್ಯಕ್ರಮದಲ್ಲಿ ಕೊಡವರ ಹಿತಾಸಕ್ತಿ ಕಾಪಾಡುವ ಮಹತ್ವದ ಹಕ್ಕೊತ್ತಾಯ ಮತ್ತು ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗುವುದು. ಸರ್ವರು ಕೊಡವ ಉಡುಪಿನಲ್ಲಿ ಪಾಲ್ಗೊಳ್ಳುವಂತೆ ನಾಚಪ್ಪ ಮನವಿ ಮಾಡಿದ್ದಾರೆ.

ಇಂದು ಪ್ರಶಸ್ತಿ ಪ್ರದಾನ ಸಮಾರಂಭ

ಮಡಿಕೇರಿ, ನ.15– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಸಹಕಾರ ಇಲಾಖೆ, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಹಾಗೂ ಸ್ಥಳೀಯ ಎಲ್ಲಾ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ಶಿಕ್ಷಣ, ವೃತ್ತಿಪರ ನಿರ್ವಹಣೆಯನ್ನು ಮುಖ್ಯವಾಹಿನಿಗೆ ತರಲು ಪುನರ್ ನಿರ್ಮಿಸುವ ದಿನಾಚರಣೆ ಹಾಗೂ ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನಿಂದ ಆಯ್ಕೆಗೊಂಡ ಕೊಡಗಿನ ಶ್ರೇಷ್ಠ ಸಹಕಾರಿಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭವು ನ.16 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಹೋಟೆಲ್ ರಾಜ್‌ದರ್ಶನ್‌ನಲ್ಲಿ ನಡೆಯಲಿದೆ.

ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್, ಎಂ.ಪಿ.ಸುಜಾ ಕುಶಾಲಪ್ಪ ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರು ಹಾಗೂ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕರಾದ ಎ.ಕೆ.ಮನು ಮುತ್ತಪ್ಪ, ಇತರರು ಪಾಲ್ಗೊಳ್ಳಲಿದ್ದಾರೆ.

ನ.18, ತಲಕಾವೇರಿಯಲ್ಲಿ ಸ್ವಚ್ಛತಾ ಕಾರ್ಯ

ಮಡಿಕೇರಿ, ನ.15– ತಲಕಾವೇರಿಯ ಶ್ರೀ ತಲಕಾವೇರಿ ದೇವಾಲಯದಲ್ಲಿ ನ.18 ರಂದು ಮಧ್ಯಾಹ್ನ 2 ಗಂಟೆಯ ನಂತರ ಶ್ರೀ ತಲಕಾವೇರಿ ದೇವಾಲಯದಲ್ಲಿ ಸ್ವಚ್ಛತಾ ಕಾರ್ಯದ ಪ್ರಯುಕ್ತ ಶ್ರೀ ತಲಕಾವೇರಿ ದೇವಾಲಯದ ಪ್ರವೇಶ ಇರುವುದಿಲ್ಲ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ಸಹಕರಿಸುವಂತೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಂ.ಕೃಷ್ಣಪ್ಪ ಅವರು ಕೋರಿದ್ದಾರೆ.

ಜಿಲ್ಲೆಯಲ್ಲಿ ಮಳೆಗಾಲ ಮುಗಿದಿದ್ದು, ರಸ್ತೆ, ಸೇತುವೆ, ತಡೆಗೋಡೆ ಕಾಮಗಾರಿ ಶೀಘ್ರ ಕೈಗೊಳ್ಳಲು ಸೂಚನೆ

ಮಡಿಕೇರಿ, ನ.15– ಕೊಡಗು ಜಿಲ್ಲೆಯಲ್ಲಿ ಮಳೆಗಾಲ ಮುಗಿದಿದ್ದು, ಕೂಡಲೇ ರಸ್ತೆ, ಸೇತುವೆ, ತಡೆಗೋಡೆ, ಚರಂಡಿ ಮತ್ತಿತರ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಸಂಬಂಧಪಟ್ಟ ಎಂಜಿನಿಯರ್‌ಗಳಿಗೆ ಸಂಸದರಾದ ಪ್ರತಾಪ್ ಸಿಂಹ ಸೂಚಿಸಿದ್ದಾರೆ. ನಗರದ ಜಿಪಂ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ರಸ್ತೆ ಹದಗೆಟ್ಟಿರುವ ಬಗ್ಗೆ ಈಗಾಗಲೇ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಕೇಳಿ ಬರುತ್ತಿದೆ. ಆದ್ದರಿಂದ ಕೂಡಲೇ ರಸ್ತೆ ಗುಂಡಿ ಮುಚ್ಚುವ ಕೆಲಸ ಆಗಬೇಕು. ಈಗಾಗಲೇ ಅನುಮೋದನೆ ಆಗಿರುವ ರಸ್ತೆ ಕಾಮಗಾರಿ ಕೈಗೊಳ್ಳಬೇಕು. ಸಾರ್ವಜನಿಕರಿಗೆ ಸ್ಪಂದಿಸುವಲ್ಲಿ ಎಂಜಿನಿಯರ್‌ಗಳು ಕೆಲಸ ಮಾಡಬೇಕು. ರಸ್ತೆ ಕಾಮಗಾರಿ ಸಂಬಂಧ ಯಾವುದೇ ರೀತಿಯ ದೂರು ಬರದಂತೆ ಕಾಮಗಾರಿ ಕೈಗೊಳ್ಳಬೇಕು ಎಂದು ಅವರು ಸ್ಪಷ್ಟ ನಿರ್ದೇಶನ ನೀಡಿದರು. ಕುಶಾಲನಗರ ಬಳಿಯ ತಾವರೆಕೆರೆ ಮತ್ತು ಮಡಿಕೇರಿ–ಸಂಪಾಜೆ ರಸ್ತೆ ಮಾರ್ಗದಲ್ಲಿ ತಡೆಗೋಡೆ, ಸೇತುವೆ ಮತ್ತಿತರ ಕಾಮಗಾರಿ ತ್ವರಿತವಾಗಿ ಕೈಗೊಳ್ಳುವಂತೆ ಎಂಜಿನಿಯರ್‌ಗೆ ಸಂಸದರು ಸೂಚಿಸಿದರು.

ಕುಶಾಲನಗರದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸುವಂತೆ ಲೋಕೋಪಯೋಗಿ ಇಲಾಖೆ ಎಂಜಿನಿಯರ್‌ಗೆ ಶಾಸಕರಾದ ಎಂ.ಪಿ. ಅಪ್ಪಚ್ಚುರಂಜನ್ ಅವರು ಸೂಚಿಸಿದರು.

ಬೋಯಿಕೇರಿ ಮತ್ತು ಆನೆಕಾಡು ಬಳಿ ರಸ್ತೆ ಕಾಮಗಾರಿಗೆ ಅನುಮೋದನೆ ಪಡೆದು ಕಾಮಗಾರಿ ಕೈಗೊಳ್ಳುವಂತೆ ಪ್ರತಾಪ್ ಸಿಂಹ ಅವರು ಹೇಳಿದರು. ಶಾಸಕರಾದ ಎಂ.ಪಿ. ಅಪ್ಪಚ್ಚುರಂಜನ್ ಅವರು ಚೆನ್ನರಾಯಪಟ್ಟಣ, ಸೋಮವಾರಪೇಟೆ, ಮಡಿಕೇರಿ, ವಿರಾಜಪೇಟೆ ರಾಷ್ಟ್ರೀಯ ಹೆದ್ದಾರಿ ಪ್ರಸ್ತಾವ ಯಾವ ಹಂತಕ್ಕೆ ಬಂದಿದೆ ಎಂದು ಮಾಹಿತಿ ಪಡೆದರು. ಈ ಬಗ್ಗೆ ಮಾತನಾಡಿದ ಎಂಜಿನಿಯರ್ ನಾಗರಾಜು ಅವರು ರಾಷ್ಟ್ರೀಯ ಹೆದ್ದಾರಿ ಎಂದು ಇನ್ನೂ ಪ್ರಕಟವಾಗಿಲ್ಲ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರು ಮಾತನಾಡಿ, ಈಗಾಗಲೇ ಕಾಫಿ ಬೆಳೆ ಹಾನಿ ಬಗ್ಗೆ 7 ಹಂತದಲ್ಲಿ ಪರಿಹಾರ ವಿತರಿಸಲಾಗಿದೆ. ಬಾಕಿ ಕಾಫಿ ಬೆಳೆ ಹಾನಿ ಪರಿಹಾರ ವಿತರಿಸಲಾಗುವುದು. ಒಟ್ಟಾರೆ 110 ಕೋಟಿ ರೂ. ಬೆಳೆ ಹಾನಿ ಪರಿಹಾರಕ್ಕೆ ಆಗುತ್ತದೆ ಎಂದರು. ಕಾಫಿ ಬೆಳೆ ಹಾನಿ ಸಂಬಂಧಿಸಿ ದಂತೆ ಮಾಹಿತಿ ನೀಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಅವರು 5 ತಾಲೂಕಿನಲ್ಲಿ ಡಾಟಾ ಎಂಟ್ರಿ ನಡೆಯುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿಕಾಳಪ್ಪ ಅವರು ಪ್ರಾಕೃತಿಕ ವಿಕೋಪದಿಂದ ಹಾನಿಯಾದ ಕಾಮಗಾರಿಗಳನ್ನು ಆದಷ್ಟು ಶೀಘ್ರ ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್ ಅಂಬೇಡ್ಕರ್ ವಸತಿ ಯೋಜನೆಯಡಿ ಎಲ್ಲಾ ಫಲಾನುಭವಿಗಳಿಗೂ ಮನೆ ನಿರ್ಮಿಸಿಕೊಡಬೇಕು. ಫಲಾನುಭವಿಗಳು ಇಲ್ಲ ಎಂಬ ಮಾಹಿತಿ ಕೇಳಿ ಬರಬಾರದು ಎಂದು ತಾಕೀತು ಮಾಡಿದರು. ಜಿಪಂ ಸಿಇಒ ಡಾ.ಎಸ್.ಆಕಾಶ್ ಅವರು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ವಸತಿ ಯೋಜನೆ ಹಾಗೂ ನಲ್ಲಿ ನೀರು ಸಂಪರ್ಕ ಮತ್ತಿತರ ಯೋಜನೆಗಳನ್ನು ಸಂಪರ್ಕವಾಗಿ ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಿದರು.

ದೇವಾಲಯಗಳ ಮೇಲೆ ದಾಳಿ ಮಾಡಿದ್ದ ಟಿಪ್ಪು ಪ್ರತಿಮೆ ಸ್ಥಾಪನೆಗೆ ಅವಕಾಶವಿಲ್ಲ: ಸಂಸದ ಪ್ರತಾಪ್‌ಸಿಂಹ ವಾಗ್ದಾಳಿ

ಮಡಿಕೇರಿ, ನ.15– ಕನ್ನಡವನ್ನು ಕಗ್ಗೊಲೆ ಮಾಡಿದ ಟಿಪ್ಪು ಪ್ರತಿಮೆ ನಿರ್ಮಿಸುತ್ತೀರಾ ಎಂದು ಸಂಸದ ಪ್ರತಾಪ್ ಸಿಂಹ ಶಾಸಕ ತನ್ವೀರ್ ಶೇಠ್ ಹೇಳಿಕೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಕನ್ನಡ ಸಂಸ್ಕೃತಿ ಇಲಾಖೆ ಮೂಲಕ ಟಿಪ್ಪು ಜಯಂತಿ ಮಾಡಿಸಿದ್ದರು. ಇದು ಅರಣ್ಯ ಇಲಾಖೆ ಕಾಡುಗಳ್ಳ ವೀರಪ್ಪನ್ ಜಯಂತಿ ಮಾಡಿದಂತಾಗುತ್ತದೆ ಎಂದು ವ್ಯಂಗವಾಡಿದರು.

ಟಿಪ್ಪು ಕ್ರೌರ್ಯಕ್ಕೆ ಧ್ಯೋತಕವಾಗಿದ್ದಾನೆ. ಟಿಪ್ಪು ಯಾವುದೇ ರಾಕೇಟ್ ಹಾರಿಸಿಲ್ಲ, ಯುದ್ಧದಲ್ಲಿ ಟಿಪ್ಪು ರಾಕೇಟ್ ಬಳಕೆ ಮಾಡಿದ ಉದಾಹರಣೆಯೇ ಇಲ್ಲ. ಕಾಗಕ್ಕ ಗುಬ್ಬಕ್ಕ ಕಥೆ ಕಟ್ಟಿ ಟಿಪ್ಪು ವೈಭವೀಕರಣ ಮಾಡಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯಾವ ಹುಲಿ ಜತೆ ಟಿಪ್ಪು ಹೋರಾಟ ಮಾಡಿದ್ದಾನೆ. ಮನುಷ್ಯ ಹುಲಿ ಜತೆ ಹೋರಾಟ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಹೈದರಾಲಿ ಯುದ್ಧ ಮಾಡಿದ ಉದಾಹರಣೆಯಿದೆ. ಟಿಪ್ಪು ಯಾವ ಯುದ್ದದಲ್ಲಿ ಹೋರಾಡಿದ್ದಾನೆ. ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಮನೆಯಿಂದ ಹೊರಗಡೆಯೇ ಬರಲಿಲ್ಲ. ಕಟ್ಟು ಕಥೆಗಳ ಮೂಲಕ ಟಿಪ್ಪುವನ್ನು ಕನ್ನಡದ ಹೋರಾಟಗಾರ ಎಂದು ಹೇಳುವುದನ್ನು ನಿಲ್ಲಿಸಿ ಎಂದು ಸಂಸದ ಪ್ರತಾಪ್ ಸಿಂಹ ವಾಗ್ದಾಳಿ ನಡೆಸಿದರು.

ಟಿಪ್ಪು ಪ್ರತಿಮೆಗೆ ವಿರೋಧ: ದೇವಾಲಯಗಳ ಮೇಲೆ ದಾಳಿ ಮಾಡಿದ್ದ ಟಿಪ್ಪುವಿನ ಪ್ರತಿಮೆಗೆ ರಾಜ್ಯದಲ್ಲಿ ಅವಕಾಶವಿಲ್ಲ. ಕೊಡವರಿಗೆ ಟಿಪ್ಪು ಅವಮಾನ ಮಾಡಿದ್ದಾನೆ. ಮೈಸೂರು ಅಥವಾ ಶ್ರೀರಂಗಪಟ್ಟಣದಲ್ಲಿ ನರಿಖೀರ್ ಸಾಬ್ ಅಥವಾ ಅಬ್ದುಲ್ ಕಲಾಂ ಅವರ ಪ್ರತಿಮೆ ನಿರ್ಮಿಸಿ, ಜನ ನಿಮ್ಮನ್ನು ಮೆಚ್ಚುತ್ತಾರೆ ಎಂದು ಶಾಸಕ ತನ್ವೀರ್ ಸೇಠ್ ಹೇಳಿಕೆಗೆ ಟಾಂಗ್ ನೀಡಿದರು.

ಗುಂಬಜ್ ತೆರವು ಖಂಡಿತ: ಮುಂದಿನ 3–4 ದಿನಗಳಲ್ಲಿ ಮೈಸೂರಿನಲ್ಲಿ ಬಸ್ ತಂಗುದಾಣದಲ್ಲಿರುವ ಗುಂಬಜ್ ಮಾದರಿಯನ್ನು ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮೈಸೂರು ಮಹಾನಗರ ಪಾಲಿಕೆ ತೆರವುಗೊಳಿಸದೇ ಇದ್ದಲ್ಲಿ ನಾನೇ ಜೆಸಿಬಿ ಮೂಲಕ ತೆರವು ಮಾಡುತ್ತೇನೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು.

16ರಿಂದ 19ನೇ ಶತಮಾನದವರೆಗೆ ಭಾರತದಲ್ಲಿ ಮೊಘಲರ ಆಳ್ವಿಕೆಯಿತ್ತು. ಆಗ ಇಂಡೋಸಾರ್ಸೇನಿಕ್ ಶೈಲಿಯ ವಾಸ್ತುಶೈಲಿ ಭಾರತದಲ್ಲಿತ್ತು. ಪರ್ಷಿಯಾ, ಟರ್ಕಿ, ಮಂಗೋಲಿಯ ಸೇರಿದಂತೆ ಮೊಘಲರು ಭಾರತದ ಮೇಲೆ ದಾಳಿ ನಡೆಸಿದರು. 19ನೇ ಶತಮಾನದಲ್ಲಿ ಭಾರತ ಬ್ರಿಟಿಷರ ಆಳ್ವಿಕೆಯಲ್ಲಿತ್ತು. ಆ ಸಂದರ್ಭ ಇಂಡೋಸಾರ್ಸೇನಿಕ್ ಶೈಲಿಯ ವಾಸ್ತುಶೈಲಿಯಲ್ಲಿ ಕಟ್ಟಡಗಳು ನಿರ್ಮಾಣವಾಗಿವೆ. ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾದ ವಾಸ್ತುಶೈಲಿಯ ಕಟ್ಟಡಕ್ಕೂ ಗುಂಬಜ್‌ಗಳಿಗೂ ಸಂಬಂಧ ಕಲ್ಪಿಸಬೇಡಿ. ಕೂಡಲೇ ಗುಂಬಜ್ ಶೈಲಿಯ ಬಸ್ ತಂಗುದಾಣ ತೆರವುಗೊಳಿಸಬೇಕು. ಇದು ಪಾರಂಪರಿಕ ಶೈಲಿಯ ಸಂಕೇತವಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಈ ಸಂದರ್ಭ ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್, ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಹಾಜರಿದ್ದರು.

ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆ

ಮಡಿಕೇರಿ, ನ.15– ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆಯು ನಗರಸಭೆ ಅಧ್ಯಕ್ಷರಾದ ನೆರವಂಡ ಅನಿತಾ ಪೂವಯ್ಯ ಅವರ ಅಧ್ಯಕ್ಷತೆಯಲ್ಲಿ ನ.18 ರಂದು ಬೆಳಗ್ಗೆ 11 ಗಂಟೆಗೆ ನಗರಸಭಾ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರಾದ ವಿಜಯ ಅವರು ತಿಳಿಸಿದ್ದಾರೆ.

ಶವಾಗಾರದಲ್ಲಿ ಮೃತ ಮಹಿಳೆಯರ ಬೆತ್ತಲೆ ಫೋಟೋ ತೆಗೆಯುತ್ತಿದ್ದವನಿಂದ ವೃದ್ಧೆ ಮೇಲೆ ಅತ್ಯಾಚಾರಕ್ಕೆ ಯತ್ನ

ಮಡಿಕೇರಿ ಠಾಣೆಯಲ್ಲಿ ಪ್ರಕರಣ ದಾಖಲು, ಆರೋಪಿ ಬಂಧನ

ಮಡಿಕೇರಿ, ನ.15– ಮಡಿಕೇರಿ ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಕಡಗದಾಳು ನಿವಾಸಿ ಸೈಯದ್(24) ಎಂಬಾತನನ್ನು ಮಾನ ಭಂಗ ಯತ್ನ ಆರೋಪದಡಿ ನಗರ ಪೊಲೀಸರು ಬಂಧಿಸಿದ್ದಾರೆ.



ಮಡಿಕೇರಿಯ 74 ವರ್ಷದ ವೃದ್ಧೆಯೋರ್ವರ ಮನೆಗೆ ನುಗ್ಗಿದ ಸೈಯದ್, ಮಾನ ಭಂಗಕ್ಕೆ ಯತ್ನ ಮಾಡಿರುವುದಾಗಿ ನ.13ರಂದು ಮಡಿಕೇರಿ ನಗರ ಠಾಣೆಗೆ ವೃದ್ಧೆಯೊಬ್ಬರು ದೂರು ನೀಡಿದ ಅನ್ವಯ ಪ್ರಕರಣ ದಾಖಲಿಸಿ ಸೈಯದ್‌ನನ್ನು ಬಂಧಿಸಲಾಗಿದೆ.

ಸೆ.22ರಂದು ರಾತ್ರಿ ಸುಮಾರು 11 ಗಂಟೆಗೆ ವೃದ್ಧೆ ಮನೆಗೆ ಆಗಮಿಸಿದ ಸೈಯದ್ ಮನೆ ಬಾಗಿಲು ಬಡಿದಿದ್ದಾನೆ. ವೃದ್ಧೆ ಬಾಗಿಲು ತೆರೆದ ತಕ್ಷಣ ಸೈಯದ್ ಮನೆ ಒಳಗೆ ನುಗ್ಗಿ ಮಾನ ಭಂಗಕ್ಕೆ ಯತ್ನಿಸಿದ್ದಾನೆ. ವೃದ್ಧೆ ಈ ಸಂದರ್ಭದಲ್ಲಿ ಜೋರಾಗಿ ಕಿರುಚಿಕೊಂಡಿದ್ದು, ಪಕ್ಕದ ಮನೆಯವರು ಹೊರಬರುವಷ್ಟರಲ್ಲಿ ಸೈಯದ್ ಸ್ಥಳದಿಂದ ಪರಾರಿಯಾಗಿದ್ದ. ಈ ಸಂದರ್ಭ ಸೈಯದ್ ತನ್ನ ಮೊಬೈಲ್ ಫೋನನ್ನು ಮನೆಯಲ್ಲೇ ಬಿಟ್ಟು ಪರಾರಿಯಾಗಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ದೂರನ್ನು ಆಧರಿಸಿ ಪೊಲೀಸರು ಆರೋಪಿ ಸೈಯದ್‌ನನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಆರೋಪಿ ಸೈಯದ್‌ನ ಮೊಬೈಲ್ ಫೋನನ್ನು ದೂರುದಾರರು ಪೊಲೀಸರಿಗೆ ಹಸ್ತಾಂತರಿಸಿದ್ದಾರೆ. ಶವಾಗಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸೈಯದ್ ಶವಾಗಾರದಲ್ಲಿನ ಮೃತ ಮಹಿಳೆಯರ ದೇಹಗಳ ಬೆತ್ತಲೆ ಚಿತ್ರಗಳನ್ನು ತನ್ನ ಫೋನಿನಲ್ಲಿ ಸೆರೆ ಹಿಡಿಯುತ್ತಿದ್ದ ಎಂಬ ಆರೋಪವೂ ಇದ್ದು, ಈ ಸಂಬಂಧ ತನಿಖೆ ನಡೆಯುತ್ತಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

ಡಿ.1, 2ರಂದು ಚಾ.ನಗರಕ್ಕೆ ಸಿಎಂ ಬೊಮ್ಮಾಯಿ?

ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಚಾಮರಾಜನಗರ, ನ.15– ಡಿ.1 ಹಾಗೂ 2ರಂದು ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದು, ಅವರೇ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಹೇಳುವ ಮೂಲಕ ಜಿಲ್ಲೆಗೆ ಸಿಎಂ ಭೇಟಿಯ ಸುಳಿವು ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಸರ್ಕಾರದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲು ಚಾಮರಾಜನಗರ ಹಾಗೂ ಹನೂರಿನಲ್ಲಿ ಎರಡು ದಿನ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಮಾಹಿತಿ ನೀಡಿದರು.

ಬಿಜೆಪಿ ಬಲಿಷ್ಠವಾಗಿದೆ: ಜಿಲ್ಲೆಯಲ್ಲಿ ಬಿಜೆಪಿ ಬಲಾಢ್ಯವಾಗಿದ್ದು, ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದಲ್ಲಿ ಪಕ್ಷವನ್ನು ಭದ್ರ ಬುನಾದಿಯನ್ನು ಪಕ್ಷದ ಜಿಲ್ಲಾಧ್ಯಕ್ಷರು, ರಾಜ್ಯ ಹಾಗೂ ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ಕಾರ್ಯಕರ್ತರು ಹಾಕಿದ್ದಾರೆ ಎಂದರು.

ಕೆರೆ ಭರ್ತಿಗೆ 1400 ಕೋಟಿ: ಜಿಲ್ಲೆಯ ಎಲ್ಲಾ ಕೆರೆಗಳನ್ನು ಭರ್ತಿ ಮಾಡಲು 1400 ಕೋಟಿ ಅನುದಾನವನ್ನು ರಾಜ್ಯ ಬಿಜೆಪಿ ಸರ್ಕಾರ ಬಿಡುಗಡೆಗೊಳಿಸಿದ್ದು, ಮೊದಲ ಹಂತದಲ್ಲಿ 750 ಕೋಟಿ ರೂ. ನೀಡಲು ಸಚಿವ ಸಂಪುಟದಲ್ಲಿ ಒಪ್ಪಿಗೆ ದೊರೆತಿದೆ ಎಂದು ಮಾಹಿತಿ ನೀಡಿದರು.

ಐದು ಸಾವಿರ ಅಂಗವಿಕಲರಿಗೆ ಸಲಕರಣೆ ವಿತರಣೆ

ಅಂಗವಿಕಲರು ಹಾಗೂ ಬುದ್ಧಿಮಾಂದ್ಯರ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರದಿಂದ ಜಿಲ್ಲೆಯ ಐದು ಸಾವಿರ ಅಂಗವಿಕಲರಿಗೆ ಸಾಧನ ಸಲಕರಣೆಗಳನ್ನು ವಿತರಿಸಲಾಗುವುದು ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೇಳಿದರು.

ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿ, ಮುಂದಿನ ತಿಂಗಳು ಡಿ.22ರಂದು ಚಾಮರಾಜನಗರ, ಗುಂಡ್ಲುಪೇಟೆ, ಹನೂರು, ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕಿನಿಂದ ಒಟ್ಟು ಐದು ಸಾವಿರ ಮಂದಿ ಅಂಗವಿಕಲರಿಗೆ ಸಾಧನ ಸಲಕರಣೆ ವಿತರಿಸಲು ಕಾರ್ಯಕ್ರಮ ಆಯೋಜಿಸಲು ಸಿದ್ಧತೆ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ದಕ್ಷಿಣ ಭಾರತದ ಯಾವುದಾದರೊಂದು ಲೋಕಸಭಾ ಕ್ಷೇತ್ರದಲ್ಲಿ ಹತ್ತಾರು ಕೋಟಿ ರೂ. ವೆಚ್ಚದಡಿ ಅಂಗವಿಕಲರಿಗೆ ಸಲಕರಣೆ ವಿತರಿಸುವ ಕಾರ್ಯಕ್ರಮವನ್ನು ಆಯೋಜಿಸಲು ಕೇಂದ್ರ ಸರ್ಕಾರ ಚಿಂತಿಸುತ್ತಿದ್ದು, ಇದಕ್ಕೆ ಚಾಮರಾಜನಗರ ಲೋಕಸಭಾ ಕ್ಷೇತ್ರ ಆಯ್ಕೆ ಮಾಡಲಾಗಿದೆ. ಇದರಿಂದ ಜಿಲ್ಲೆಯ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ. ಶೀಘ್ರದಲೇ ಈ ಬಗ್ಗೆ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ತಿಳಿಸಿದರು.

ಕೊರೊನಾ ಹಾಗೂ ಮಳೆಹಾನಿಯಿಂದ ನಷ್ಟಕ್ಕೊಳ್ಳಗಾಗಿದ್ದ ರೈತರಿಗೆ ಪರಿಹಾರವನ್ನು, ಬಿಜೆಪಿ ಸರ್ಕಾರದ ತಿಂಗಳೊಳಗೆ ನೀಡುವ ಮೂಲಕ ರೈತರಿಗೆ ಅನುಕೂಲ ಕಲ್ಪಿಸಿದೆ. ಅಲ್ಲದೇ ವಿದ್ಯಾಸಿರಿ ಯೋಜನೆಯನ್ನು ಅಸಂಘಟಿತ ಕಾರ್ಮಿಕರ ಮಕ್ಕಳಿಗೂ ವಿಸ್ತರಿಸುವ ಮೂಲಕ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದೆ ಎಂದು ತಿಳಿಸಿದರು. ಹಿಂದಿನ ಕಾಂಗ್ರೆಸ್ ಸರ್ಕಾರ ತನ್ನ ಕೊನೆಯ ಅವಧಿ ಯಲ್ಲಿ 10 ಲಕ್ಷ ಮನೆ ನೀಡಲು ಆದೇಶಿಸಿತ್ತು. ಆದರೆ, ಅನುದಾನ ಮಾತ್ರ ನೀಡಲಿಲ್ಲ. ನಮ್ಮ ಸರ್ಕಾರ ಬಡವರಿಗೆ ವಸತಿ ನೀಡಲು 7500 ಕೋಟಿ ಅನುದಾನವನ್ನು ಮೀಸಲಿಟ್ಟಿದೆ ಎಂದು ತಿಳಿಸಿದರು.

ಕಾರ್ಯಕಾರಿಣಿಯಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್, ಶಾಸಕರಾದ ಎನ್.ಮಹೇಶ್, ಸಿ.ಎಸ್.ನಿರಂಜನ್‌ಕುಮಾರ್, ಜಿಲ್ಲಾಧ್ಯಕ್ಷ ಆರ್.ಸುಂದರ್, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಮಾಜಿ ಶಾಸಕ ಆರ್.ಪಿ.ನಂಜುಂಡಸ್ವಾಮಿ, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ನಗರಸಭೆ ಅಧ್ಯಕ್ಷ ಆಶಾ ನಟರಾಜು, ಮುಖಂಡರಾದ ನೂರೊಂದುಶೆಟ್ಟಿ, ರಾಜೇಂದ್ರ, ಗಿರೀಶ್, ಮಾಧ್ಯಮ್ ಪ್ರಮುಖ್ ಮಂಜುನಾಥ್, ಶಿವು ಇದ್ದರು.

ಅವಕಾಶವಾದಿ ರಾಜಕಾರಣಿ ಖರ್ಗೆ

ಸಿದ್ದರಾಮಯ್ಯ ಕೊನೇ ಆಟ ಇದು

ಮಲ್ಲಿಕಾರ್ಜುನ ಖರ್ಗೆ ಓರ್ವ ಅವಕಾಶವಾದಿ ರಾಜಕಾರಣಿ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಟೀಕಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷರಾಗಿ ಜೊತೆಗೆ ವಿಪಕ್ಷ ನಾಯಕರಾಗಿದ್ದ ಖರ್ಗೆ ರಾಜ್ಯ ರಾಜಕಾರಣದಲ್ಲಿ ತಮ್ಮದೇನು ನಡೆಯಲ್ಲ ಎಂದು ಸಂಸತ್ತಿಗೆ ಹಾರಿ ಕಾರ್ಮಿಕ ಸಚಿವರಾದರು. ಖರ್ಗೆ ಓರ್ವ ಅವಕಾಶವಾದಿ ರಾಜಕಾರಣಿಯಷ್ಟೇ. ಅವರೇನೂ ಪಕ್ಷ ಕಟ್ಟಿದ್ದಾರಾ..? ಹೋರಾಟ ಮಾಡಿದ್ದಾರಾ..? ಎಂದು ತೀಕ್ಷ್ಣ ಮಾತುಗಳಿಂದ ಟೀಕಾ ಪ್ರಹಾರ ನಡೆಸಿದರು. ಈಗ ಖರ್ಗೆಗೆ ಮರದ ಕತ್ತಿ ಹಾಗೂ ರಟ್ಟಿನ ಗುರಾಣಿ ನೀಡಿ ಯುದ್ಧಕ್ಕೆ ಕಳುಹಿಸಿದ್ದಾರೆ. ಪ್ರಜಾ ಪ್ರಭುತ್ವದಲ್ಲಿ ಜನರು ಅರ್ಥ ಮಾಡಿಕೊಂಡಿದ್ದಾರೆ. ಅಭಿವೃದ್ಧಿ ಪರ ಸರ್ಕಾರವನ್ನು ಆರಿಸುತ್ತಾರೆ. ಬಿಜೆಪಿ ಪರ ಅಲೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಕೊನೇ ಆಟ ಕೋಲಾರ: ಸಿದ್ದರಾಮಯ್ಯ ಈ ಬಾರಿ ನಿಲ್ಲುವುದೇ ಕೋಲಾರದಲ್ಲಿ, ಹೈಕಮಾಂಡ್ ತೀರ್ಮಾನ ಎಂದು ಸುಮ್ಮನೆ ಹೇಳುತ್ತಿದ್ದು, ಕೋಲಾರದಲ್ಲೇ ನಿಲ್ಲುತ್ತಾರೆ. ಆದರೆ ಅದನ್ನೂ ಸ್ಪಷ್ಟವಾಗಿ ಹೇಳುತ್ತಿಲ್ಲ. 224 ಕ್ಷೇತ್ರದಲ್ಲೂ ಕರೆಯುತ್ತಾರೆ ಎಂದು ಹೇಳುವ ಸಿದ್ದರಾಮಯ್ಯ ಅವರಿಗೆ ಧೈರ್ಯ ಇದ್ದರೇ ಚಾಮುಂಡೇಶ್ವರಿಯಲ್ಲೇ ನಿಲ್ಲಬಹುದಿತ್ತು, ವರುಣದಲ್ಲಿ ನಿಲ್ಲಬಹುದಿತ್ತು. ಕೋಲಾರದ ತನಕ ಓಡಬೇಕಿತ್ತಾ..? ವೀರಾವೇಶದ ಮಾತುಗಳು ಚುನಾವಣೆ ಬಂದಾಗ ಗೊತ್ತಾಗಲಿದೆ ಎಂದು ಸಂಸದರು ಜರಿದರು.

ಚಾಮರಾಜನಗರ ಅಭಿವೃದ್ಧಿಗೆ ಸರ್ಕಾರ ಬದ್ಧ



ಯಳಂದೂರು, ನ.15– ಚಾಮರಾಜನಗರ ಜಿಲ್ಲಾ ಕೇಂದ್ರ ಹಾಗೂ ಜಿಲ್ಲೆಯ ಎಲ್ಲಾ ತಾಲೂಕಿನ ಅಭಿವೃದ್ಧಿಗೆ 1500 ಕೋಟಿ ರೂ.ಗಳ ವಿಶೇಷ ಯೋಜನೆ ತಯಾರಾಗಿದ್ದು, ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಆದರೆ ಇಲ್ಲಿ ಕಾಲೆಳೆಯುವರ ಸಂಖ್ಯೆ ಹೆಚ್ಚಿದ್ದು ಅಭಿವೃದ್ಧಿಯ ದೃಷ್ಟಿಯಿಂದ ಇದು ಕಡಿಮೆಯಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಹಾಗೂ ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಮಂಗಳವಾರ ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯಿತ ಮಠಾಧಿಪತಿಗಳ ಗೋಷ್ಠಿಯ ವತಿಯಿಂದ ಹಮ್ಮಿಕೊಂಡಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 107 ನೇ ಜಯಂತಿ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶಿವದೀಕ್ಷೆ–ಲಿಂಗದೀಕ್ಷೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಿಲ್ಲಾ ಕೇಂದ್ರಕ್ಕೆ ಮುಖ್ಯಮಂತ್ರಿಗಳನ್ನು ಈ ತಿಂಗಳ ಅಂತ್ಯ ಅಥವಾ ಡಿ.2 ಕ್ಕೆ ಕರೆತರಲಾಗುವುದು. ಚಾಮರಾಜನಗರ ಜಿಲ್ಲೆ ಅತ್ಯಂತ ಹಿಂದುಳಿದಿದ್ದು ಇದರ ಅಭಿವೃದ್ಧಿಗೆ ವಿಶೇಷ ಯೋಜನೆ ಸಿದ್ಧವಾಗಿದೆ. ಸಾವಿರಾರು ವರ್ಷಗಳ ಐತಿಹ್ಯ ಹೊಂದಿರುವ ಸುತ್ತೂರು ಮಠ ವಿಶ್ವದಲ್ಲೇ ಅಪಾರ ಕೀರ್ತಿ ಪಡೆದುಕೊಂಡಿದೆ. ಇದರ ಹಿಂದೆ ರಾಜೇಂದ್ರ ಹಾಗೂ ಹಾಲಿ ಇರುವ ಸುತ್ತೂರು ಶ್ರೀಗಳ ಕೊಡುಗೆ ಅಪಾರವಾಗಿದೆ. ಮಠ ಮಾನ್ಯಗಳು ರಾಷ್ಟ್ರದ ಸಂಪತ್ತಾಗಿದ್ದು ಸಮಾಜದ ಅಂಕುಡೊಂಕು ತಿದ್ದುವ, ಆಧ್ಯಾತ್ಮವನ್ನು ಪಸರಿಸುವ, ನಮ್ಮ ಸಂಸ್ಕೃತಿ, ಶ್ರೀಮಂತ ಪರಂಪರೆಯನ್ನು ಜಗಕ್ಕೆ ಸಾರುವ, ಸಂಸ್ಕಾರ ಕಲಿಸುವ ಕೇಂದ್ರಗಳಾಗಿವೆ ಎಂದರು.

ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮಾತನಾಡಿ, ಸುತ್ತೂರು ಮಠದ ರಾಜೇಂದ್ರ ಶ್ರೀಗಳ ಜೀವನವೇ ನಮಗೆ ಉತ್ತಮ ಸಂದೇಶವಾಗಿದೆ. ತಮ್ಮ ಜೀವಿತಾವಧಿಯಲ್ಲಿ ಬಡವರ ಶಿಕ್ಷಣಕ್ಕೆ ಇವರು ಪಟ್ಟ ಪಾಡು ಇದಕ್ಕಾಗಿ ಮಾಡಿದ ತ್ಯಾಗ ಅನುಕರಣೀಯವಾಗಿದೆ. ಮಾನವೀಯತೆಯ ದೊಡ್ಡ ಸಾಕಾರ ಮೂರ್ತಿಯಾಗಿದ್ದರು ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮಾತನಾಡಿ, ಶಿವಕುಮಾರಸ್ವಾಮಿಜಿ ಹಾಗೂ ರಾಜೇಂದ್ರ ಮಹಾಸ್ವಾಮಿಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವರು ಅಪರೂಪದ ಶ್ರೇಷ್ಠ ಸಂತರಾಗಿದ್ದಾರೆ. ಯುವ ಸಮೂಹ ದೇಶಭಕ್ತಿಯನ್ನು ಬೆಳೆಸಿಕೊಳ್ಳಬೇಕು, ನಮ್ಮ ಶ್ರೀಮಂತ ಸಂಸ್ಕೃತಿಯ ಅನಾವರಣ ಜಗಕ್ಕೆ ತೆರೆದಿಡಬೇಕು. ಪ್ರಾಚೀನ ಸಂಸ್ಕೃತಿಯನ್ನು ಉಳಿಸುವ ವಾರಸುದಾರರಾಗಿ ಮಕ್ಕಳನ್ನು ಬೆಳೆಸುವ ಕೆಲಸವಾಗಬೇಕು. ಮಹಾತ್ಮಾಗಾಂಧಿಯಂತಹ ಪುಣ್ಯ ಪುರುಷರು ನಮಗೆ ಆದರ್ಶವಾಗಬೇಕು ಎಂದರು.

ಇದೇ ಸಂದರ್ಭದಲ್ಲಿ 55 ಜನರಿಗೆ ಶಿವದೀಕ್ಷೆ–ಲಿಂಗದೀಕ್ಷೆ ಹಾಗೂ 55 ವಿದ್ಯಾರ್ಥಿಗಳಿಗೆ ವಿವಿಧ ದತ್ತಿಗಳಿಂದ ಪ್ರತಿಭಾ ಪುರಸ್ಕಾರ ನೀಡಲಾಯಿತು. ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಅಪರ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್ ಸೇರಿದಂತೆ ವಿವಿಧ ಮಠಗಳ ಮಠಾಧೀಶರು ಹಾಜರಿದ್ದರು.

ನಗರದಲ್ಲಿ ಆದಿವಾಸಿಗಳ ಬೃಹತ್ ಮೆರವಣಿಗೆ



ಚಾಮರಾಜನಗರ, ನ.15– ಆದಿವಾಸಿ ಜನಾಂಗದ ನಾಯಕ ಬಿರ್ಸಾ ಮುಂಡಾ ಅವರ ಜನ್ಮ ದಿನಾಚರಣೆ ಅಂಗವಾಗಿ ನಗರದಲ್ಲಿ ಆದಿವಾಸಿ ಜನಾಂಗದ ಬೃಹತ್ ಮೆರವಣಿಗೆ ನಡೆಯಿತು.

> ಬುಡಕಟ್ಟು ಜನಾಂಗದವರ ಅಭಿವೃದ್ಧಿಗಾಗಿ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡುವ ಅಗತ್ಯವಿದೆ. ಸೋಲಿಗರಿಗೆ ಕಾಡಿನ ಬಗ್ಗೆ ಅಭಿಮಾನ ಮತ್ತು ಕಾಳಜಿ ಜಾಸ್ತಿ. ಹಿಂದೆ ಸೋಲಿಗರಲ್ಲಿ ಅನೇಕ ನಾಟಿ ವೈದ್ಯರು ಇದ್ದರು. ಅವರ ನಿಸ್ವಾರ್ಥ ಸೇವೆ ನಿಜಕ್ಕೂ ಶ್ಲಾಘನೀಯ. ಆದಿವಾಸಿಗಳಲ್ಲೂ ಬುದ್ಧಿವಂತರು ಇದ್ದಾರೆ. ನಿಗಮ ಸ್ಥಾಪನೆಯಾದರೆ, ಅದರ ಮೂಲಕ ಹೆಚ್ಚಿನ ಸೌವಲತ್ತುಗಳು ಸಿಗಲಿವೆ. ಸಮುದಾಯದ ಅಭಿವೃದ್ಧಿಯೂ ಆಗಲಿದೆ. –ಸಿ.ಪುಟ್ಟರಂಗಶೆಟ್ಟಿ, ಶಾಸಕ

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ನೂರಾರು ಆದಿವಾಸಿ ಜನರು ಬಿರ್ಸಾ ಮುಂಡಾ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಹನೂರು ಭಾಗದ ಜೆಡಿಎಸ್ ಮುಖಂಡ ಎಂ.ಆರ್. ಮಂಜುನಾಥ್ ಸೇರಿದಂತೆ ಜಿಲ್ಲೆಯ ಆದಿವಾಸಿ ಮುಖಂಡರು ಪಾಲ್ಗೊಂಡಿದ್ದರು.

ಬಳಿಕ ಭಾವಚಿತ್ರ ಮೆರವಣಿಗೆ ನಡೆಯಿತು. ಮೆರವಣಿಗೆಯು ಭುವನೇಶ್ವರಿ ವೃತ್ತ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಸಾಗಿ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಅಂತ್ಯಗೊಂಡಿತು. ಬಳಿಕ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಿತು.

ಮೆರವಣಿಗೆಯಲ್ಲಿ ಜಿಲ್ಲೆಯ ವಿವಿಧ ಹಾಡಿಗಳಿಂದ ಆಗಮಿಸಿದ್ದ ಆದಿವಾಸಿ ಜನರು ಘೋಷಣೆಗಳನ್ನು ಕೂಗಿದರು. ಆದಿವಾಸಿಗಳು ಗೊರುಕನ ನೃತ್ಯ ಪ್ರದರ್ಶಿಸಿದರು. ಅಲ್ಲದೇ ಮಲೆ ಮಹದೇಶ್ವರ ವನ್ಯಜೀವಿಧಾಮ ಹುಲಿ ಯೋಜನೆ ಘೋಷಿಸದಂತೆ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪರಿಸರವಾದಿಗಳು ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನ. 16 ರಿಂದ 25 ರವರೆಗೆ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸರಬರಾಜು

ಚಾಮರಾಜನಗರ, ನ.15– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆಯಡಿ ಸಂತೇಮರಹಳ್ಳಿ ತಾಲೂಕು ಅಂಗನವಾಡಿ ಕೇಂದ್ರಗಳಿಗೆ ನ.16 ರಿಂದ 25 ರವರೆಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲಾಗುತ್ತದೆ. ನವೆಂಬರ್ 16ರಂದು ಇರಸವಾಡಿ, 17ರಂದು ಕೆ.ಗುಡಿ, 18ರಂದು ಚಂದಕವಾಡಿ, 19ರಂದು ಕುದೇರು, 21ರಂದು ಸಂತೇಮರಹಳ್ಳಿ, 22ರಂದು ನಾಗವಳ್ಳಿ, 23ರಂದು ಮಂಗಲ, 24ರಂದು ಉಮ್ಮತ್ತೂರು, 25ರಂದು ಮರಿಯಾಲ ವೃತ್ತ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲಾಗುತ್ತದೆ ಎಂದು ಸಂತೇಮರಹಳ್ಳಿ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಚಾಮರಾಜನಗರ, ನ.15– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಸ್ನಾತಕೋತ್ತರ ಮತ್ತು ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿಗಳು) ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ನವೆಂಬರ್ 22ರವರೆಗೆ ವಿಸ್ತರಿಸಲಾಗಿದೆ.

ಆನ್‌ಲೈನ್ ಮೂಲಕ ವೆಬ್‌ಸೈಟ್ www.backwardclasses.kar.nic.in ನಲ್ಲಿ ಅರ್ಜಿ ಸಲ್ಲಿಸಬಹುದು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ www.backwardclasses.kar.nic.in ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ದೂ.ಸಂ 08226–222180 ಸಂಪರ್ಕಿಸುವಂತೆ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಮತ್ತೊಂದು ಅಕ್ರಮ ನಿರ್ಮಾಣದ ಸದ್ದು

ಈ ಸಂಬಂಧ ಪಾಲಿಕೆ ವಲಯ ಕಚೇರಿ 4ರ ವಲಯ ಆಯುಕ್ತರು ನಮ್ಮ ದೂರಿನನ್ವಯ ನಕ್ಷೆ ಉಲ್ಲಂಘಿಸಿರುವುದು ಪರಿಶೀಲನೆ ವೇಳೆ ಕಂಡು ಬಂದ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಳಿಸಲು 2021ರ ಜು.16ರಂದು ನೋಟಿಸ್ ಮೂಲಕ ಸೂಚನೆ ನೀಡಿದ್ದರು. ಅದಾಗ್ಯೂ ಕಾಮಗಾರಿ ಮುಂದುವರೆಸಿದ ಹಿನ್ನೆಲೆಯಲ್ಲಿ ನಮ್ಮ ದೂರಿನನ್ವಯ ಮತ್ತೊಂದು ನೋಟಿಸ್ (2021ರ ಅ.18) ನೀಡಿದ್ದರು. ಇದಕ್ಕೂ ಜಗ್ಗದ ಹಿನ್ನೆಲೆಯಲ್ಲಿ ಮತ್ತೆ ನಮ್ಮ ದೂರಿನನ್ವಯ 2021ರ ಡಿ.23ರಂದು 3ನೇ ನೋಟಿಸ್ ನೀಡಿದ್ದು, ಇದನ್ನು ಪ್ರಶ್ನಿಸಿ ಎನ್.ಕುಮಾರ್ ಕೋರ್ಟ್‌ಗೆ ಹೋದರು. ಅದರಂತೆ ಮೈಸೂರಿನ 3ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎಂದು ವಿವರಿಸಿದರು.

ಕ್ರಮ ಕೈಗೊಂಡ ಒಂದೂ ಉದಾಹರಣೆ ಇಲ್ಲ: ಪಾಲಿಕೆ ಅಧಿಕಾರಿಗಳು ನಿಯಮ ಉಲ್ಲಂಘಿಸಿ ಕಟ್ಟುತ್ತಿರುವ ಕಟ್ಟಡಗಳ ಕಾಮಗಾರಿ ನಿಲ್ಲಿಸಿರುವ ಒಂದೂ ಉದಾಹರಣೆ ಇಲ್ಲ. ಸಾಕಷ್ಟು ಹೋರಾಟ ಮಾಡಿ ನೋಟಿಸ್ ನೀಡುವಂತೆ ಮಾಡಿದಾಗ, ನಮ್ಮ ಕುಟುಂಬಕ್ಕೆ ಎನ್.ಕುಮಾರ್ ಅವರಿಂದ ಕಿರುಕುಳ ಆರಂಭವಾಯಿತು. ಪೊಲೀಸರು ದೂರು ಸ್ವೀಕರಿಸದೇ ಕೈಚೆಲ್ಲಿದರು. ನನ್ನಂತಹ ಒಂದು ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ ವ್ಯಕ್ತಿಗೇ ಇಂತಹ ಪರಿಸ್ಥಿತಿಯಾದರೆ ಸಾಮಾನ್ಯ ಜನತೆಯ ಗತಿಯೇನು? ಎಂದು ಖಾರವಾಗಿ ಪ್ರಶ್ನಿಸಿದರು.

ಹೋರಾಡಲೇ ಬೇಕಿದೆ: ಅಕ್ರಮ ಕಟ್ಟಡ ನಿರ್ಮಾಣದಲ್ಲಿ ಶಾಮೀಲಾಗಿರುವ ಪಾಲಿಕೆ ಅಧಿಕಾರಿಗಳ ವಿರುದ್ಧ ಹೋರಾಟ ಮಾಡಬೇಕಿದೆ. ಇದಕ್ಕೆ ಮೈಸೂರು ನಗರದ ಪ್ರಜ್ಞಾವಂತ ನಾಗರಿಕರು ಕೈಜೋಡಿಸಬೇಕು. ನಮ್ಮ ಈ ಪ್ರಕರಣದಲ್ಲಿ ಪಾಲಿಕೆ ಪರ ವಕೀಲರು ಕೋರ್ಟ್‌ಗೆ ಹಾಜರಾಗಲಿಲ್ಲ. ತಾವೇ ಕೊಟ್ಟಿರುವ ನೋಟಿಸ್ ಪರವಾಗಿ ಮಾತನಾಡಲೂ ಪಾಲಿಕೆ ಅಧಿಕಾರಿಗಳೂ ಕೋರ್ಟ್‌ಗೆ ಬರುವುದಿಲ್ಲವೆಂದರೆ ಏನರ್ಥ? ಎಂದು ಕಿಡಿಕಾರಿದರು. ಕೃಷ್ಣರ ಪುತ್ರ ಕೆ.ಹೇಮಚಂದ್ರ ಮಾತನಾಡಿ, ಪೊಲೀಸರು, ಪಾಲಿಕೆಯವರು ಯಾರೂ ನಮಗೆ ಸಹಕಾರ ನೀಡುತ್ತಿಲ್ಲ. ಇದರಿಂದ ನಾವು ನಿರಂತರ ಕಿರುಕುಳ ಅನುಭವಿಸುತ್ತಿದ್ದೇವೆ. ಬೆದರಿಕೆ ಮಾತ್ರವಲ್ಲದೆ, ಜೀವ ಬೆದರಿಕೆಯೂ ಇದೆ. ಸದರಿ ಎನ್.ಕುಮಾರ್ ತಾನು ಬಿಜೆಪಿ ಕಾರ್ಯಕರ್ತ ಎಂದು ಹೇಳಿಕೊಂಡಿದ್ದು, ಜೊತೆಗೆ ಗುತ್ತಿಗೆದಾರ ಎಂದೂ ಹೇಳಿಕೊಂಡಿದ್ದಾರೆ. ನಮ್ಮ ದೂರಿನನ್ವಯ ನೋಟಿಸ್ ನೀಡಲು ತಡವಾಗಿ ಬಂದ ಅಧಿಕಾರಿಗಳನ್ನು ವಿಳಂಬ ಮಾಡಿದ್ದರ ಬಗ್ಗೆ ಕೇಳಿದಾಗ, ಸಚಿವರ ಕಡೆಯಿಂದ ನೋಟಿಸ್ ನೀಡದಿರಲು ಸೂಚನೆ ಇತ್ತು ಎನ್ನುತ್ತಿದ್ದರು. ಪೊಲೀಸರಿಗೆ ಮೂರು ಬಾರಿ ದೂರು ನೀಡಿದ್ದು, ಪ್ರತಿ ಬಾರಿ ಎನ್‌ಸಿಆರ್ ಮಾಡಿ ಸುಮ್ಮನ್ನಾಗಿದ್ದಾರೆಯೇ ಹೊರತು ಎಫ್‌ಐಆರ್ ಮಾಡಿಲ್ಲ ಎಂದು ದೂರಿದರು. ಕ್ರೀಡಾ ತರಬೇತುದಾರರಾದ ಎಂ.ಯೋಗೇಂದ್ರ, ಸಿ.ಕೆ.ಮುರಳೀಧರ್, ಮೈಸೂರು ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ಕಾರ್ಯದರ್ಶಿ ಮಂಜುನಾಥ್ ಗೋಷ್ಠಿಯಲ್ಲಿದ್ದರು.

ಅನಧಿಕೃತ ನಿರ್ಮಾಣ ತೆರವಿಗೆ ಕೋರ್ಟ್ ತಡೆ

ಜಾರಿ ಮಾಡಲಾಗಿತ್ತು. ನೋಟೀಸ್‌ಗೆ ಸ್ಪಂದಿಸದಿದ್ದರೆ ಗಡುವು ಮುಗಿದ ನಂತರ ಪಾಲಿಕೆ ವತಿಯಿಂದಲೇ ತೆರವುಗೊಳಿಸುವುದಾಗಿ ಎಚ್ಚರಿಕೆ ನೀಡಲಾಗಿತ್ತು. ಅದರಂತೆ ಪಾಲಿಕೆ ವಲಯ ಕಚೇರಿ 3ರ ಸಹಾಯಕ ಆಯುಕ್ತ ಪ್ರಕಾಶ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಸಹಾಯಕ ಅಭಿಯಂತರ ಕೆ.ಮಣಿ ಇತರ ಅಧಿಕಾರಿಗಳ ತಂಡ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಈಗಾಗಲೇ ಗುರುತಿಸಲಾಗಿದ್ದ ಅನಧಿಕೃತ ನಿರ್ಮಾಣ ಭಾಗದ ತೆರವಿಗೆ ಮುಂದಾದರು. ಕಟ್ಟಡದ ಟೆರೇಸ್‌ನಿಂದ ಕಾಂಕ್ರೀಟ್ ಕಟಿಂಗ್ ಮಿಷನ್ ಮೂಲಕ ತೆರವು ಕಾರ್ಯಾಚರಣೆಗೆ ಮುಂದಾಗಲಾಯಿತು. ಅಷ್ಟರಲ್ಲಿ ಮಾದಪ್ಪ ಪರ ವಕೀಲ ಪ್ರಸಾದ್, ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದು, ತೆರವು ಕಾರ್ಯಾಚರಣೆ ನಡೆಸಬಾರದೆಂದು ತಿಳಿಸಿದರು. ಆದರೆ ನ್ಯಾಯಾಲಯದ ಆದೇಶದ ಪ್ರತಿ ದೊರೆತಿಲ್ಲವೆಂದು ತೆರವು ಕಾರ್ಯಾಚರಣೆ ಮುಂದುವರೆಸಲಾಯಿತು. ಕೆಲ ಹೊತ್ತಿನಲ್ಲೇ ನ್ಯಾಯಾಲಯದ ಆದೇಶ ಪ್ರತಿಯನ್ನು ತರಿಸಿದ ವಕೀಲರು ಅದನ್ನು ವಲಯ ಕಚೇರಿ 3ರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿಗೆ ನೀಡಿದರು. ಬಳಿಕ ತೆರವು ಕಾರ್ಯಾಚರಣೆ ಸ್ಥಗಿತಗೊಳಿಸಿ ಪಾಲಿಕೆ ತಂಡ ವಾಪಸ್ಸಾಯಿತು. ಈ ವೇಳೆ ಸರಸ್ವತಿಪುರಂ ಠಾಣೆ ಇನ್‌ಸ್ಪೆಕ್ಟರ್ ಸಿ.ಎಂ.ರವೀಂದ್ರ ಹಾಗೂ ಸಿಬ್ಬಂದಿ ಬಂದೋಬಸ್ತ್ ಮಾಡಿದ್ದರು.

ಈ ಸಂಬಂಧ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಪ್ರತಿಕ್ರಿಯಿಸಿ, ಅನಧಿಕೃತ ನಿರ್ಮಾಣ ತೆರವಿಗೆ ನ.12ರವರೆಗೆ ಗಡುವು ನೀಡಲಾಗಿತ್ತು. ಆದರೆ ಸರಣಿ ರಜೆ ಹಿನ್ನೆಲೆಯಲ್ಲಿ ನಿನ್ನೆ ಮಧ್ಯಾಹ್ನ ಮತ್ತೊಮ್ಮೆ 24 ಗಂಟೆಗಳ ನೋಟೀಸ್ ಅನ್ನು ಕಟ್ಟಡದ ಗೋಡೆಗೆ ಅಂಟಿಸಿದ್ದಲ್ಲದೆ ಪೊಲೀಸರ ಮೂಲಕ ಮಾದಪ್ಪ ಅವರ ಪತ್ನಿಯವರಿಗೂ ತಲುಪಿಸಲಾಗಿತ್ತು. ಅಲ್ಲದೆ ಸಂಜೆ 7 ಗಂಟೆವರೆಗೂ ಅಕ್ರಮ ಭಾಗವನ್ನು ತಾವು ಗುರುತು ಮಾಡಲಾಗಿತ್ತು. ಗಡುವು ಮುಗಿದಿದ್ದರಿಂದ ಇಂದು ಮಧ್ಯಾಹ್ನ ಯಂತ್ರೋಪಕರಣಗಳ ಮೂಲಕ ತೆರವು ಕಾರ್ಯಾಚರಣೆ ಆರಂಭಿಸಲಾಯಿತು. ಆದರೆ ಮೈಸೂರಿನ ಪಿಡಿಜೆ ಮುಂದಿನ ವಿಚಾರಣೆವರೆಗೆ ತಡೆಯಾಜ್ಞೆ ನೀಡಿದ್ದಾರೆ. ಹಾಗಾಗಿ ನಮ್ಮ ಲೀಗಲ್ ಸೆಲ್ ಸಂಪರ್ಕಿಸಿ ಮುಂದುವರೆಯಲಾಗುವುದು ಎಂದು ತಿಳಿಸಿದರು.

ಕುಲಕರ್ಣಿ ಅವರು ಎಂದಿನಂತೆ ನ.4ರಂದು ಮಾನಸಗಂಗೋತ್ರಿ ಆವರಣದಲ್ಲಿ ವಾಯುವಿಹಾರದಲ್ಲಿದ್ದಾಗ ವಾಹನವೊಂದು ಡಿಕ್ಕಿ ಹೊಡೆದು ಪರಾರಿಯಾಗಿತ್ತು. ತೀವ್ರವಾಗಿ ಗಾಯಗೊಂಡಿದ್ದ ಕುಲಕರ್ಣಿ ಅವರು ಕೆಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು. ಪ್ರಾಥಮಿಕವಾಗಿ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ ಎಂದು ವಿವಿ ಪುರಂ ಸಂಚಾರ ಠಾಣೆಯಲ್ಲಿ ಅಪಘಾತ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ನಂತರ ಕುಲಕರ್ಣಿ ಅವರ ಕುಟುಂಬ ಸದಸ್ಯರು ನೀಡಿದ ದೂರಿನ ಮೇರೆಗೆ ಜಯಲಕ್ಷ್ಮಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದಾಗ ಘಟನಾ ಸ್ಥಳದಲ್ಲಿದ್ದ ಸಿಸಿಟಿವಿ ಕ್ಯಾಮರಾ ದೃಶ್ಯಾವಳಿ ಇನ್ನಿತರ ಸಾಕ್ಷ್ಯಾಧಾರದಿಂದ ಉದ್ದೇಶಪೂರ್ವಕವಾಗಿ ಕುಲಕರ್ಣಿ ಅವರನ್ನು ಹತ್ಯೆ ಮಾಡಿರುವುದು ಸ್ಪಷ್ಟವಾಗಿತ್ತು. ಇದರ ಜಾಡು ಹಿಡಿದು ತನಿಖೆ ಮುಂದುವರೆಸಿದ ಪೊಲೀಸರು, ಕುಲಕರ್ಣಿ ಅವರ ಪಕ್ಕದ ಮನೆಯ ಮಾದಪ್ಪನ ಮಗ ಮನು ತನ್ನ ಸ್ನೇಹಿತ ವರುಣ್‌ಗೌಡ ಸಹಾಯದಿಂದ ಕಾರು ಡಿಕ್ಕಿ ಹೊಡೆಸಿ ಕುಲಕರ್ಣಿ ಅವರನ್ನು ಹತ್ಯೆ ಮಾಡಿದ್ದು ತಿಳಿಯಿತು. ಇದಕ್ಕೆ ಸೆಟ್‌ಬ್ಯಾಕ್ ಬಿಡದೆ ಕಟ್ಟಡ ನಿರ್ಮಿಸುತ್ತಿರುವುದರ ವಿರುದ್ಧ ಕುಲಕರ್ಣಿ ಅವರು ಕಾನೂನು ಹೋರಾಟ ನಡೆಸುತ್ತಿದ್ದುದೇ ಕಾರಣವೆಂದು ತಿಳಿದುಬಂದಿತ್ತು.

> **ನ್ಯಾಯಾಲಯ ಮುಂದಿನ ಆದೇಶದವರೆಗೆ ತಡೆಯಾಜ್ಞೆ ನೀಡಿದೆ. ಡಿಸೆಂಬರ್‌ನಲ್ಲಿ ದಿನಾಂಕ ನೀಡಿದ್ದು ಅದಕ್ಕೂ ಮುನ್ನವೇ ತಡೆಯಾಜ್ಞೆ ತೆರವಿಗೆ ಪ್ರಯತ್ನಿಸಲಾಗುವುದು.** –ಲಕ್ಷ್ಮೀ ಕಾಂತ ರೆಡ್ಡಿ, ಆಯುಕ್ತರು ಮೈಸೂರು ನಗರಪಾಲಿಕೆ

ಜನರ ಒಲವು

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಸೇರಿದಂತೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಸಚಿವರಾದ ಆರ್.ಅಶೋಕ್, ಡಾ.ಅಶ್ವತ್ಥ ನಾರಾಯಣ ಅವರುಗಳಿಗೆ ಶೇಕಡ 8 ರಿಂದ 12ರಷ್ಟು ಜನರು ಒಲವು ತೋರಿದ್ದು, ನಂತರದ ಸ್ಥಾನದಲ್ಲಿದ್ದಾರೆ.

ಸಚಿವರಾದ ಗೋವಿಂದ ಕಾರಜೋಳ ಮತ್ತು ಸುಧಾಕರ್‌ಗೆ ಶೇ.4ರಷ್ಟು ಮಾತ್ರ ಜನರ ಒಲವು ದೊರೆತಿರುವುದನ್ನು ಬಿಟ್ಟರೆ, ಬೇರೆ ಯಾವುದೇ ರಾಜಕಾರಣಿ ಮುಖ್ಯಮಂತ್ರಿ ಆಗಬೇಕು ಎಂಬ ಒಲವು ವ್ಯಕ್ತವಾಗಿಸಿಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ. ಕಾಂಗ್ರೆಸ್‌ನಲ್ಲಿ ಹಲವು ಮಂದಿ ಮುಖ್ಯಮಂತ್ರಿಯಾಗಬೇಕು ಎಂದು ಬಯಸಿದ್ದರೂ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರನ್ನು ಮಾತ್ರ ಗುರುತಿಸಿದ್ದಾರೆ. ಜೆಡಿಎಸ್ ಇಡೀ ರಾಜ್ಯದ ತುಂಬೆಲ್ಲಾ ಬೇರೂರಿಲ್ಲ ಎಂಬುದು ತಿಳಿದಿದ್ದರೂ ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾಗಬೇಕು ಎಂಬ ಒಲವು ತೋರಿದ್ದಾರೆ.

ಅಚ್ಚರಿಯೆಂದರೆ ಶಿವಕುಮಾರ್ ಪ್ರತಿನಿಧಿಸುವ ಕನಕಪುರ ಕ್ಷೇತ್ರದಲ್ಲೇ ಕುಮಾರಸ್ವಾಮಿ ಪರ ಶೇ.81ರಷ್ಟು ಒಲವು ತೋರಿದ್ದಾರೆ. ಕ್ಷೇತ್ರದ ಶಾಸಕ ಶಿವಕುಮಾರ್ ಇರಬೇಕು ಎಂದು ಶೇ.63 ರಷ್ಟು ಜನರು ಬಯಸಿದ್ದಾರೆ. ಕರಾವಳಿ ಮತ್ತು ಬಿಜೆಪಿ ಸಂಘಟನೆ ಬಲಾಢ್ಯವಾಗಿರುವ ಕಡೆ ಶೋಭಾ ಕರಂದ್ಲಾಜೆ ಅವರೇ ಮುಖ್ಯಮಂತ್ರಿಯಾಗಬೇಕು ಎಂದು ಹೆಚ್ಚು ಜನರು ಅಪೇಕ್ಷೆ ಪಟ್ಟಿದ್ದಾರೆ. ಅಹಿಂದ ಮತದಾರರು ಹೆಚ್ಚಾಗಿರುವ ಕಡೆಗಳಲ್ಲಿ ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿಯಾಗಬೇಕು ಎಂಬ ಭಾರೀ ಬೆಂಬಲ ದೊರೆತಿದೆ. ರಾಷ್ಟ್ರೀಯ ಪಕ್ಷವೊಂದು ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಯಾರು ಮುಖ್ಯಮಂತ್ರಿ ಆಗಬೇಕು ಎಂಬ ಬಗ್ಗೆ ಖಾಸಗಿ ಸಂಸ್ಥೆ ಮೂಲಕ ನಡೆಸಿರುವ ಸಮೀಕ್ಷೆಯಲ್ಲಿ ಈ ಅಂಶ-ಅಂಕಗಳು ಬಯಲಾಗಿವೆ. ರಾಜ್ಯದ ಉದ್ದಗಲಕ್ಕೂ ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಅವರಿಗೆ ಹೆಚ್ಚು ಒಲವು ವ್ಯಕ್ತವಾಗಿದ್ದರೂ ಬಿಜೆಪಿ ವಿಷಯ ಬಂದಾಗ ಮುಖ್ಯಮಂತ್ರಿ ವಿಚಾರ ಹರಿದು ಹಂಚಿ ಹೋಗಿದೆ.

ಕುತ್ತಿಗೆ ಕೊಯ್ದ ಪಾಗಲ್ ಪ್ರೇಮಿ

ಸಿಬ್ಬಂದಿ, ರೋಗಿಗಳ ಕಡೆಯವರ ಸಮ್ಮುಖದಲ್ಲೇ ಚಾಕುವಿನಿಂದ ಕೊಯ್ದಿದ್ದಾನೆ. ರಕ್ತಸ್ರಾವದಿಂದ ಒದ್ದಾಡುತ್ತಿದ್ದ ಸಹೋದ್ಯೋಗಿ ರಕ್ಷಿಸಲು ಬಂದ ಮತ್ತೋರ್ವ ಮಹಿಳಾ ಸಿಬ್ಬಂದಿ ಹೊಟ್ಟೆ ಭಾಗಕ್ಕೂ ಇರಿದು ಪರಾರಿಯಾಗಲೆತ್ನಿಸಿದ ಆತನನ್ನು ರೋಗಿ ಕಡೆಯವರು ಹಾಗೂ ಆಸ್ಪತ್ರೆ ಭದ್ರತಾ ಸಿಬ್ಬಂದಿ ಸುತ್ತುವರಿದು ಹಿಡಿದಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಕೆ.ಆರ್.ಪ್ರಸಾದ್ ಹಾಗೂ ಸಿಬ್ಬಂದಿ ಆಸ್ಪತ್ರೆಗೆ ತೆರಳಿ, ಮಹಜರು ನಡೆಸಿ ಆರೋಪಿ ಭಗ್ನಪ್ರೇಮಿಯನ್ನು ವಶಕ್ಕೆ ಪಡೆದಿದ್ದಾರೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಸ್ಟಾಫ್ ನರ್ಸ್ ಹಾಗೂ ಮತ್ತೋರ್ವ ಮಹಿಳಾ ಸಿಬ್ಬಂದಿಗೆ ಆಸ್ಪತ್ರೆಯಲ್ಲೇ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ತೀವ್ರ ರಕ್ತಸ್ರಾವವಾಗಿದ್ದು, ಸೂಕ್ತ ಸಮಯಕ್ಕೆ ರಕ್ತ ನೀಡಿ, ಚಿಕಿತ್ಸೆ ನೀಡಿದ್ದರಿಂದ ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ ನಂಜುಂಡಸ್ವಾಮಿಯನ್ನು ಬಂಧಿಸಿರುವ ಪೊಲೀಸರು, ವಿಚಾರಣೆಗೊಳಪಡಿಸಿದ ನಂತರ ಇಂದು ಸಂಜೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಹೆಬ್ಬಾಳು ಠಾಣೆ ಪೊಲೀಸರು ತಿಳಿಸಿದ್ದಾರೆ. ಬೆಳ್ಳಂಬೆಳಗ್ಗೆ ಆಸ್ಪತ್ರೆ ಆವರಣದಲ್ಲೇ ನಡೆದ ಈ ಕೃತ್ಯದಿಂದ ರೋಗಿಗಳು, ಸಂಬಂಧಿಗಳು, ಆಸ್ಪತ್ರೆ ಸಿಬ್ಬಂದಿ ಬೆಚ್ಚಿ ಬಿದ್ದಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬಿರ್ಸಾ ಮುಂಡಾ ಜಯಂತಿ, ಜನಜಾತೀಯ ಗೌರವ ದಿವಸ್ ಹಿನ್ನೆಲೆ

ಮೈಸೂರಲ್ಲಿ ಅನಾವರಣಗೊಂಡ ಆದಿವಾಸಿಗಳ ಸಾಂಸ್ಕೃತಿಕ ವೈಭವ





ಮೈಸೂರು,ನ.15(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಮಂಗಳವಾರ ಮೂಲ ಆದಿವಾಸಿಗಳ ಸಾಂಸ್ಕೃತಿಕ ಸೊಬಗು ಅನಾವರಣಗೊಂಡಿತು. ಬುಡಕಟ್ಟು ಸಮುದಾಯದ 16 ಪಂಗಡಗಳು ತಮ್ಮ ಮೂಲ ಸಾಂಪ್ರದಾಯಿಕ ನೃತ್ಯ ಪ್ರದರ್ಶಿಸಿ ಆದಿವಾಸಿಗಳ ಸಾಂಸ್ಕೃತಿಕ ವೈಭವದ ಪರಿಚಯ ಮಾಡಿಕೊಟ್ಟರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ಮೈಸೂರಲ್ಲಿ ಮಂಗಳವಾರ ಅರಮನೆಯ ಉತ್ತರ ದ್ವಾರದ ಬಳಿ ಆಯೋಜಿಸಿದ್ದ 'ಬಿರ್ಸಾ ಮುಂಡಾ ಜಯಂತಿ' ಮತ್ತು ಜನಜಾತೀಯ ಗೌರವ್ ದಿವಸ್' ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆದಿವಾಸಿಗಳ ವಿವಿಧ ಪಂಗಡಗಳ ಮುಖಂಡರು ಹಾಗೂ ಆದಿವಾಸಿ ಕಲಾವಿದರು ಪಾಲ್ಗೊಂಡು ತಮ್ಮ ಸಂಸ್ಕೃತಿಯನ್ನು ಅನಾವರಣಗೊಳಿಸಿದರು.

ವರ್ಣರಂಜಿತ ಮೆರವಣಿಗೆ: ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ 'ಬಿರ್ಸಾ ಮುಂಡಾ' ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಬಳಿಕ ಬುಡಕಟ್ಟು ಸಮುದಾಯದ ಮೇಲೆ ಬೆಳಕು ಚೆಲ್ಲುವ ಮಾಹಿತಿಯುಳ್ಳ ಸ್ತಬ್ಧಚಿತ್ರದೊಂದಿಗೆ ವಿವಿಧ ಆದಿವಾಸಿ ಪಂಗಡದ ಸಾಂಸ್ಕೃತಿಕ ಕಲಾತಂಡಗಳ ಕಲಾವಿದರು ಪಾಲ್ಗೊಂಡು ಗಮನ ಸೆಳೆದರು. ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾದ ಮೆರವಣಿಗೆ ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿತು.

ಮೆರವಣಿಗೆಯಲ್ಲಿ ಸೋಲಿಗ ಸಮುದಾಯದ ಕಾಟಿ ವೇಷ ತಂಡ(ಮೈಸೂರು), ಕೊಡಗಿನ ಕುಡಿಯ ಸಮುದಾಯ ಊರಟ್ಟಿ ಕೊಟ್ಟು ತಂಡ(ಕೊಡಗು), ದಕ್ಷಿಣ ಕನ್ನಡದ ಕೊರಗ ಸಮುದಾಯ ಜಗಮೇಳ, ಮಂಡ್ಯ ಜಿಲ್ಲೆಯ ನಾಯಕ ಸಮುದಾಯ ಪೂಜಾ ಕುಣಿತ, ಮೈಸೂರಿನ ನಾಯಕ ಸಮುದಾಯ ಚಿಲಿಪಿಲಿ ಗೊಂಬೆ ತಂಡ, ವಿಜಯನಗರ ಜಿಲ್ಲೆಯ ಹರಣ್ ಶಿಕಾರಿ ಸಮುದಾಯದ ತಾಂಷರಾಂಡ ಮೋಲ್ ನೃತ್ಯ, ಉತ್ತರ ಕನ್ನಡದ ಸಿದ್ದಿ ಸಮುದಾಯ ದಾಮಾಮಿ ನೃತ್ಯ, ಉತ್ತರ ಕನ್ನಡದ ಗೌಡಲು ಪಂಗಡದ ಡಕ್ಕೆ ಕುಣಿತ, ರಾಮನಗರ ಜಿಲ್ಲೆಯ ಇರುಳಿಗ ಪಂಗಡದ ಇರುಳಿಗ ನೃತ್ಯ, ಚಿಕ್ಕಮಗಳೂರು ಜಿಲ್ಲೆಯ ಗೌಡಲು ಪಂಗಡದ ಕರಡಿ ಕುಣಿತ, ಚಾಮರಾಜನಗರ ಜಿಲ್ಲೆಯ ಸೋಲಿಗ ಸಮುದಾಯದ ಗೋರುಕಾನ ನೃತ್ಯ, ಮೈಸೂರು ಜಿಲ್ಲೆಯ ಜೇನುಕುರುಬ ಸಮುದಾಯ ಜೇನು ಕುರುಬ ಕೋಲಾಟ ತಂಡ, ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಪಂಗಡದ ವನಸಿರಿ ಕಲಾತಂಡದ ನೃತ್ಯ, ಕೊಡಗು ಜಿಲ್ಲೆಯ ಯರವ ಪಂಗಡದ ಚಿನಿ ತುಡಿ ನೃತ್ಯ, ಚಾಮರಾಜನಗರದ ಸೋಲಿಗ ಪಂಗಡದ ಆದಿವಾಸಿ ವಾಲಗ ನೃತ್ಯ ಹಾಗೂ ವಿಜಯನಗರದ ಕಂಪ್ಲಿಯ ಹರಣ್ ಶಿಕಾರಿ ಪಂಗಡದ ಆದಿವಾಸಿ ಮಹಿಳಾ ಬುಡಕಟ್ಟು ನೃತ್ಯ ತಂಡದ ಕಲಾವಿದರು ಪಾಲ್ಗೊಂಡು ಗಮನ ಸೆಳೆದರು. ಎಲ್ಲಾ ಆದಿವಾಸಿ ಪಂಗಡಗಳ ಜನರು ತಮ್ಮ ಸಾಂಪ್ರದಾಯಿಕ ಉಡುಪಿನೊಂದಿಗೆ ವಿವಿಧ ಸಂಗೀತ ಪರಿಕರಗಳನ್ನು ನುಡಿಸಿ, ಗೀತ ಗಾಯನ, ನೃತ್ಯ ಪ್ರದರ್ಶಿಸುವ ಮೂಲಕ ದಾರಿಯುದ್ದಕ್ಕೂ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಮೆರವಣಿಗೆ ಆರಂಭಕ್ಕೂ ಮುನ್ನ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಹಾಗೂ ಮೆರವಣಿಗೆ ಅಂತ್ಯಗೊಂಡ ಬಳಿಕ ಜಿಲ್ಲಾಧಿಕಾರಿಗಳ ಕಚೇರಿ ಸಮೀಪ ತಮ್ಮ ಸಾಂಪ್ರದಾಯಿಕ ನೃತ್ಯ, ಗೀತೆಗಳ ಗಾಯನದ ಮೂಲಕ ಸಂಭ್ರಮಿಸುವುದರೊಂದಿಗೆ ನಾಡಿನ ಜನರಿಗೆ ಕಾಡಿನ ಸಂಪ್ರದಾಯದ ಪರಿಚಯ ಮಾಡಿಕೊಟ್ಟರು.

ಆದಿವಾಸಿಗಳಿಗೆ ಮೀಸಲಾತಿ: ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ಕಲಾತಂಡಗಳ ಮೆರವಣಿಗೆಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಚಾಲನೆ ನೀಡಿದ ಬಳಿಕ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಸಂದಿದ್ದರೂ ವಿವಿಧೆಡೆ ವಾಸಿಸುತ್ತಿರುವ ಆದಿವಾಸಿಗಳ ಸ್ಥಿತಿ ಶೋಚನೀಯವಾಗಿದೆ. ಆರ್ಥಿಕವಾಗಿ ತೀರಾ ಹಿಂದುಳಿದಿದ್ದಾರೆ. ಬುಡಕಟ್ಟು ಸಮುದಾಯಕ್ಕೆ ವಿವಿಧ ಕಾರ್ಯಕ್ರಮವನ್ನು ಜಾರಿಗೆ ತಂದು ಸಂಕಷ್ಟದಲ್ಲಿರುವ ಆದಿವಾಸಿ ಸಮುದಾಯದ ಜನರ ಆರ್ಥಿಕ ಸ್ಥಿತಿಗತಿ ಸುಧಾರಿಸಲು ಕ್ರಮ ಕೈಗೊಳ್ಳಬೇಕು. ಸರ್ಕಾರ ಎಲ್ಲಾ ಸಮುದಾಯಕ್ಕೂ ಮೀಸಲಾತಿ ನೀಡುತ್ತದೆ. ಆದರೆ, ಆದಿವಾಸಿ ಸಮುದಾಯಕ್ಕೆ ವಿಶೇಷವಾದ ಮೀಸಲಾತಿ ನೀಡಬೇಕು. ಅವರ ದುಸ್ಥಿತಿಯಲ್ಲಿರುವ ಮನೆಗಳ ದುರಸ್ತಿಗೆ ಕ್ರಮ ಕೈಗೊಳ್ಳಬೇಕು. ಆದಿವಾಸಿಗಳು ಉದ್ಧಾರವಾಗಬೇಕು. ಅವರ ಜಮೀನಿಗೆ ಖಾತೆ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಅಶ್ವಿನ್ ಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ಶ್ರೀನಿವಾಸ್, ಉಪ ಮೇಯರ್ ಡಾ.ಜಿ.ರೂಪಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಪಿ.ಎಸ್.ಕಾಂತರಾಜು, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ರಾಜೇಶ್ ಜಿ.ಗೌಡ ಇನ್ನಿತರರು ಪಾಲ್ಗೊಂಡಿದ್ದರು.



ನ.18ರಂದು ಬೆಂಗಳೂರಲ್ಲಿ ರಸ್ತೆ ಸುರಕ್ಷತಾ ಬೈಕಾಥಾನ್‌ಗೆ ಚಾಲನೆ

ನ.19ರಂದು ಮೈಸೂರಿನಿಂದ ಕೊಡಗು ಜಿಲ್ಲೆಗೆ ಪಯಣ



ಮೈಸೂರು,ನ.15(ಪಿಎಂ)–ರೋಟರಿ ಮೈಸೂರು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಹಯೋಗದೊಂದಿಗೆ ಜೀವರಕ್ಷಕ ಟ್ರಸ್ಟ್ ವತಿಯಿಂದ ನ.18, 19 ಮತ್ತು 20ರಂದು ರಸ್ತೆ ಸುರಕ್ಷತಾ ಬೈಕಾಥಾನ್ ಆಯೋಜಿಸಲಾಗಿದೆ ಎಂದು ರೋಟರಿ ಮೈಸೂರು ಅಧ್ಯಕ್ಷ ಎಸ್.ಸುಬ್ರಹ್ಮಣ್ಯರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ಈ ಬೈಕಾಥಾನ್ ಆಯೋಜಿಸಲಾಗಿದೆ. 2018ರಲ್ಲಿ ಈ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಈ ಬಾರಿ ಬೆಂಗಳೂರು, ಮೈಸೂರು, ಮಂಗಳೂರು, ಕೊಡಗು ಭಾಗಗಳಲ್ಲಿ ಬೈಕಾಥಾನ್ ನಡೆಯಲಿದೆ ಎಂದರು.

ನ.18ರಂದು ಬೆಳಗ್ಗೆ 7.30ಕ್ಕೆ ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ ಚಾಲನೆ ದೊರೆಯಲಿದೆ. ಬೈಕ್‌ಗಳ ಜೊತೆಗೆ ಕೆಲವು ವಿಂಟೇಜ್ ಕಾರುಗಳು ಇರಲಿವೆ. ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಡಾ.ಅರುಂಧತಿ ಚಂದ್ರಶೇಖರ್ ಚಾಲನೆ ನೀಡಲಿದ್ದಾರೆ. ನಂತರ ಬೈಕಾಥಾನ್ ಬೆಳಗ್ಗೆ 9ಕ್ಕೆ ಬೆಂಗಳೂರಿನ ದಯಾನಂದ ಸಾಗರ್ ವಿವಿ ಆವರಣ ತಲುಪಲಿದೆ. ಬಳಿಕ ಇಲ್ಲಿ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ನಂತರ ಸಂಜೆ 6.30ಕ್ಕೆ ಮೈಸೂರಿನ ತಲುಪಿ, ಬ್ಯಾಕ್‌ಯಾರ್ಡ್ ರೆಸ್ಟೋರೆಂಟ್‌ನಲ್ಲಿ ಕ್ಯಾಂಪ್ ಫೈರ್ ನಡೆಸಲಾಗುವುದು. ನ.19 ರಂದು ಬೆಳಗ್ಗೆ 7.30ಕ್ಕೆ ಸೆಂಟ್ ಜೋಸೆಫ್ ನರ್ಸಿಂಗ್ ಕಾಲೇಜು ಆವರಣ ತಲುಪಿ, ಇಲ್ಲಿ ಅರಿವು ಕಾರ್ಯಕ್ರಮ ನಡೆಸಲಾಗುವುದು. ಬಳಿಕ ಬೆಳಗ್ಗೆ 8ಕ್ಕೆ ಮೈಸೂರು ಅರಮನೆ ಎದುರು ಬೈಕಾಥಾನ್‌ನ ಮುಂದಿನ ಪಯಣಕ್ಕೆ ಡಿಸಿಪಿ ಗೀತಾ ಪ್ರಸನ್ನ ಚಾಲನೆ ನೀಡಲಿದ್ದಾರೆ. ಮೈಸೂರಿನಿಂದ ಆರಂಭಗೊಳ್ಳುವ ಪಯಣಕ್ಕೆ ಮೈಸೂರಿನ ಹಲವು ರೈಡರ್ ಕ್ಲಬ್‌ಗಳ ಸದಸ್ಯರು ಸೇರಿಕೊಳ್ಳಲಿದ್ದಾರೆ ಎಂದು ಹೇಳಿದರು.

ಇದೇ ವೇಳೆಗೆ ಮಂಗಳೂರಿನಿಂದ ಅಲ್ಲಿನ ರೋಟರಿ, ರೋಟರ್‍ಯಾಟ್ ಮತ್ತು ವೈದ್ಯರ ತಂಡಗಳು ಬೈಕಾಥಾನ್ ಮೂಲಕ ಮಡಿಕೇರಿ ನಗರಕ್ಕೆ ಬರಲಿವೆ. ಬೆಳಗ್ಗೆ 11ಕ್ಕೆ ಕೊಡಗು ಜಿಲ್ಲೆಯ ಗೋಣಿಕೊಪ್ಪ ತಲುಪುವ ಬೈಕಾಥಾನ್, 12.30ಕ್ಕೆ ವಿರಾಜಪೇಟೆಯ ರೋಟರಿ ಶಾಲೆ ಆವರಣಕ್ಕೆ ತೆರಳಲಿದೆ. ಇಲ್ಲಿ ರಸ್ತೆ ಸುರಕ್ಷತೆ ಸಂಬಂಧ ಬೀದಿ ನಾಟಕ ಪ್ರದರ್ಶನ ಇರಲಿದೆ. ಮಧ್ಯಾಹ್ನ 3.30ಕ್ಕೆ ಮಡಿಕೇರಿಯ ಹಳೇ ಬಸ್ ನಿಲ್ದಾಣದ ಬಳಿಗೆ ಬೈಕಾಥಾನ್ ತಲುಪಲಿದ್ದು, ಇಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲಾಗುವುದು. ನಂತರ ನ.20 ರಂದು ಬೆಳಗ್ಗೆ 9.30ಕ್ಕೆ ಮಡಿಕೇರಿಯಿಂದ ತೆರಳಿ, ಮಧ್ಯಾಹ್ನ 12.30ಕ್ಕೆ ಕುಶಾಲನಗರಕ್ಕೆ ಆಗಮಿಸಿ, ಇಲ್ಲಿಯೂ ಜಾಗೃತಿ ಕಾರ್ಯಕ್ರಮ ನಡೆಸಿ, ಅಂತಿಮವಾಗಿ ಮೈಸೂರು ತಲುಪಿ ಬೈಕಾಥಾನ್ ಅಂತ್ಯಗೊಳ್ಳಲಿದೆ ಎಂದು ವಿವರಿಸಿದರು.

ಮಂಗಳೂರು, ಬೆಂಗಳೂರು, ಮೈಸೂರಿನಿಂದ ಹೊರಡುವ ಸವಾರರು ಕೊಡಗು ಜಿಲ್ಲೆಯಲ್ಲಿ ಒಟ್ಟಾಗಿ ಸೇರಿಕೊಳ್ಳಲಿದ್ದಾರೆ. ಈಗಾಗಲೇ ಒಟ್ಟು 200 ಮಂದಿ ಬೈಕಾಥಾನ್‌ನಲ್ಲಿ ಪಾಲ್ಗೊಳ್ಳಲು 200 ರೂ. ಶುಲ್ಕದೊಂದಿಗೆ ನೋಂದಣಿ ಮಾಡಿಕೊಂಡಿದ್ದಾರೆ. ಭಾಗವಹಿಸಲಿಚ್ಛಿಸುವವರಿಗೆ ಈಗಲೂ ಅವಕಾಶವಿದ್ದು, ಅದಕ್ಕಾಗಿ ನ.16ರ ಸಂಜೆ 5ರೊಳಗೆ ಆರ್.ಕೆ.ನಿಖಿಲ್ ಅವರ ಮೊ.ಸಂ. 77609 38873 ಸಂಪರ್ಕಿಸಬಹುದು ಎಂದರು. ರೋಟರಿ ಮೈಸೂರು ಮಾಜಿ ಅಧ್ಯಕ್ಷ ಎಸ್.ಮಂಜೇಶ್‌ಕುಮಾರ್, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಿಇಓ ಡಾ.ಕುಮಾರ್, ಜೀವರಕ್ಷಾ ಟ್ರಸ್ಟ್‌ನ ಮೈಸೂರು ವಿಭಾಗದ ಮುಖ್ಯಸ್ಥೆ ಡಾ.ರೇಖಾ ಷಣ್ಮುಖ, ರೋಟರಿ ಸದಸ್ಯರಾದ ಆರ್.ಕೆ.ನಿಖಿಲ್, ಪ್ರವೀಣ್ ಗೋಷ್ಠಿಯಲ್ಲಿದ್ದರು.

ಡಯಾಬಿಟಿಸ್ ರಿಸರ್ಚ್ ಫೌಂಡೇಷನ್ ಅಸ್ತಿತ್ವಕ್ಕೆ

ಮೈಸೂರು,ನ.15(ಪಿಎಂ)– ಹೆಬ್ಬಾಳಿನ ರಿವೈವ್ ಆಸ್ಪತ್ರೆಯಲ್ಲಿ ರಿವೈವ್ ಡಯಾಬಿಟಿಸ್ ರಿಸರ್ಚ್ ಫೌಂಡೇಷನ್ ಅಸ್ತಿತ್ವಕ್ಕೆ ತರಲಾಗಿದೆ ಎಂದು ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ವಿ.ಮೋಹನ್ ಕುಮಾರ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ



ಮಾತನಾಡಿದ ಅವರು, ಸೋಮವಾರ ಆಸ್ಪತ್ರೆಯಲ್ಲಿ ವಿಶ್ವ ಮಧುಮೇಹ ದಿನ ಆಚರಿಸಲಾಯಿತು. ಇದೇ ವೇಳೆ ರಿವೈವ್ ಡಯಾಬಿಟಿಸ್ ರಿಸರ್ಚ್ ಫೌಂಡೇಷನ್ ಉದ್ಘಾಟಿಸಲಾಯಿತು. ಮಧುಮೇಹದ ಬಗ್ಗೆ ಸಂಶೋಧನೆ ನಡೆಸುವ ಉದ್ದೇಶ, ಮಧುಮೇಹ ರೋಗಿಗಳಿಗೆ ಉಚಿತ ಆಪ್ತ ಸಮಾಲೋಚನೆ ಹಾಗೂ ಟೈಪ್ 1 ಮಧುಮೇಹ ಹೊಂದಿರುವ ಮಕ್ಕಳಿಗೆ ಉಚಿತ ಇನ್ಸುಲಿನ್ ನೀಡುವ ಉದ್ದೇಶದಡಿ ಈ ಫೌಂಡೇಷನ್ ಆರಂಭಿಸಲಾಗಿದೆ ಎಂದರು. ಆಸ್ಪತ್ರೆ ನಿರ್ದೇಶಕ ಪವನ್‌ನಾಗ್, ಆಪ್ತ ಸಮಾಲೋಚಕ ಪ್ರಭುದೇವ ಗೋಷ್ಠಿಯಲ್ಲಿದ್ದರು.

ನ.17, 18ರಂದು ವಿಟಿಯು ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿ



ಮೈಸೂರು,ನ.15(ಪಿಎಂ)– ಮೈಸೂರ್ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ವತಿಯಿಂದ ನ.17 ಮತ್ತು 18ರಂದು ವಿಟಿಯು ಪ್ರಾಯೋಜಕತ್ವದ ವಿಟಿಯು ಮೈಸೂರು ವಿಭಾಗದ ಅಂತರ ಕಾಲೇಜು ಪುರುಷರ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಎಸ್.ಪ್ರಭುಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಹಳ್ಳಿಯಲ್ಲಿರುವ ಕಾಲೇಜಿನ ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದೆ. ಈ ಸಂಬಂಧ ಈಗಾಗಲೇ ವಿಭಾಗದ ಎಲ್ಲಾ ಕಾಲೇಜುಗಳಿಗೆ ಮಾಹಿತಿ ನೀಡಲಾಗಿದೆ. ಆದಾಗ್ಯೂ ಮಾಹಿತಿ ತಲುಪದಿದ್ದರೆ ಮೊ.ಸಂ. 97433 49231 ಅನ್ನು ಸಂಪರ್ಕಿಸಬಹುದು. ಈ ಪಂದ್ಯಾವಳಿಯ ವಿಜೇತ ತಂಡಕ್ಕೆ ವಲಯ ಮಟ್ಟದ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಅವಕಾಶ ಲಭ್ಯವಾಗಲಿದೆ ಎಂದರು. ಕಾಲೇಜಿನ ಬೋಧಕ ವರ್ಗದವರಾದ ಚೇತನ್, ಡಾ.ಪಿ.ರವಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ನ.22, 23ರಂದು ಎಲ್ಲಾ ಕಾಲೇಜುಗಳಲ್ಲಿ

'ಪ್ರಜಾಪ್ರಭುತ್ವಕ್ಕಾಗಿ ಒಂದು ಗಂಟೆ' ಯುವ ಮತದಾರರ ನೋಂದಣಿ ಅಭಿಯಾನ

ಮೈಸೂರು, ನ.15(ಆರ್‌ಕೆ)ಯುವ ಮತದಾರರ ನೋಂದಣಿಗಾಗಿ ನವೆಂಬರ್ 22 ಮತ್ತು 23ರಂದು ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ 'ಪ್ರಜಾಪ್ರಭುತ್ವಕ್ಕಾಗಿ ಒಂದು ಗಂಟೆ' ವಿಶೇಷ ಅಭಿಯಾನ ನಡೆಸುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಇಂದಿಲ್ಲಿ ತಿಳಿಸಿದ್ದಾರೆ.



ಜಿಲ್ಲಾಧಿಕಾರಿ ಡಾ. ಕೆವಿರಾಜೇಂದ್ರ ಅವರು ಮಂಗಳವಾರ ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಪಿಯು ಕಾಲೇಜು ಪ್ರಾಂಶುಪಾಲರೊಂದಿಗೆ ಸಭೆ ನಡೆಸಿದರು.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಪಿಯು ಮತ್ತು ಪದವಿ ಕಾಲೇಜುಗಳ ಪ್ರಾಂಶುಪಾಲರು ಹಾಗೂ ನೋಡಲ್ ಅಧಿಕಾರಿಗಳ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಅರ್ಹ ಯುವ ಮತದಾರರ ನೋಂದಣಿ ಹೆಚ್ಚಿಸಲು ಹಾಗೂ ಮತದಾರರ ಪಟ್ಟಿಯಿಂದ ಯುವ ಮತದಾರರ ಹೆಸರು ಕೈಬಿಟ್ಟು ಹೋಗದಂತೆ ಕ್ರಮ ವಹಿಸಬೇಕು ಎಂದರು.

ಅದಕ್ಕಾಗಿ ಜಿಲ್ಲೆಯ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಪಿಯು ಹಾಗೂ ಪದವಿ ಕಾಲೇಜುಗಳಲ್ಲಿ ನವೆಂಬರ್ 22 ಮತ್ತು 23 ರಂದು 'ಪ್ರಜಾಪ್ರಭುತ್ವಕ್ಕಾಗಿ ಒಂದು ಗಂಟೆ' ಎಂಬ ಯುವ ಮತದಾರರ ವಿಶೇಷ ನೋಂದಣಿ ಅಭಿಯಾನ ನಡೆಸಬೇಕೆಂದು ತಿಳಿಸಿದರು.

ಯುವಕ-ಯುವತಿಯರು ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಕೊಳ್ಳಲು ತಮ್ಮ ಮೊಬೈಲ್‌ಗಳಲ್ಲಿ ಓಟರ್ಸ್ ಹೆಲ್ಪ್‌ಲೈನ್ ಆ್ಯಪ್‌ನಲ್ಲಿ ಅವಕಾಶವಿದ್ದು, ಆ ಮೂಲಕ ಮುಂದಿನ ಚುನಾವಣೆಯ ಮತದಾನದಲ್ಲಿ ಭಾಗವಹಿಸುವಂತೆ ಯುವ ಮತದಾರರನ್ನು ಪ್ರೇರೇಪಿಸಬೇಕೆಂದು ಜಿಲ್ಲಾಧಿಕಾರಿಗಳು ಪ್ರಾಂಶುಪಾಲರಿಗೆ ಸೂಚನೆ ನೀಡಿದರು. ಅಡಿಷನಲ್ ಡಿಸಿ ಡಾ. ಮಂಜುನಾಥ ಸ್ವಾಮಿ, ಚುನಾವಣಾ ತಹಸೀಲ್ದಾರ್ ರಾಮಪ್ರಸಾದ್ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಗುಂಬಜ್ ರೀತಿಯ ಬಸ್‌ನಿಲ್ದಾಣ ತೆರವಿಗೆ ಆಗ್ರಹಿಸಿ ಏಕಾಂಗಿ ಧರಣಿ

ಮೈಸೂರು, ನ.15(ಆರ್‌ಕೆಬಿ)– ಮೈಸೂರಿನ ಊಟಿ ರಸ್ತೆಯಲ್ಲಿನ ಜೆಎಸ್‌ಎಸ್ ಕಾಲೇಜು ಬಳಿ ಬಸ್ ನಿಲ್ದಾಣದ ಮೇಲೆ ನಿರ್ಮಿಸಿರುವ ಗುಂಬಜ್ ತೆರವುಗೊಳಿಸಬೇಕೆಂದು ಒತ್ತಾಯಿಸಿ, ಹಿಂದೂ ಕಾರ್ಯಕರ್ತ ವಿಕಾಸ್ ಶಾಸ್ತ್ರಿ ಏಕಾಂಗಿ ಪ್ರತಿಭಟನೆ ನಡೆಸಿದರು.



ಚಾಪೆ ಹಾಸಿ ಕುಳಿತು ಏಕಾಂಗಿ ಧರಣಿ ನಡೆಸಿದ ಅವರು ಬಸ್ ನಿಲ್ದಾಣದ ಶೆಲ್ಟರ್ ಗುಂಬಜ್ ಮಾದರಿಯಲ್ಲಿದೆ. ರಾತ್ರೋರಾತ್ರಿ ಗುಂಬಜ್‌ಗೆ ಕಳಸ ಹಾಕುವ ಮೂಲಕ ತೇಪೆ ಹಚ್ಚುವ ಕೆಲಸಕ್ಕೆ ಮುಂದಾಗಿದ್ದಾರೆ. ನಾವು ಪಾಕಿಸ್ತಾನದಲ್ಲಿ ಅಥವಾ ಭಾರತದಲ್ಲಿದ್ದೇವೆಯೇ ಎಂಬ ಅನುಮಾನ ಮೂಡುತ್ತಿದೆ. ಸಾರ್ವಜನಿಕ ವಲಯದಲ್ಲಿರುವ ಬಸ್ ನಿಲ್ದಾಣವನ್ನು ಹೇಗೆ ಮಸೀದಿಯ ರೀತಿ ಕಟ್ಟುತ್ತೀರಿ? ಎಂದು ವಿವೇಕ ಕೊಠಡಿಯ ಬಗ್ಗೆ ಬಾಯಿ ಬಡಿದು ಕೊಳ್ಳುವ ಬುದ್ಧಿ ಜೀವಿಗಳ ಬಗ್ಗೆ ಟೀಕಿಸಿದರು. ವಾರದೊಳಗೆ ತೆರವುಗೊಳಿಸದಿದ್ದರೆ ಎಲ್ಲಾ ಹಿಂದೂಪರ ಸಂಘಟನೆಗಳು ಸೇರಿ ಧ್ವಂಸ ಮಾಡಬೇಕಾಗುತ್ತದೆ. ಬಾಬರಿ ಮಸೀದಿಯನ್ನೇ ಉರುಳಿಸಿದ ನಮಗೆ ಈ ಬಸ್ ನಿಲ್ದಾಣ ದೊಡ್ಡದಲ್ಲ. ಸ್ಥಳೀಯ ಶಾಸಕರು, ನಗರಪಾಲಿಕೆ ಅಧಿಕಾರಿಗಳು ಕೂಡಲೇ ಇದರ ತೆರವಿಗೆ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದರು.

ಪಾಲಿಕೆ ಅದಾಲತ್: ಎರಡು ದಿನ ಸೇರಿ ಕೇವಲ 55 ಅರ್ಜಿ ಸಲ್ಲಿಕೆ

ಮೊದಲ ದಿನ 19, ಎರಡನೇ ದಿನ 36 ಅಹವಾಲು ಮಂಡನೆ

ಮೈಸೂರು, ನ.15(ಆರ್‌ಕೆಬಿ)– ಈಗಾಗಲೇ ನಗರಪಾಲಿಕೆ ಮತ್ತು ವಲಯ ಕಚೇರಿಗಳಲ್ಲಿ ಅರ್ಜಿ ಸಲ್ಲಿಸಿ ಕೆಲಸ ಆಗದಿರುವವರಿಗಾಗಿ ಕುಂದು ಕೊರತೆಗಳ ತ್ವರಿತ ಪರಿಹಾರ ಮತ್ತು ಮೈಸೂರಿನ ನಿವಾಸಿಗಳಿಗೆ ಸರ್ಕಾರಿ ಸೇವೆಗಳನ್ನು ತಲುಪಿಸುವ ಗುರಿಯೊಂದಿಗೆ ಆರಂಭಿಸಿರುವ 'ಪಾಲಿಕೆ ಅದಾಲತ್'ಗೆ 2ನೇ ದಿನವಾದ ಮಂಗಳವಾರವೂ ಸಾರ್ವಜನಿಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಮೈಸೂರು ನಗರಪಾಲಿಕೆಯು ನಿನ್ನೆಯಿಂದ ಪಾಲಿಕೆ ಅದಾಲತ್ ಆರಂಭಿಸಿದ್ದು, ಖಾತಾ ನೋಂದಣಿ, ಖಾತೆ ವರ್ಗಾವಣೆ, ಆಶ್ರಯ ವಸತಿ ಯೋಜನೆ, ವಾಣಿಜ್ಯ ಪರವಾನಗಿ ನೀಡುವಿಕೆ, ಕಟ್ಟಡ ಯೋಜನೆಗಳ ಅನುಮೋದನೆ, ಕಟ್ಟಡಗಳಿಗೆ ಪೂರ್ಣಗೊಂಡ ವರದಿ, ಜನನ ಮರಣ ಪ್ರಮಾಣ ಪತ್ರ ಇತ್ಯಾದಿ ಕುರಿತು ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ, ಕುಂದುಕೊರತೆಗಳ ಪರಿಹಾರಕ್ಕಾಗಿ ಪಾಲಿಕೆ ಆವರಣದಲ್ಲಿ ಐದು ಕೌಂಟರ್‌ಗಳನ್ನು ಸ್ಥಾಪಿಸಿದೆ.



ನ.19 ರವರೆಗೆ ಬೆಳಗ್ಗೆ 11 ರಿಂದ ಸಂಜೆ 4.30 ರವರೆಗೆ ನಡೆಯುವ ಪಾಲಿಕೆ ಅದಾಲತ್‌ನಲ್ಲಿ 2ನೇ ದಿನವಾದ ಮಂಗಳವಾರ ಮಧ್ಯಾಹ್ನ 1 ಗಂಟೆಯವರೆಗೆ ಕೇವಲ 11 ಅರ್ಜಿಗಳು ಮಾತ್ರ ಸಲ್ಲಿಕೆಯಾಗಿದ್ದವು. ದಿನದ ಕೊನೆಗೆ ಒಟ್ಟು 36 ಅರ್ಜಿಗಳು ಸ್ವೀಕೃತವಾದವು. ನಿನ್ನೆಯ 19 ಅರ್ಜಿಗಳು ಸೇರಿದಂತೆ ಇದುವರೆಗೆ ಒಟ್ಟು 55 ಅರ್ಜಿಗಳು ಸ್ವೀಕೃತಗೊಂಡಿವೆ.

ಕಂದಾಯ ಶಾಖೆಯಲ್ಲಿ 17, ನಗರ ಯೋಜನ ಶಾಖೆಯಲ್ಲಿ 3, ಆಶ್ರಯ ಶಾಖೆಯಲ್ಲಿ 15, ಅಭಿವೃದ್ಧಿ ಮತ್ತು ತಾಂತ್ರಿಕ ಶಾಖೆಯಲ್ಲಿ 10, ಒಳಚರಂಡಿ ವಿಭಾಗ ಮತ್ತು ವಾಣಿವಿಲಾಸ ನೀರು ಸರಬರಾಜು ಕೇಂದ್ರ ಶಾಖೆಯಲ್ಲಿ 4, ಇತರೆ 6 ಅರ್ಜಿಗಳು ಸ್ವೀಕೃತಗೊಂಡಿವೆ. ಲೆಕ್ಕಪತ್ರ ಮತ್ತು ಆಡಳಿತ ಶಾಖೆ ಹಾಗೂ ಆರೋಗ್ಯ ಶಾಖೆಯಲ್ಲಿ ಯಾವುದೇ ಅರ್ಜಿ ಸಲ್ಲಿಕೆಯಾಗಿಲ್ಲ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ನ.19 ರಂದು ಮುಕ್ತಾಯಗೊಳ್ಳುವ ಅದಾಲತ್‌ನಲ್ಲಿ ಸ್ವೀಕರಿಸಿದ ಅರ್ಜಿಗಳಿಗೆ ನ.27ರೊಳಗೆ ಅರ್ಜಿದಾರರಿಗೆ ತೆಗೆದುಕೊಂಡ ಕ್ರಮ ಅಥವಾ ಸ್ಥಿತಿ, ಸಮಸ್ಯೆಯ ಪರಿಹಾರದ ಕುರಿತು ಪತ್ರಗಳನ್ನು ಕಳುಹಿಸಲಾಗುವುದು. ಅರ್ಜಿದಾರರು ತಮ್ಮ ದೂರು ಪರಿಹಾರಗಳ ಬಗ್ಗೆ ತೃಪ್ತರಾಗದಿದ್ದರೆ, ನ.30ರಂದು ನಡೆಯುವ ಅಂತಿಮ ಅದಾಲತ್‌ನಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ.

ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೆಂದು ನಾಮಕರಣ ಮಾಡಿದ್ದು ನಾನು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ



ಕೆ.ಆರ್.ನಗರ, ನ.15– ಮುಖ್ಯಮಂತ್ರಿಯಾಗಿದ್ದ ವೇಳೆ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಜಾರಿಗೆ ತಂದು ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ನಾಮಕರಣ ಮಾಡಿದ್ದು ನಾನೇ, ಜೊತೆಗೆ ಶಾಸಕರ ಭವನದಲ್ಲಿ ಮಹರ್ಷಿ ವಾಲ್ಮೀಕಿ ಮತ್ತು ಕನಕದಾಸರ ಪುತ್ಥಳಿ ಪ್ರತಿಷ್ಠಾಪಿಸಿದ್ದು ನನ್ನ ಅಧಿಕಾರವಧಿಯಲ್ಲೇ, ಪುತ್ಥಳಿಗಳಿಗೆ ಕೇವಲ ಮಾಲಾರ್ಪಣೆ ಮಾಡುವ ಬಿಜೆಪಿಯವರು ನಾವೇ ಎಲ್ಲವನ್ನು ಮಾಡಿದ್ದೇವೆ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ತಾಲೂಕಿನ ತಿಪ್ಪೂರು ಗ್ರಾಮದ ಉಪ್ಪಾರ ಸಮುದಾಯ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ನೂತನ ಶ್ರೀಭಗೀರಥ ಉಪ್ಪಾರ ಸಮುದಾಯ ಭವನ ಉದ್ಘಾಟಿಸಿ ಅವರು ಮಾತನಾಡಿದರು.

ಸೋಲಿಸಲು ವಿರೋಧಿಗಳ ಕಾತರ: ಹಿಂದುಳಿದ ವರ್ಗದವರು ಹಾಗೂ ಸಾಮಾಜಿಕ ನ್ಯಾಯದ ಪರವಿರುವ ನನ್ನನ್ನು ಚುನಾವಣೆಯಲ್ಲಿ ಸೋಲಿಸಲು ವಿರೋಧ ಪಕ್ಷಗಳು, ನನ್ನ ವಿರೋಧಿಗಳು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಆದರೆ ಗೆಲ್ಲಿಸಲು ನಿಮ್ಮಂತಹ ಬಡವರು, ಹಿಂದುಳಿದವರು, ಪರಿಶಿಷ್ಟ ವರ್ಗದವರು, ದಲಿತರು, ಶೋಷಿತರು, ಅಲ್ಪಸಂಖ್ಯಾತರು ನನ್ನ ಪರ ಇದ್ದಾರೆ. ಇದಕ್ಕಿಂತ ಇನ್ನೇನು ಬೇಕು ಎಂದರು.

ಸಮಾಜದ ಎಲ್ಲರಿಗೂ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದ ಮಾಜಿ ಪ್ರಧಾನಿ ಡಾ.ಮನಮೋಹನ್‌ಸಿಂಗ್ ಅಧಿಕಾರವಧಿಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದ ಕೇಂದ್ರ ಸರ್ಕಾರ ಕಡ್ಡಾಯ ಶಿಕ್ಷಣ ಹಕ್ಕು ಜಾರಿಗೆ ತಂದಿದ್ದು, ಎಲ್ಲರೂ ಶಿಕ್ಷಿತರಾಗಬೇಕು. ಆಗ ಮಾತ್ರ ಸಮಾನತೆಯ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು.

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸುವಂತೆ ಮನವಿ ಮಾಡಿದ ಸಿದ್ದರಾಮಯ್ಯನವರು, ಕೆ.ಆರ್.ನಗರ ತಾಲೂಕಿನ ಎಲ್ಲಾ ಸಮಾಜದ ಸಮುದಾಯ ಭವನಗಳಿಗೂ ಅನುದಾನ ನೀಡಿದ್ದು, ಮುಂದೆ ನಮ್ಮ ಅಧಿಕಾರಾವಧಿಯಲ್ಲಿ ಉಳಿದ ತಾಲೂಕಿನ ಎಲ್ಲಾ ಸಮುದಾಯ ಭವನಗಳಿಗೂ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಮುಂಬರುವ ಚುನಾವಣೆಯಲ್ಲಿ ಕೆ.ಆರ್.ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಡಿ.ರವಿಶಂಕರ್ ಸ್ಪರ್ಧಿಸಲಿದ್ದಾರೆ ಎಂದು ಸಿದ್ದರಾಮಯ್ಯ ಘೋಷಿಸುತ್ತಿದ್ದಂತೆಯೇ ಕಾರ್ಯಕರ್ತರು, ಮುಖಂಡರು ಹಾಗೂ ಉಪ್ಪಾರರ ಸಮುದಾಯದ ಸ್ವಾಮೀಜಿಗಳು ಹೆಚ್.ಎನ್.ವಿಜಯ್ ಅವರನ್ನು ಹಾಸನ ಜಿಲ್ಲೆಯ ಅರಕಲಗೂಡು ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂದು ಘೋಷಣೆ ಮಾಡುವಂತೆ ಒತ್ತಾಯಿಸಿದರು. ಇದಕ್ಕೆ ಒಪ್ಪದ ಸಿದ್ದರಾಮಯ್ಯ, ಕಾಂಗ್ರೆಸ್ ಹೈಕಮಾಂಡ್, ಕೆಪಿಸಿಸಿ ಮತ್ತು ಕೇಂದ್ರ ಚುನಾವಣಾ ಸಮಿತಿ ಈ ಬಗ್ಗೆ ನಿರ್ಧರಿಸುತ್ತದೆ ಎಂದು ಹಾರಿಕೆ ಉತ್ತರ ನೀಡಿ ಜಾರಿಕೊಂಡರು.

ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಮಾತನಾಡಿ, ಸಿದ್ದರಾಮಯ್ಯನವರ ಅಧಿಕಾರವಧಿಯಲ್ಲಿ ಕ್ಷೇತ್ರದ ವಿವಿಧ ಸಮುದಾಯ ಭವನಗಳ ಕಾಮಗಾರಿಗೆ ಅನುದಾನ ನೀಡಿರುವ ಜೊತೆಗೆ ದೆಗ್ಗನಹಳ್ಳಿ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಲು ಕಾರಣರಾಗಿದ್ದು, ಇದರಿಂದ ಕೆ.ಆರ್.ನಗರ ಮತ್ತು ಮಂಡ್ಯ ಜಿಲ್ಲೆಗೆ ಸಂಪರ್ಕ ಕಲ್ಪಿಸಲಾಗಿದೆ ಇದಕ್ಕಾಗಿ ವಿರೋಧ ಪಕ್ಷದ ನಾಯಕರಿಗೆ ಕ್ಷೇತ್ರದ ಜನತೆಯ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನ ಭಗೀರಥ ಪೀಠಾಧ್ಯಕ್ಷ ಶ್ರೀಪುರುಷೋತ್ತಮಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು ಮಹಾನಗರ ಪಾಲಿಕೆ ಉಪ ಮಹಾಪೌರರಾದ ಡಾ.ರೂಪ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್. ವಿಜಯಕುಮಾರ್, ಮಾಜಿ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಜಗನ್ನಾಥ್ ಸಾಗರ್, ಉಪ್ಪಾರರ ಅಭಿವೃದ್ಧಿ ನಿಗಮದ ಅಧ್ಯಕ್ಷ ಗಿರೀಶ್ ಮಾತನಾಡಿದರು.

ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಗಿರೀಶ್ ಉಪ್ಪಾರ್, ಗ್ರಾಪಂ ಅಧ್ಯಕ್ಷೆ ಅನುಸೂಯ, ಕೆಪಿಸಿಸಿ ಕಾರ್ಯಕಾರಣಿ ಸದಸ್ಯ ದೊಡ್ಡಸ್ವಾಮೀಗೌಡ, ತಾ.ಉಪ್ಪಾರ ಸಂಘದ ಅಧ್ಯಕ್ಷ ಡಿ.ತಮ್ಮಯ್ಯ, ತಾಪಂ ಮಾಜಿ ಅಧ್ಯಕ್ಷ ಹೆಚ್.ಟಿ. ಮಂಜುನಾಥ್, ಮಹದೇವಸ್ವಾಮಿ, ಮಾಜಿ ಸದಸ್ಯ ಎ.ಟಿ.ಗೋವಿಂದೇಗೌಡ, ಗ್ರಾಪಂ ಉಪಾಧ್ಯಕ್ಷ ಶಿವಣ್ಣ, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ತಾ.ಶರಣು ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಕುಮಾರ್, ರಾಜ್ಯ ಕುಕ್ಕುಟ ನಿರ್ದೇಶಕ ಎಸ್.ಸಿದ್ದೇಗೌಡ, ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಟಿ.ರಾಜೇಗೌಡ, ಕಾರ್ಯದರ್ಶಿ ರವಿಕುಮಾರ್, ಸಹ ಕಾರ್ಯದರ್ಶಿ ಟಿ.ಎಸ್.ಸಂತೋಷ್, ಸೇರಿದಂತೆ ಗ್ರಾಮದ ಮುಖಂಡರಿದ್ದರು.

> ಹಿಂದುಳಿದ ವರ್ಗಗಳಿಗೆ ರಾಜಕೀಯ ಅಧಿಕಾರ ನೀಡಬೇಕೆಂಬ ಸದುದ್ದೇಶದಿಂದ 1994ರಲ್ಲಿ ಹಣಕಾಸು ಸಚಿವನಾಗಿದ್ದಾಗ ಬಿಸಿಎ (ಎ) ಮತ್ತು (ಬಿ) ವರ್ಗಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಲಾಯಿತು. ಇದರಿಂದ ಉಪ್ಪಾರ ಸಮುದಾಯದವರು ಜಿಲ್ಲಾ ಮತ್ತು ತಾಪಂನಲ್ಲಿ ಅಧಿಕಾರ ಹಿಡಿಯಲು ಸಾಧ್ಯವಾಯಿತು. 2ಎಗೆ ಮೀಸಲಾತಿ ನೀಡುವ ಜೊತೆಗೆ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಶೇ.50ರಷ್ಟು ಮೀಸಲಾತಿ ಕಲ್ಪಿಸುವ ಮೂಲಕ ಮಹಿಳೆಯರು ರಾಜಕೀಯ ಅಧಿಕಾರ ಹಿಡಿಯಲು ಅನುಕೂಲ ಕಲ್ಪಿಸಲಾಯಿತು.
>
> -ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ತಿ.ನರಸೀಪುರ ವಿಧಾನಸಭಾ ಕ್ಷೇತ್ರ ಅನಾಥವಲ್ಲ

ಚುನಾವಣೆಯಲ್ಲಿ ಹೊರಗಿನವರಿಗೆ ಅವಕಾಶ ನೀಡಬೇಡಿ: ಪುರಸಭಾ ಸದಸ್ಯ ಆರ್.ಅರ್ಜುನ್



ತಿ.ನರಸೀಪುರ, ನ.15– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಯಾವುದೇ ಕಾರಣಕ್ಕೂ ಹೊರಗಿನವರಿಗೆ ಅವಕಾಶ ನೀಡಬಾರದು ಎಂದು ಭಾರತೀಯ ಜನತಾ ಪಕ್ಷದ ವರಿಷ್ಠರನ್ನು ಪುರಸಭಾ ಸದಸ್ಯ ಆರ್.ಅರ್ಜುನ್ ಆಗ್ರಹಿಸಿದ್ದಾರೆ.

ಪಟ್ಟಣದ ಗೋಪಾಲಪುರದಲ್ಲಿರುವ ಸಾರ್ವಜನಿಕ ಸಂಪರ್ಕ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಿ.ನರಸೀಪುರವನ್ನು ಅನಾಥ ಕ್ಷೇತ್ರವೆಂದು ಭಾವಿಸಿರುವ ಕೆಲವು ವಲಸಿಗರು ರಾಜಕೀಯ ಭವಿಷ್ಯ ಅರಸಿ ಬರಲಾರಂಭಿಸಿದ್ದಾರೆ. ಇಲ್ಲಿವರೆಗೂ ಶಾಸಕರಾಗಿರುವ ಬಹುತೇಕರು ಹೊರಗಿನವರೇ ಆಗಿರುವುದರಿಂದ ವಲಸಿಗರ ಕ್ಷೇತ್ರವೆಂದು ತಿಳಿದುಕೊಂಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.


ಬಡವರಿಗೆ ಮತ್ತು ವಿದ್ಯಾರ್ಥಿಗಳಿಗೆ ಸ್ಪಂದಿಸುವ ಕಾರ್ಯ ಸ್ವಾಗತಿಸುತ್ತೇನೆ. ಚುನಾವಣೆಗೆ ನಾಲ್ಕೈದು ತಿಂಗಳು ಇರುವುದರಿಂದ ಎಲ್ಲಿಯೂ ಕಾಣಿಸಿಕೊಳ್ಳದ ಕೆಲವರು ಕ್ಷೇತ್ರದಲ್ಲಿ ಕಾಣಿಸಿಕೊಳ್ಳಲು ಆರಂಭಿಸಿದ್ದಾರೆ. ನಿಮ್ಮ ತಾಲೂಕಿನಲ್ಲಿ ನಿಮಗೆ ಜಾಗವಿಲ್ಲ ಅಲ್ಲಿ ಮೊದಲು ಮುಖಂಡರಾಗಿ, ಶಾಸಕರಾದ ಬಳಿಕ ಮತ್ತೊಂದು ಕ್ಷೇತ್ರದ ಕಡೆ ನೋಡಿ. ಆಕಾಂಕ್ಷಿಗಳ ಪಟ್ಟಿಯಲ್ಲಿ ಪಕ್ಷದ ಸಂಘಟನೆಗೆ ದುಡಿಯದೇ, ಕಾರ್ಯಕರ್ತರಿಗೆ ಒತ್ತಾಸೆಯಾಗದ ದೊಡ್ಡ ವ್ಯಕ್ತಿಗಳ ಹೆಸರು ಕೇಳಿ ಬರುತ್ತಿದೆ. ಮಾಜಿ ಸಚಿವರೊಬ್ಬರು ಕೂಡ ನಾವೊಬ್ಬ ಆಕಾಂಕ್ಷಿ ಎನ್ನುತ್ತಿದ್ದಾರೆ. ಅಧಿಕಾರ ಅನುಭವಿಸಿರುವ ಅವರಂತಹವರು ನಿಜವಾದ ನಾಯಕರು ಆಗಿದ್ದರೆ 2ನೇ ತಲೆಮಾರಿನ ಯುವಕರಿಗೆ ಅವಕಾಶ ಕಲ್ಪಿಸಿ ಕೊಡಬೇಕು ಎಂದರು.

ಬಿಜೆಪಿ ವರಿಷ್ಠರು ಸ್ಥಳೀಯ ಯಾರಿಗಾದರೂ 'ಬಿ' ಫಾರ್ಮ್ ಕೊಟ್ಟು ಕಣಕ್ಕಿಳಿಸುವುದಾದರೆ ನಾನು ಕೂಡ ಅವರ ಗೆಲುವಿಗೆ ಹಗಲಿರುಳು ದುಡಿಯುತ್ತೇನೆ. ನಾನು ಕೂಡ ಅಭ್ಯರ್ಥಿಯಾಗಿ ಸ್ಪರ್ಧಿಸಲು ಪ್ರಬಲ ಆಕಾಂಕ್ಷಿಯಾಗಿದ್ದೇನೆ. ಕಳೆದ ಒಂದೂವರೆ ದಶಕದಿಂದ ಪಕ್ಷದಲ್ಲಿದ್ದು, ಸಂಘಟನೆಗೆ ದುಡಿಯುತ್ತಿದ್ದೇನೆ. ಅದಾಗಿಯೂ ಅನ್ಯ ಜಿಲ್ಲೆ, ತಾಲೂಕಿನ ವಲಸಿಗರಿಗೆ ಮಣೆ ಹಾಕಿದ್ದಲ್ಲಿ, ನಾನೇ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದು ಅವರಿಗಿಂತಲೂ 1000ಕ್ಕೂ ಹೆಚ್ಚು ಮತಗಳನ್ನು ಪಡೆಯುತ್ತೇನೆ ಎಂದು ಎಚ್ಚರಿಸಿದರಲ್ಲದೆ ತಪ್ಪಿದಲ್ಲಿ ರಾಜಕೀಯ ನಿವೃತ್ತಿ ಘೋಷಿಸುತ್ತೇನೆ ಸವಾಲು ಹಾಕಿದರು. ಸುದ್ದಿಗೋಷ್ಠಿಯಲ್ಲಿ ತಾ.ಪಂ ಮಾಜಿ ಸದಸ್ಯ ಬಿ.ಎಲ್.ಮಹದೇವ, ಬಾಬೂಜಿ ಸಂಘಗಳ ಒಕ್ಕೂಟದ ನಿರ್ದೇಶಕ ಕೆ.ಸಿ.ಲಿಂಗರಾಜು ಹಾಗೂ ಮುಖಂಡ ರಾಜುಗೌಡ ಉಪಸ್ಥಿತರಿದ್ದರು.

> ಶಾಸಕ ಎಂ.ಅಶ್ವಿನ್ ಕುಮಾರ್ ಮೇಲೆ ಜನ ಇಟ್ಟುಕೊಂಡಿದ್ದ ಭರವಸೆ ಹುಸಿಯಾಗಿದೆ. ಕ್ಷೇತ್ರದಲ್ಲಿ ಓಡಾಡಿದ್ದು ಬಿಟ್ಟರೆ, ಯಾವುದೇ ಅಭಿವೃದ್ಧಿ ಯೋಜನೆ ತಂದಿಲ್ಲ. ಸಾರ್ವಜನಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಲಿಲ್ಲ. ಚುನಾವಣೆ ಹತ್ತಿರವಾಗುತ್ತಿದ್ದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ಕೈಗೊಂಡಿದ್ದಾರೆ. ಈ ಹಿಂದೆ ಶಾಸಕ, ಸಚಿವರಾಗಿದ್ದವರು ನಾವೇ ಅಭಿವೃದ್ಧಿ ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ ಅಷ್ಟೇ. ವಾಸ್ತವದಲ್ಲಿ ನರಸೀಪುರ ಯಾವುದೇ ಅಭಿವೃದ್ಧಿ ಕಂಡಿಲ್ಲ.
>
> - ಆರ್.ಅರ್ಜುನ್ ರಮೇಶ್, ಪುರಸಭಾ ಸದಸ್ಯ

ಬಸವ ಭವನ 2ನೇ ಹಂತದ ಕಾಮಗಾರಿಗೆ ಚಾಲನೆ

ಉಳಿದ 4 ಕೋಟಿ ಅನುದಾನ ಬಿಡುಗಡೆಗೆ ಪ್ರಯತ್ನ: ಹರ್ಷವರ್ಧನ್ ಭರವಸೆ



ನಂಜನಗೂಡು, ನ.15– 8.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಬಸವ ಭವನಕ್ಕೆ 2.5 ಕೋಟಿ ರೂ. ಅನುದಾನ ತಂದಿದ್ದೇನೆ. ನನ್ನ ಅಧಿಕಾರವಧಿ ಪೂರ್ಣಗೊಳ್ಳುವ ಮುನ್ನ ಉಳಿದ 4 ಕೋಟಿ ಅನುದಾನ ಬಿಡುಗಡೆಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕ ಬಿ.ಹರ್ಷವರ್ಧನ್ ಭರವಸೆ ನೀಡಿದರು.

ನಗರದ ಮುಡಾ ಬಡಾವಣೆಯಲ್ಲಿ ನಿರ್ಮಾಣ ಹಂತದಲ್ಲಿರುವ ಬಸವ ಭವನದ 2.5 ಕೋಟಿ ರೂ. ವೆಚ್ಚದ 2ನೇ ಹಂತದ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಹಿಂದಿನ ಸರ್ಕಾರದಲ್ಲಿ 2 ಕೋಟಿ ರೂ. ಬಿಡುಗಡೆ ಮಾಡಿ ಆರಂಭಿಸಿದ್ದ ಕಾಮಗಾರಿ ಅಪೂರ್ಣಗೊಂಡಿತ್ತು. ಸುಸಜ್ಜಿತ ಬಸವ ಭವನ ನಿರ್ಮಾಣವಾಗಬೇಕೆಂಬ ಕ್ಷೇತ್ರದ ಜನತೆ ಆಶಯ ಸಾಕಾರಗೊಳಿಸುವುದು ನನ್ನ ಮಹದಾಸೆಯಾಗಿತ್ತು. ಹೀಗಾಗಿ ವೀರಶೈವ ಲಿಂಗಾಯತ ಮುಖಂಡರ ಒತ್ತಾಯದ ಮೇರೆಗೆ ಸರ್ಕಾರದ ವಿಶೇಷ ಅನುದಾನದಲ್ಲಿ 2.5 ಕೋಟಿ ಅನುದಾನವನ್ನು ಬಸವ ಭವನಕ್ಕೆ ಮಂಜೂರು ಮಾಡಿಸಿದ್ದೇನೆ. ಭವನ ಪೂರ್ಣಗೊಳಿಸಲು ಅಗತ್ಯವಿರುವ ಉಳಿಕೆ ಅನುದಾನವನ್ನು ನನ್ನ ಅವಧಿಯಲ್ಲೇ ಬಿಡುಗಡೆ ಮಾಡಿಸಲು ಶ್ರಮಿಸುವುದಾಗಿ ತಿಳಿಸಿದರು.

ಬಸವ ಸ್ಮಾರಕ: ನಂಜನಗೂಡಿನಲ್ಲಿ ಸಮಾನತೆ ಹರಿಕಾರ ಬಸವಣ್ಣನವರ ಸ್ಮಾರಕ ನಿರ್ಮಾಣಕ್ಕೆ 1.5 ಕೋಟಿ ಅನುದಾನ ಬಿಡುಗಡೆ ಮಾಡಿಸಿದ್ದೇನೆ. ನಗರದ ಕೆಂಡಗಣ್ಣಸ್ವಾಮಿ ಮಠದ ಬಳಿ ಬಸವಣ್ಣನವರ ಪ್ರತಿಮೆ ನಿರ್ಮಾಣ ಮಾಡಿ ಅವರ ತತ್ವಾದರ್ಶ ಸಾರುವ ಉದ್ಯಾನವನ ನಿರ್ಮಿಸುವ ಉದ್ದೇಶವಿದೆ. ಡಿಸೆಂಬರ್‌ನಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೇರಿದಂತೆ ಎಲ್ಲಾ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ದೇವನೂರು ಗುರುಮಲ್ಲೇಶ್ವರ ಮಠಾಧ್ಯಕ್ಷ ಮಹಾಂತ ಸ್ವಾಮೀಜಿ, ಕಂತೇಮಾದಪ್ಪ ಬೆಟ್ಟದ ಮಹಾಂತ ದೇಶಿಕೇಂದ್ರ ಸ್ವಾಮೀಜಿ, ಶರಣ ಸಂಗಮ ಮಠದ ನಾಗರಾಜೇಂದ್ರ ಸ್ವಾಮೀಜಿ, ಕುರಹಟ್ಟಿ ಮಠದ ಮಾದಪ್ಪಸ್ವಾಮೀಜಿ, ಹೊಸಮಠದ ಮಹೇಶಸ್ವಾಮೀಜಿ, ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಮದಹೇವಪ್ಪ, ಕಾರ್ಯದರ್ಶಿ ಮಂಜುನಾಥ್, ಬಿಜೆಪಿ ಮಂಡಲ ಅಧ್ಯಕ್ಷ ಹೊರಳವಾಡಿ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಜಿಪಂ ಮಾಜಿ ಸದಸ್ಯ ಸಿಂಧುವಳ್ಳಿ ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಉಪಸ್ಥಿತರಿದ್ದರು.

ಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಖಚಿತ



ಹೆಚ್.ಡಿ.ಕೋಟೆ, ನ.15– ಮುಂಬರುವ ಚುನಾವಣೆಯಲ್ಲಿ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಖಚಿತ. ಹೀಗಾಗಿ ಕಾರ್ಯಕರ್ತರು ಹಾಗೂ ಮುಖಂಡರು ತಳಮಟ್ಟದಿಂದ ಪಕ್ಷ ಸಂಘಟಿಸಬೇಕು ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿಳಿಸಿದರು.

ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಅವರ ನೇತೃತ್ವದಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಮೈಸೂರಿನ ನಿವಾಸಕ್ಕೆ ತೆರಳಿದ ತಾಲೂಕಿನ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಸಂಸದರು, ಹೆಚ್.ಡಿ. ಕೋಟೆ ಕ್ಷೇತ್ರದ ಟಿಕೆಟ್ ವಿಚಾರ ಹೈಕಮಾಂಡ್‌ಗೆ ಬಿಟ್ಟಿದ್ದು, ಹೀಗಾಗಿ ಎಲ್ಲರೂ ಒಗ್ಗೂಡಿ ಪಕ್ಷ ಸಂಘಟಿಸಬೇಕು. ಪಕ್ಷದಿಂದ ಯಾರೇ ಅಭ್ಯರ್ಥಿಯಾದರೂ ಅವರ ಗೆಲುವಿಗೆ ಪ್ರತಿಯೊಬ್ಬರೂ ಶಕ್ತಿಮೀರಿ ಶ್ರಮಿಸಬೇಕು ಎಂದರು.

ಈ ವೇಳೆ ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್, ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ, ತೋಟದ ಬೆಳೆಗಾರರ ಸಂಘದ ಅಧ್ಯಕ್ಷ ನಂದೀಶ್, ಮುಖಂಡರಾದ ವೈ.ಟಿ.ಮಹೇಶ್, ವಿಜಯ್ ಕುಮಾರ್, ಮಾಜಿ ಅಧ್ಯಕ್ಷ ಶಿವರಾಜಪ್ಪ, ಮಾಜಿ ಎಪಿಎಂಸಿ ಅಧ್ಯಕ್ಷ ನಟರಾಜು, ಸರಗೂರು ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಜಿಲ್ಲಾ ಎಸ್‌ಸಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಗೋಪಾಲಯ್ಯ, ಮಾಜಿ ಎಪಿಎಂಸಿ ಅಧ್ಯಕ್ಷ ಪಿ.ಮಹದೇವ್, ಶಕ್ತಿ ಕೇಂದ್ರದ ಅಧ್ಯಕ್ಷ ದಿನೇಶ್, ಮಹದೇವಪ್ಪ ಆಶ್ರಯ ಕಮಿಟಿ ಸದಸ್ಯ ಮಾದೇಶ್, ಪಪಂ ನಾಮ ನಿರ್ದೇಶಕ ಲೋಕೇಶ್, ಮಾಜಿ ಶಕ್ತಿ ಕೇಂದ್ರದ ಅಧ್ಯಕ್ಷ ಗುರುಸ್ವಾಮಿ, ಬಸವರಾಜು ಇತರರಿದ್ದರು.

ಸಹಕಾರಿ ಸಂಸ್ಥೆಗಳು ರೈತ ಕುಟುಂಬಗಳ ಬೆನ್ನೆಲುಬು

69ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಶಾಸಕ ಅಶ್ವಿನ್ ಕುಮಾರ್



ತಿ.ನರಸೀಪುರ, ನ.15– ಆರ್ಥಿಕಾಭಿವೃದ್ಧಿಗೆ ಸಹಕಾರಿ ತತ್ವಗಳನ್ನು ಅನುಷ್ಠಾನಗೊಳಿಸುತ್ತಿರುವ ಸಹಕಾರಿ ಸಂಸ್ಥೆಗಳು ರೈತ ಕುಟುಂಬಗಳ ಬೆನ್ನೆಲುಬು ಆಗಿವೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಯಾಚೇನಹಳ್ಳಿ ಗ್ರಾಮದ ಸಹಕಾರ ಸಂಘಗಳ ಆವರಣದಲ್ಲಿ ಮಂಗಳವಾರ ನಡೆದ 69ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಮಾತನಾಡಿದ ಅವರು, ಪಕ್ಷೇತರವಾಗಿ ರಾಜಕೀಯ ಚಿಹ್ನೆಗಳಿಲ್ಲದೆ ಸಹಕಾರಿ ಸಂಸ್ಥೆ ಪ್ರತಿನಿಧಿಸುವ ಸಹಕಾರಿ ಬಂಧುಗಳು ಆರ್ಥಿಕಾಭಿವೃದ್ಧಿ ಕೇಂದ್ರಿಕರಿಸಿ ರೈತ ಕುಟುಂಬಗಳ ಕಲ್ಯಾಣಕ್ಕೆ ಪೂರಕವಾಗಿ ದುಡಿಯುತ್ತಿದ್ದಾರೆ ಎಂದರು.

ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಸಹಕಾರ ಸಂಸ್ಥೆಗಳ ಬೆಳವಣಿಗೆ ಮತ್ತು ಮುಂದಿನ ಭವಿಷ್ಯದ ದೃಷ್ಟಿಯಿಂದ ಸಹಕಾರ ಮಾರುಕಟ್ಟೆ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ ಗುರಿಯಲ್ಲಿಟ್ಟುಕೊಂಡು 69ನೇ ಸಹಕಾರ ಸಪ್ತಾಹ ಹಮ್ಮಿಕೊಳ್ಳಲಾಗಿದೆ. ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕನಸು ಸಹಕಾರಿ ಸಂಸ್ಥೆಗಳ ಮೂಲಕ ಸಾಕಾರಗೊಳ್ಳುತ್ತಿದೆ. ಅಧಿಕಾರಕ್ಕಾಗಿ ಸಹಕಾರ ಸಂಘ ಆಯ್ಕೆ ಮಾಡಿಕೊಳ್ಳುವುದಲ್ಲ. ಹಿತ್ತಲ ಗಿಡವನ್ನು ಮದ್ದಾಗಿ ಬಳಕೆ ಮಾಡಿಕೊಳ್ಳಲು ಸಹಕಾರಿಗಳಾಗಬೇಕು. ಹೈನುಗಾರಿಕೆ ಅಭಿವೃದ್ಧಿಗೊಂಡಂತೆ ಹಳ್ಳಿಗಳಲ್ಲಿ ಉಳಿದುಕೊಳ್ಳಲು ಆರಂಭಿಸಿರುವ ಜನರ ಜೀವನ ಉತ್ತಮಗೊಂಡಿದೆ. ರೈತರಿಗೆ ಎಲ್ಲಾ ಹಂತದಲ್ಲೂ ನೆರವು ನೀಡಲು ಸಹಕಾರಿ ಸಂಸ್ಥೆ ಉಪಯುಕ್ತವಾಗಿವೆ ಎಂದರು.

ಮೈಮುಲ್ ನಿರ್ದೇಶಕ ಸಿ.ಓಂಪ್ರಕಾಶ್ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಅಸಾಧ್ಯವಾದುದ್ದನ್ನು ಸಾಧ್ಯವಾಗಿಸಬಹುದು ಎಂಬುದಕ್ಕೆ ಹಿರಿಯ ಸಹಕಾರಿ ಚೇತನ ವೈ.ಎನ್.ಶಂಕರೇಗೌಡರೇ ಸಾಕ್ಷಿ. ಗ್ರಾಮವೊಂದನ್ನೇ ಕೇಂದ್ರಿಕರಿಸಿ ಸಹಕಾರಿ ಸಂಘ, ಹಾಲು ಉತ್ಪಾದಕರ ಸಹಕಾರ ಸಂಘ, ಜನತಾ ಬಜಾರ್, ಜನೌಷಧ ಕೇಂದ್ರ ತೆರೆದಿದ್ದಾರೆ. ಮುಂದಿನ ದಿನಗಳಲ್ಲಿ ಪಶು ಆಸ್ಪತ್ರೆ ಆರಂಭಿಸುವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕೆಐಸಿಎಂ ಉಪನ್ಯಾಸಕ ಎಸ್.ಮಹದೇವಪ್ಪ ಉಪನ್ಯಾಸ ನೀಡಿದರು. ಗದಗ ಜಿಲ್ಲೆ ಹಿರಿಯ ಸಹಕಾರಿ, ನಿವೃತ್ತ ಇಂಜಿನಿಯರ್ ಎಸ್.ವೈ. ಹೊಂಬಾಳ ಅವರನ್ನು ಸನ್ಮಾನಿಸಲಾಯಿತು. ಶ್ರೀರಾಮಕೃಷ್ಣ ಆಶ್ರಮದ ನಾದನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು.

ಈ ವೇಳೆ ಯಾಚೇನಹಳ್ಳಿ ಪಿಎಸಿಎಸ್ ಸಂಸ್ಥಾಪಕ ಅಧ್ಯಕ್ಷ ವೈ.ಎನ್.ಶಂಕರೇಗೌಡ, ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಬಿ.ಎಂ.ಸದಾನಂದ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ನಿರ್ದೇಶಕರಾದ ಜೆ.ಸುನೀತಾ ವೀರಪ್ಪಗೌಡ, ಹನುಮನಾಳು ಸಿದ್ದೇಗೌಡ, ಹಾಪ್‌ಕಾಮ್ಸ್ ನಿರ್ದೇಶಕ ವೈ.ಜಿ.ಮಹೇಂದ್ರ, ನಾಡಗೌಡ ವೈ.ಹೆಚ್.ಹನುಮಂತೇಗೌಡ, ಗ್ರಾಪಂ ಅಧ್ಯಕ್ಷೆ ಸರೋಜಮ್ಮ, ಡೈರಿ ಅಧ್ಯಕ್ಷ ವೈ.ಎಂ.ಮಲ್ಲೇಶ್, ಎಂಸಿಡಿಸಿಸಿ ಬ್ಯಾಂಕ್ ಸಿಇಓ ಜಿ.ಸಿ.ಜನಾರ್ಧನ್, ಸಹಕಾರ ಸಂಘಗಳ ಉಪನಿಬಂಧಕ ಜಿ.ಆರ್.ವಿಜಯ್ ಕುಮಾರ್, ಸಹಾಯಕ ನಿಬಂಧಕ ಕೆ.ಎಸ್.ಹರೀಶ್ ಕುಮಾರ್, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯಕುಮಾರ್, ಉಪ ವ್ಯವಸ್ಥಾಪಕ ಡಾ.ದಿವಾಕರ್, ಇಫ್ಕೊ ರಾಜ್ಯ ಮಾರಾಟ ವ್ಯವಸ್ಥಾಪಕ ಡಾ.ನಾರಾಯಣಸ್ವಾಮಿ, ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ, ಜಿಲ್ಲಾ ಸಹಕಾರ ಒಕ್ಕೂಟದ ಸಿಇಓ ಎಂ.ವಿಶ್ವೇಶ್ವರಯ್ಯ, ಉಪಸ್ಥಾಪಕ ಪಿ.ಎಸ್.ಹರೀಶ್, ಎಸಿಸಿಎಸ್‌ನ ಕಾರ್ಯನಿರ್ವಾಹಕ ಕ್ಯಾತೇಗೌಡ, ಮೈಮುಲ್ ವಿಸ್ತರಣಾಧಿಕಾರಿ ಪ್ರಮೋದ್, ಮೇಲ್ವಿಚಾರಕ ರಾಜಪ್ಪ ಅಧ್ಯಕ್ಷ ಬಿ.ವೀರಭದ್ರಪ್ಪ ಯುವ ಕಾಂಗ್ರೆಸ್ ಅಧ್ಯಕ್ಷ ಟಿ.ಎಸ್.ಲೋಕೇಶ್, ಮರಿಗೌಡ, ಹೆಮ್ಮಿಗೆ ಡೈರಿ ಕಾರ್ಯದರ್ಶಿ ಸೋಮಣ್ಣ ಹಾಗೂ ಸಹಕಾರಿ ಬಂಧುಗಳು ಹಾಜರಿದ್ದರು.

> ರಾಜ್ಯ ಸರ್ಕಾರ ಹಾಲಿನ ದರ ಏರಿಕೆ ಮಾಡುತ್ತಿಲ್ಲ. ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಪಶು ಆಹಾರದ ಬೆಲೆ ಹೆಚ್ಚಾಗಿದ್ದು, ಹಸು ಸಾಕಾಣಿಕೆ ವೆಚ್ಚವೂ ದುಬಾರಿಯಾಗುತ್ತಿದೆ. ಏರಿಕೆ ಮಾಡಿದ ಸಂಪೂರ್ಣ 3 ರೂ.ಗಳನ್ನು ಹಾಲು ಒಕ್ಕೂಟ ರೈತರಿಗೆ ನೇರವಾಗಿ ನೀಡುವುದರಿಂದ ಮುಖ್ಯಮಂತ್ರಿಗಳು ಬೆಲೆ ಏರಿಕೆ ಮಾಡಲು ಸಮ್ಮತಿಸಲಿ.
>
> - ಆರ್.ಚೆಲುವರಾಜು, ಮೈಮುಲ್ ನಿರ್ದೇಶಕ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಗಂಧದ ಗುಡಿ (ಕ): ಬೆ.10.05ಕ್ಕೆ, ಮ.12.05ಕ್ಕೆ, ಮ.2.10ಕ್ಕೆ, ಕಾಂತಾರ (ಕ): ಸಂ.4.10ಕ್ಕೆ, ರಾ.7.05ಕ್ಕೆ, ಜಯ ಜಯ ಜಯ ಜಯ ಹೇ (ಮ): ರಾ.10ಕ್ಕೆ.
ಸ್ಕ್ರೀನ್ 2	ದಿಲ್‌ಪಸಂದ್ (ಕ): ಬೆ.10ಕ್ಕೆ, ಸಂ.4.05ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ಮ.1.15ಕ್ಕೆ, ಉಂಚೈ (ಹಿಂ): ರಾ.7ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಓ (ಕ): ಬೆ.10.30ಕ್ಕೆ, ರಾಣಾ (ಕ): ಮ.1.35ಕ್ಕೆ, ಯಶೋಧಾ (ತೆ): ಸಂ.4.20ಕ್ಕೆ, ರಾ.7.15ಕ್ಕೆ, ಕಾಂತಾರ (ಕ): ರಾ.10ಕ್ಕೆ.
ಸ್ಕ್ರೀನ್ 4	ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಬೆ.9.50ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಬೆ.10ಕ್ಕೆ, ಮ.1.20ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಗಂಧದ ಗುಡಿ (ಕ): ಸಂ.4.40ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ, ದಿಲ್ ಪಸಂದ್ (ಕ): ಸಂ.4.05ಕ್ಕೆ.
ಸ್ಕ್ರೀನ್ 3	ಯಶೋಧಾ (ತೆ): ಬೆ.9.40ಕ್ಕೆ, ಮ.2.55ಕ್ಕೆ, ರಾಣಾ (ಕ): ಮ.12.25ಕ್ಕೆ, ಸಂ.5.45ಕ್ಕೆ, ಗಂಧದ ಗುಡಿ (ಕ): ರಾ.8.20ಕ್ಕೆ, ಉಂಚೈ (ಹಿಂ): ರಾ.10.30ಕ್ಕೆ.
ಸ್ಕ್ರೀನ್ 4	ಗಂಧದ ಗುಡಿ (ಕ): ಬೆ.10ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ಮ.12.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.3.15ಕ್ಕೆ, ಉಂಚೈ (ಹಿಂ): ಸಂ.6.35ಕ್ಕೆ, ದಿಲ್ ಪಸಂದ್ (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಹುಬ್ಬಳ್ಳಿ ಡಾಬಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹುಬ್ಬಳ್ಳಿ ಡಾಬಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬನಾರಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಯಶೋಧಾ (ತೆ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ರಾಣಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಹುಬ್ಬಳ್ಳಿ ಡಾಬಾ (ಕ)	4 ಪ್ರದರ್ಶನಗಳು
ಪ್ರಭಾ	
ಊರ್ವಶಿವೋ ರಾಕ್ಷಸಿವೋ (ತೆ)	4 ಪ್ರದರ್ಶನಗಳು



ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ನೇತೃತ್ವದಲ್ಲಿ ಹುಣಸೂರು ತಾಲೂಕಿನ ರಾಮನಹಳ್ಳಿಯಲ್ಲಿ ಬಿಜೆಪಿ ಮುಖಂಡರಾದ ಲೋಕೇಶ್, ಮಹದೇವಸ್ವಾಮಿ, ಬೋರನಾಯ್ಕ ಸಿದ್ದನಾಯ್ಕ ಮುನಿರ್, ರಾಘುಶೆಟ್ಟಿ ಚಂದ್ರಶೆಟ್ಟಿ ವಿಶ್ವೇಶಶೆಟ್ಟಿ ಸಿಲ್ಕ್ ಲೋಕೇಶ್, ಜಾಕಿ ರಮೇಶ್, ಬುಂಡೆ ಸಿದ್ದರಾಜು, ಮಂಜುನಾಥ್ ಸೇರಿದಂತೆ ಇನ್ನಿತರರು ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಕೆಎಂಎಫ್ ನಿರ್ದೇಶಕ ಕೆ.ಎಸ್.ಕುಮಾರ್, ಬಿಳಿಕೆರೆ ಗ್ರಾಪಂ ಅಧ್ಯಕ್ಷ ರಾಜೇಶ್, ಬಿಳಿಕೆರೆ ಮಧು, ಸತೀಶ್, ಪಾಪಣ್ಣ, ಜಿಪಂ ಮಾಜಿ ಸದಸ್ಯ ಸುರೇಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಕೆಂಪೇಗೌಡ, ಸತೀಶ್ ಮತ್ತಿತರರು ಉಪಸ್ಥಿತರಿದ್ದರು.


ಹಿರಿಯ ಪತ್ರಕರ್ತ ಮುರಳೀಧರ್ ನಿಧನ



ಹುಣಸೂರು, ನ.15– ಪಟ್ಟಣದ ಹಿರಿಯ ಪತ್ರಕರ್ತ, 'ಮೈಸೂರು ಮಿತ್ರ' ಪ್ರತಿನಿಧಿ ಹೆಚ್.ಎಸ್.ಮುರಳೀಧರ್ (66) ಮಂಗಳವಾರ ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಮುರಳೀಧರ್ ಪೌರೋಹಿತ್ಯ ಕುಟುಂಬದಲ್ಲಿ ಜನಿಸಿದರೂ, ಪತ್ರಿಕಾ ಕ್ಷೇತ್ರಕ್ಕೆ ಕಾಲಿಟ್ಟು ಸತತ 50ಕ್ಕೂ ಹೆಚ್ಚು ವರ್ಷ ಪತ್ರಿಕಾ ವೃತ್ತಿಯಲ್ಲೇ ಕಳೆದಿದ್ದರು. ಮಂಗಳವಾರ ಸಂಜೆ ಹುಣಸೂರಿನಲ್ಲಿ ಮರಳೀಧರ್ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೀರಭದ್ರಚಾರ್



ಹುಣಸೂರು, ನ.15– ತಾಲೂಕಿನ ಬೀಜಗನಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡ ವೀರಭದ್ರಚಾರ್(67) ಮಂಗಳವಾರ ನಿಧನರಾದರು. ಮೃತರು ಪತ್ನಿ, ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಜಮೀನಿನಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಗಿರಿ




ಹುಣಸೂರು, ನ.15– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ನಿವಾಸಿ ರಾಮಗಿರಿ(73) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಮೂವರು ಮಕ್ಕಳು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ತಾಲೂಕು ಕಚೇರಿ ಪಕ್ಕದಲ್ಲಿರುವ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲೆಯಲ್ಲಿ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಚುನಾವಣೆಗೆ ಹೋಗ್ತೆವೆ...

ವಿಧಾನ ಪರಿಷತ್ ಸದಸ್ಯ ಮಂಜೇಗೌಡರ ಸ್ಪಷ್ಟನೆ

ಮೈಸೂರು, ನ.15(ಜಿಎ)– ಮೈಸೂರು ಜಿಲ್ಲೆಯಲ್ಲಿ ಜೆಡಿಎಸ್ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿಯೇ ಈ ಬಾರಿಯ ಚುನಾವಣೆ ಎದುರಿಸಲಿದೆ ಎಂದು ಎಂಎಲ್‌ಸಿ ಮಂಜೇಗೌಡ ಹೇಳಿದರು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಬಳಿ ಮಾಧ್ಯಮದವರೊಂದಿಗೆ ಮಾತನಾಡಿ, ರಾಷ್ಟ್ರಕ್ಕೆ ಎಚ್.ಡಿ.ದೇವೇಗೌಡ್ರು, ರಾಜ್ಯಕ್ಕೆ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಮೈಸೂರಿಗೆ ಜಿ.ಟಿ. ದೇವೇಗೌಡ್ರು ನಮ್ಮ ನಾಯಕರಾಗಿದ್ದಾರೆ. ಅವರು ಹೇಗೆ ಹೇಳುತ್ತಾರೆ. ಹಾಗೇ ನಾವು ಮುಂದು ವರೆಯುತ್ತೇವೆ. ಜಿ.ಟಿ. ದೇವೇಗೌಡರು ಪಕ್ಷದಲ್ಲಿಯೇ ಉಳಿದುಕೊಂಡಿರುವುದು ಸಂತಸವಾಗಿದ್ದು, ಅವರ ಹಿಂದಿನ ಹೇಳಿಕೆಗಳು ಆಗಿನ ಸಂದರ್ಭಕ್ಕೆ ತಕ್ಕಂತೆ ಇತ್ತು. ಆದರೆ, ಇಂದಿನ ಪರಿಸ್ಥಿತಿಯೇ ಬೇರೆ ಇದೆ. ಇನ್ನು ಮುಂದೆ ಅವರ ವಿರುದ್ಧ ಹೇಳಿಕೆ ನೀಡುವುದು ಸೂಕ್ತವಲ್ಲ ಎಂದು ತಿಳಿಸಿದರು.



ಜಿ.ಟಿ.ಡಿ ಅವರ ನೇತೃತ್ವದಲ್ಲಿ ಚುನಾವಣೆ ನಡೆಯುತ್ತದೆ. ಜನರಲ್ಲಿ ಪ್ರಾದೇಶಿಕ ಪಕ್ಷದ ಕಡೆ ಒಲವಿದೆ. ನಾವು ಎಲ್ಲಾ ರೀತಿ ತಂತ್ರಗಳನ್ನು ರೂಪಿಸಿಕೊಂಡಿದ್ದೇವೆ. ಹೆಚ್.ಡಿ. ದೇವೇಗೌಡ್ರು ಮತ್ತು ಕುಮಾರ ಸ್ವಾಮಿ ತಮ್ಮ ಅಧಿಕಾರಾವಧಿಯಲ್ಲಿ ನೀಡಿರುವ ಯೋಜನೆಗಳ ಬಗ್ಗೆ ಜನತೆಗೆ ತಿಳಿಸುತ್ತೇವೆ. ಕುಮಾರ ಸ್ವಾಮಿ ಅವರು ಮತ್ತೆ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ತಿಳಿಸಿದರು.

ಕೆಲ ಜೆಡಿಎಸ್ ಮುಖಂಡರು ಪಕ್ಷಕ್ಕೆ ರಾಜೀನಾಮೆ ನೀಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಚುನಾವಣೆ ಸಂದರ್ಭದಲ್ಲಿ ರಾಜೀನಾಮೆ ನೀಡುವುದು ಸಹಜ. ಎಷ್ಟೋ ಮಂದಿ ಕಾಂಗ್ರೆಸ್, ಬಿಜೆಪಿ ತೊರೆದು ಜೆಡಿಎಸ್‌ಗೆ ಬಂದಿರುವ ಉದಾಹರಣೆಗಳಿವೆ. ಚುನಾವಣೆ ಸನಿಹದಲ್ಲಿ ಇದು ಸಾಮಾನ್ಯ. ಚುನಾವಣೆ ನಂತರ ಈ ರೀತಿ ನಡೆಯುವುದಿಲ್ಲ. ಇಂದು ಎಲ್ಲರೂ ದೊಡ್ಡವರಾಗಿದ್ದಾರೆ. ಮನೆಯ ಹಿರಿಯರ ಬಳಿ ಪಾಲು ಕೇಳುತ್ತಿದ್ದಾರೆ. ಪಾಲು ನೀಡಲಿಲ್ಲ ಎಂದಾಗ ಮಾತ್ರ ಈ ರೀತಿ ವರಿಷ್ಠರ ವಿರುದ್ಧ ಹೇಳಿಕೆಗಳನ್ನು ನೀಡುತ್ತಾರೆ, ರಾಜೀನಾಮೆ ಕೊಡುತ್ತಾರೆ. ಮಾಧ್ಯಮ ಗಳ ಮುಂದೆ ಬರುತ್ತಾರೆ ಅಷ್ಟೇ.

ಬಿಜೆಪಿಯಲ್ಲಿ ಮೋದಿ ಅವರ ಮಾತು ಎಲ್ಲರೂ ಕೇಳಬೇಕು ಎಂದು ಹೇಳುತ್ತಾರೆ. ಆದರೆ, ಪ್ರತಾಪ್ ಸಿಂಹ ಕೇಳುತ್ತಾರಾ? ಹಾಗೇ ಎಲ್ಲಾ ಪಕ್ಷದಲ್ಲಿಯೂ ಈ ರೀತಿ ಸಮಸ್ಯೆ ಇರುತ್ತದೆ. ಇನ್ನೂ ಎರಡು ತಿಂಗಳಿನಲ್ಲಿ ಮೈಸೂರಿಗೆ ಕುಮಾರಣ್ಣ ಬಂದು ಎಲ್ಲರನ್ನೂ ಭೇಟಿ ಮಾಡುತ್ತಾರೆ. ಎಲ್ಲಾ ಕಾರ್ಯಕರ್ತರ ಕೋರಿಕೆಗಳನ್ನು ಈಡೇರಿಸುತ್ತಾರೆ ಎಂದರು.

ಬೀರಿಹುಂಡಿ ಬಸವಣ್ಣ ಮತ್ತು ಮಾವನಹಳ್ಳಿ ಸಿದ್ದೇಗೌಡ ಅವರ ಮನವೊಲಿಸಲು ಪ್ರಯತ್ನಗಳು ನಡೆಯುತ್ತಿವೆ. ನಾನು ಸಹ ಪ್ರಯತ್ನ ಪಡುತ್ತಿದ್ದೇನೆ. ಜಿಟಿಡಿ ಅವರು ಕೂಡ ಮಾಡುತ್ತಿರಬಹುದು. ಎಲ್ಲಾ ಪಕ್ಷದಲ್ಲಿಯೂ ಈ ರೀತಿ ಪರಿಸ್ಥಿತಿ ಇದ್ದು, ಹುಣಸೂರಿನಲ್ಲಿ ಕಾರ್ಯಕರ್ತರು ಮತ್ತು ಮುಖಂಡರಲ್ಲಿರುವ ಅಸಮಾಧಾನವನ್ನು ನಿವಾರಿಸಿ, ಜಿಟಿಡಿ ಮತ್ತು ಹರೀಶ್ ಅವರನ್ನು ಗೆಲ್ಲಿಸುತ್ತೇವೆ ಎಂದರು.

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ವಿಜ್ಞಾನ ವಸ್ತುಪ್ರದರ್ಶನ

ಮೈಸೂರು, ನ.15– ನಗರದ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಮಕ್ಕಳ ದಿನಾಚರಣೆ ಪ್ರಯುಕ್ತ ನರ್ಸರಿಯಿಂದ ಪಿಯುಸಿವರೆಗಿನ ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು.



ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಮೈಸೂರು ವಿಶ್ವವಿದ್ಯಾನಿಲಯದ ಬಯೋ ಟೆಕ್ನಾಲಜಿ ವಿಭಾಗದ ಮುಖ್ಯಸ್ಥೆ ಡಾ.ಗೀತಾ ಅವರು ಆಗಮಿಸಿ ವಿದ್ಯಾರ್ಥಿಗಳು ತಯಾರಿಸಿದ ಮಾದರಿಗಳನ್ನು ವೀಕ್ಷಿಸಿದರು. ಬಳಿಕ ಮಾತನಾಡಿ ವಿದ್ಯಾರ್ಥಿಗಳು ಪಾಠದ ಮೂಲಕ ತರಗತಿಯಲ್ಲಿ ಕಲಿತ ಹಲವಾರು ವಿಷಯಗಳ ಮಾದರಿಗಳನ್ನು ತಯಾರಿಸಿ ದ್ದಾರೆ. ತಾವು ಕಲಿತ ಪಾಠದ ಪ್ರಯೋಗಿಕ ಮಾದರಿಗಳನ್ನು ಮಾಡಿ ತಿಳಿಸುವ ಮೂಲಕ ತಾವು ಕ್ರಿಯಾಶೀಲರಾಗಲು ಹಾಗೂ ತಮ್ಮ ಜ್ಞಾನವನ್ನು ಇನ್ನಷ್ಟು ವೃದ್ಧಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಉತ್ತಮ ವೇದಿಕೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ತಾವಿಲ್ಲಿ ಪ್ರದರ್ಶನಕ್ಕಿಟ್ಟಿರುವ ನೀರಿನ ಮರು ಬಳಕೆಯ ವಿಧಾನಗಳು, ಮಳೆ ನೀರು ಕೊಯ್ಲು, ಸಾವಯವ ಕೃಷಿ ಪದ್ಧತಿ, ಸಂಗಮ ರಸ್ತೆ ಸಾರಿಗೆಯ ರೂಪುರೇಷೆಗಳು, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಶಕ್ತಿಯ ಮೂಲ ಮತ್ತು ಸಂರಕ್ಷಣೆ ಹೀಗೆ ಎಲ್ಲ ಮಾದರಿಗಳನ್ನು ಅಚ್ಚುಕಟ್ಟಾಗಿ ತಯಾರಿಸಿದ್ದೀರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಅತಿಥಿಯಾಗಿ ಆಗಮಿಸಿದ್ದ ಮೈಸೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ದಕ್ಷಿಣ ವಲಯದ ಶಿಕ್ಷಣ ಸಂಯೋಜಕ ಮನೋಹರ್ ಮಾತನಾಡಿ, ಇಂದಿನ ದಿನಗಳಲ್ಲಿ ಇಂತಹ ವಸ್ತುಪ್ರದರ್ಶನಗಳು ಅತ್ಯಾವಶ್ಯಕವಾಗಿದ್ದು, ಇದರಿಂದ ಪ್ರತಿಭೆಗಳು ಮುಖ್ಯವಾಹಿನಿಗೆ ಬಂದು ಸರ್ವ ತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ವಿಜ್ಞಾನವನ್ನು ಅಲ್ಲಗಳೆಯುವಂತಿಲ್ಲ. ವಸ್ತುಪ್ರದರ್ಶನ ಮಾಡಿದಾಗ ಭಯ, ಕೀಳರಿಮೆ ದೂರವಾಗಿ, ಮನರಂಜನೆ ಅನುಭವವಾಗುತ್ತದೆ ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ವೇದಿಕೆಯಲ್ಲಿ ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಪ್ರಕಾಶ್, ಆಡಳಿತಾಧಿಕಾರಿ ಕಾಂತಿ ನಾಯಕ್, ಕಾಲೇಜಿನ ಪ್ರಾಂಶುಪಾಲ ಸುನಿಲ್ ಕುಮಾರ್ ಎಂ.ಎಸ್., ಶಾಲಾ ಮುಖ್ಯೋಪಾಧ್ಯಾಯ ಮಹಮ್ಮದ್ ಫಾರೂಕ್ ಇತರರಿದ್ದರು.

ಪ್ರವಾಸದ ನೆಪದಲ್ಲಿ 3.20 ಲಕ್ಷ ವಂಚನೆ: ಮೂವರ ವಿರುದ್ಧ ಪೊಲೀಸರಿಗೆ ದೂರು

ಕ್ರೈಂ ಬಾಕ್ಸ್

ಮೈಸೂರು, ನ.15– ಧಾರ್ಮಿಕ ಪವಿತ್ರ ಸ್ಥಳಗಳಿಗೆ ಪ್ರವಾಸ ಕರೆದೊಯ್ಯುವುದಾಗಿ 3.20 ಲಕ್ಷ ರೂ. ವಂಚಿಸಿರುವುದಾಗಿ ರೈಲ್ವೆ ನಿವೃತ್ತ ನೌಕರರೊಬ್ಬರು ಮೂವರ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ. ಮೈಸೂರಿನ ಗಾಂಧಿನಗರ ನಿವಾಸಿ ಆಂಥೋಣಿ ದಾಸ್, ಓಯಸಿಸ್ ವೊಯೋಸಿಸ್(oasis voyasis pvt. ltd) ಕಂಪನಿಯ ಆನಂದ ರಾಜ್, ಟೀನೋ ಹಾಗೂ ಶೈನ್ ಎಂಬುವವರ ವಿರುದ್ಧ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

ಸೆಂಟ್ ಫಿಲೋಮಿನಾ ಚರ್ಚ್‌ಗೆ ನಿರಂತರವಾಗಿ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸುವ ಪರಿಪಾಠವಿದೆ. ಅದರಂತೆ 2019ರಲ್ಲಿ ಕ್ರೈಸ್ತ ಧರ್ಮದ ಪವಿತ್ರ ಸ್ಥಳಗಳಿಗೆ ಪ್ರವಾಸ ಸಂಬಂಧ ಓಯಸಿಸ್ ವೊಯೋಸಿಸ್ ಕಂಪನಿಯ ಜಾಹಿರಾತು ಗಮನಿಸಿದೆ. ಅಲ್ಲದೆ ಚರ್ಚ್ ಹೊರ ಆವರಣದಲ್ಲಿ ಇದೇ ವಿಚಾರವಾಗಿ ಮಾಹಿತಿ ನೀಡುತ್ತಿದ್ದ ಆನಂದ್ ರಾಜ್, ಈ ಬಾರಿ ಯೂರೋಪ್ ಪಿಲಿಗ್ರಿಂಗೆ ಪ್ರವಾಸ ಆಯೋಜಿಸಿರುವುದಾಗಿ ತಿಳಿಸಿದರು. ನಾನೂ ಪ್ರವಾಸಕ್ಕೆ ಬರುವುದಾಗಿ ಆನಂದ್ ರಾಜ್‌ಗೆ ತಿಳಿಸಿದ್ದರಿಂದ 2019ರ ಸೆ.20ರಂದು ಬೆಂಗಳೂರಿನ ಕಂಪನಿ ಕಚೇರಿಗೆ ಕರೆದೊಯ್ದು 2 ಲಕ್ಷ ರೂ.ಗಳನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿಸಿ, ಬಯೋ ಮೆಟ್ರಿಕ್ ಶುಲ್ಕವೆಂದು 20 ಸಾವಿರ ನಗದು ಪಡೆದರು.

ಅದಾಗಿ 2 ದಿನಗಳ ಬಳಿಕ ಜಯಲಕ್ಷ್ಮೀಪುರಂನಲ್ಲಿ ಪ್ರವಾಸಕ್ಕೆ ನೋಂದಣಿ ಮಾಡಿಕೊಂಡವರ ಸಭೆ ನಡೆಸಿದ ಆನಂದ ರಾಜ್, ಆಗಲೂ ಲಕ್ಷ ರೂ.ಗಳನ್ನು ಕಂಪನಿಯ ಖಾತೆಗೆ ಜಮೆ ಮಾಡಿಸಿದರು. ಸೆ.30ಕ್ಕೆ ಪ್ರವಾಸಕ್ಕೆ ಹೊರಡಲು ಸಿದ್ಧತೆ ಮಾಡಿಕೊಳ್ಳುವಂತೆ ತಿಳಿಸಿದ್ದ ಅವರು, ಹಿಂದಿನ ದಿನ ರಾತ್ರಿ ಕರೆ ಮಾಡಿ ಪ್ರವಾಸ ರದ್ದಾಗಿದೆ ಎಂದರು. ನಂತರ ಹಲವು ಬಾರಿ ಕೇಳಿದರೂ ಪ್ರವಾಸಕ್ಕೂ ಕರೆದೊಯ್ಯಲಿಲ್ಲ ಅಥವಾ ಹಣವನ್ನೂ ವಾಪಸ್ಸು ನೀಡಲಿಲ್ಲ. ಒತ್ತಡ ಹೇರಿದ್ದರಿಂದ 3.20 ಲಕ್ಷ ರೂ.ಗೆ ಅವರು ನೀಡಿದ್ದ ಚೆಕ್ ಕೂಡ ಬೌನ್ಸ್ ಆಯಿತು. ಕಳೆದ ಅಕ್ಟೋಬರ್ 18ರಂದು ವಿಚಾರಿಸಲೆಂದು ಹೋದಾಗ ಹಣ ಕೊಡುವುದೇ ಇಲ್ಲ ಏನಾದರೂ ಮಾಡಿಕೊಳ್ಳಿ ಎಂದರು. ಪ್ರವಾಸದ ನೆಪದಲ್ಲಿ ಹಣ ಪಡೆದು ವಂಚಿಸಿರುವ ಈ ಮೂವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಂಥೋಣಿ ದಾಸ್, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಮಕ್ಕಳ ದತ್ತು ಕೇಂದ್ರ ಆರಂಭ

ಮೈಸೂರು,ನ.15(ಪಿಎಂ)– ಶ್ರೀ ಛಾಯಾದೇವಿ ಸಂಸ್ಥೆ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುಮತಿ ಮೇರೆಗೆ ಮೈಸೂರಿನ ಜಯನಗರದ ಚಿಕ್ಕಹರದನಹಳ್ಳಿಯಲ್ಲಿ ಶ್ರೀ ಛಾಯಾದೇವಿ ದತ್ತು ಕೇಂದ್ರ ಆರಂಭಿಸಲಾಗಿದೆ ಎಂದು ಕೇಂದ್ರದ ಅಧ್ಯಕ್ಷ ಡಾ.ಭಾನುಪ್ರಕಾಶ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ಕಳೆದ 8 ವರ್ಷಗಳಿಂದ ಯಾವುದೇ ದತ್ತು ಕೇಂದ್ರ ಇರಲಿಲ್ಲ. ಜಿಲ್ಲೆಯ ವ್ಯಾಪ್ತಿಯಲ್ಲಿ ಚಿಕ್ಕ ಅನಾಥ ಮಕ್ಕಳು ಪತ್ತೆಯಾದಾಗ ಈ ಮಕ್ಕಳ ತಾತ್ಕಾಲಿಕ ಪೋಷಣೆಗೆ ನೆರೆ ಜಿಲ್ಲೆಗಳ ದತ್ತು ಕೇಂದ್ರಗಳಿಗೆ ಕಳುಹಿಸಬೇಕಿತ್ತು. ಇದೀಗ ನಮ್ಮ ಸಂಸ್ಥೆಯಿಂದ ದತ್ತು ಕೇಂದ್ರ ಆರಂಭಿಸಲಾಗಿದೆ. ಜೊತೆಗೆ ಸರ್ಕಾರದಿಂದಲೇ ಮತ್ತೊಂದು ದತ್ತು ಕೇಂದ್ರ ಆರಂಭಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಇಂತಹ ದತ್ತು ಕೇಂದ್ರಗಳ ಮಕ್ಕಳನ್ನು ದತ್ತು ಪಡೆಯಲು ಅವಕಾಶವಿರುತ್ತದೆ. ಸರ್ಕಾರದ ಅಂತರ್ಜಾಲ (ಕಾರಾ) ತಾಣದ ಮೂಲಕ ಮಕ್ಕಳ ದತ್ತು ಪಡೆಯಲು ಅರ್ಜಿ ಸಲ್ಲಿಸಬಹುದು. ಮಕ್ಕಳ ದತ್ತು ಪಡೆಯುವ ವಿಧಾನಗಳ ಬಗ್ಗೆ ಮಾಹಿತಿ ಪಡೆಯಲು ಮೊ.ಸಂ. 94821 63177 ಅನ್ನು ಸಂಪರ್ಕಿಬಹುದು ಎಂದರು. ಮಕ್ಕಳ ಕಲ್ಯಾಣ ಸಮಿತಿಯ ಸವಿತಾಕುಮಾರಿ, ಹೆಚ್.ಟಿ.ಕಮಲಾ, ಧನಲಕ್ಷ್ಮಿ, ಉಷಾ, ಸಾಮಾಜಿಕ ಕಾರ್ಯಕರ್ತ ಮಹೇಂದ್ರ ಗೋಷ್ಠಿಯಲ್ಲಿದ್ದರು.

ವಿಶ್ವ ಮಧುಮೇಹ ದಿನಾಚರಣೆ: ಸುಯೋಗ್ ಆಸ್ಪತ್ರೆ ವತಿಯಿಂದ ಇಂದು ವಾಕಥಾನ್ ಮೂಲಕ ಜಾಗೃತಿ

ಮೈಸೂರು, ನ.15– ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ವತಿಯಿಂದ ನಾಳೆ(ನ.16) ಬೆಳಗ್ಗೆ 7ಕ್ಕೆ ವಾಕಥಾನ್ ಮೂಲಕ ಜಾಗೃತಿ ಹಮ್ಮಿಕೊಳ್ಳಲಾಗಿದೆ. ಆಸ್ಪತ್ರೆ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ಏರ್ಪಡಿಸಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಹಾಗೂ ಎಂಡೋಕ್ರೈನಾಲಜಿಸ್ಟ್ ಡಾ.ರಘು ಅವರು ಸಕ್ಕರೆ ಕಾಯಿಲೆಗೆ ಕಾರಣಗಳು ಅದರಿಂದಾಗುವ ದುಷ್ಪರಿಣಾಮಗಳ ಕುರಿತು ಉಪನ್ಯಾಸ ನೀಡಲಿದ್ದಾರೆ. ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್‌ನ ಅಧ್ಯಕ್ಷ ಎನ್.ನಂಜಪ್ಪ, ಆಸ್ಪತ್ರೆ ಕಾರ್ಯಾಧ್ಯಕ್ಷ ಹೆಚ್.ಎಸ್.ರಮೇಶ್ ಚಂದ್ರ ಹಾಗೂ ಪದಾಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

ವಾಟ್ಸಾಪ್ ಇಂಡಿಯಾ ಮುಖ್ಯಸ್ಥ ಅಭಿಜಿತ್ ಬೋಸ್, ಮೆಟಾ ನೀತಿ ಮುಖ್ಯಸ್ಥ ರಾಜೀವ್ ರಾಜೀನಾಮೆ

ನವದೆಹಲಿ: ವಾಟ್ಸಾಪ್ ಇಂಡಿಯಾ ಮುಖ್ಯಸ್ಥ ಅಭಿಜಿತ್ ಬೋಸ್ ಮತ್ತು ಮೆಟಾ ಸಾರ್ವಜನಿಕ ನೀತಿ ಮುಖ್ಯಸ್ಥ ರಾಜೀವ್ ಅಗರ್ವಾಲ್ ಅವರು ತಮ್ಮ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ ಎಂದು ಸಾಮಾಜಿಕ ಮಾಧ್ಯಮ ಪ್ರಮುಖ ಮೆಟಾ ಮಂಗಳವಾರ ತಿಳಿಸಿದೆ. ಮೆಟಾ ಜಗತ್ತಿನಾದ್ಯಂತ 11,000 ಉದ್ಯೋಗಿಗಳನ್ನು ವಜಾಗೊಳಿಸಿದ ಒಂದು ವಾರದಲ್ಲಿಯೇ ಈ ಬೆಳವಣಿಗೆ ನಡೆದಿದೆ.



ಪ್ರಸ್ತುತ ಭಾರತದಲ್ಲಿ ವಾಟ್ಸಾಪ್ ಸಾರ್ವಜನಿಕ ನೀತಿಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಶಿವನಾಥ್ ತುಕ್ರಾಲ್ ಅವರಿಗೆ ಕಂಪನಿಯು ಮೆಟಾ ಇಂಡಿಯಾ ಸಾರ್ವಜನಿಕ ನೀತಿಯ ಜವಾಬ್ದಾರಿ ನೀಡಿದೆ.

"ಭಾರತದಲ್ಲಿ ನಮ್ಮ ಮೊದಲ ವಾಟ್ಸಾಪ್ ಮುಖ್ಯಸ್ಥರಾಗಿ ಅಭಿಜಿತ್ ಬೋಸ್ ಅವರ ಅದ್ಭುತ ಕೊಡುಗೆಗಳನ್ನು ನೀಡಿದ್ದು, ನಾನು ಅವರಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ಅವರ ಉದ್ಯಮಶೀಲ ಪ್ರಯತ್ನವು ನಮ್ಮ ತಂಡವು ಲಕ್ಷಾಂತರ ಜನರು ಮತ್ತು ವ್ಯವಹಾರಗಳಿಗೆ ಪ್ರಯೋಜನಕಾರಿಯಾದ ಹೊಸ ಸೇವೆಗಳನ್ನು ನೀಡಲು ಸಹಾಯ ಮಾಡಿದೆ" ಎಂದು ವಾಟ್ಸಾಪ್ ಮುಖ್ಯಸ್ಥ ವಿಲ್ ಕ್ಯಾಥ್‌ಕಾರ್ಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಫೆಬ್ರವರಿ 2019 ರಲ್ಲಿ ವಾಟ್ಸಾಪ್ ಇಂಡಿಯಾ ಮೊದಲ ಮುಖ್ಯಸ್ಥರಾಗಿ ಬೋಸ್ ಅಧಿಕಾರ ವಹಿಸಿಕೊಂಡಿದ್ದರು.









